ಶುಕ್ರವಾರ, ಸೆಪ್ಟೆಂಬರ್ 29, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 270 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಬಾನದಾರಿಯಲ್ಲಿ' ಗಣೇಶ್! ಗೋಲ್ಡನ್ ಸ್ಟಾರ್ ಸಂದರ್ಶನ



ಆಳ-ಅಗಲ
ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ತುಂಬಿರುವ ಹೂಳೆಷ್ಟು...

ಶೇ 1ರವರೆಗೆ ಇಳಿದ ಸೆನ್ಸೆಕ್ಸ್, ನಿಫ್ಟಿ 10

ಕ್ರೌರ್ಯಕ್ಕೆ ನಲುಗಿದ್ದ ಬಾಲಕಿ ಸ್ಥಿತಿ ಗಂಭೀರ 7

ಸೆನ್ಸೆಕ್ಸ್	ನಿಫ್ಟಿ	₹/$
65,508 ▼	19,523 ▼	83.19 ▲

ಕಾವೇರಿ ನೀರಿಗಾಗಿ ಎರಡನೇ ಬಂದ್ ಇಂದು • ವ್ಯಾಪಾರ–ವಹಿವಾಟು ಸ್ಥಗಿತ

ಬಂದ್‌ಗೆ ಸರ್ಕಾರದ ನಿರ್ಬಂಧ

ಎಲ್ಲೆಲ್ಲಿ ಶಾಲಾ–ಕಾಲೇಜು ರಜೆ

ಬೆಂಗಳೂರು ನಗರ • ಬೆಂಗಳೂರು ಗ್ರಾಮಾಂತರ • ಮೈಸೂರು • ಮಂಡ್ಯ • ರಾಮನಗರ • ಚಾಮರಾಜನಗರ • ಹಾಸನ ಜಿಲ್ಲೆಯ ಹಾಸನ • ಅರಕಲಗೂಡು • ಚನ್ನರಾಯಪಟ್ಟಣ • ಬೇಲೂರು • ಸಕಲೇಶಪುರ • ಆಲೂರು ತಾಲ್ಲೂಕುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವುದನ್ನು ವಿರೋಧಿಸಿ ಸೆ. 29ರಂದು (ಶುಕ್ರವಾರ) ಕರೆ ನೀಡಿರುವ ಕರ್ನಾಟಕ ಬಂದ್ ವೇಳೆ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಪೊಲೀಸರು, ಹಲವು ಸಂಘಟನೆಗಳ ಹೋರಾಟಗಾರರಿಗೆ ಗುರುವಾರ 'ಎಚ್ಚರಿಕೆ'ಯ ನೋಟಿಸ್ ನೀಡಿದ್ದಾರೆ.

ಆದಾಗ್ಯೂ, ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಬಂದ್ ಬಿಸಿ ಹೆಚ್ಚು ತಟ್ಟುವ ಸಾಧ್ಯತೆ ಇದೆ. ಈ ಜಿಲ್ಲೆಗಳಲ್ಲಿ ರೈಲುಗಳನ್ನು ತಡೆದು ಹಾಗೂ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ವಾಹನಗಳನ್ನು ಅಡ್ಡಗಟ್ಟಿ ಪ್ರತಿಭಟನೆ ನಡೆಸುವುದಾಗಿ ಸಂಘಟನೆಗಳು ಘೋಷಿಸಿವೆ. ರಾಜ್ಯದ ಹಲವು ಜಿಲ್ಲೆಗಳ ಸಂಘಟನೆಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿವೆ. ಬೆಳಿಗ್ಗೆ 6 ಗಂಟೆಗೆ ಬಂದ್ ಶುರುವಾಗಲಿದ್ದು, ಸಂಜೆ 6 ಗಂಟೆಯವರೆಗೂ ಇರಲಿದೆ.


ಏತನ್ಮಧ್ಯೆ, ಬಲವಂತದ ಬಂದ್‌ಗೆ ಕಡಿವಾಣ ಹಾಕಲು ಮುಂದಾಗಿರುವ ಸರ್ಕಾರ ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ಸರ್ಕಾರ, ಸಾರಿಗೆ ನಿಗಮಗಳ ನೌಕರರಿಗೆ ಹಾಜರಾತಿಯನ್ನು ಕಡ್ಡಾಯ ಮಾಡಿದೆ. ಹೀಗಾಗಿ, ಕೆಎಸ್‌ಆರ್‌ಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಕೆಕೆಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳು ಶುಕ್ರವಾರ ಯಥಾಪ್ರಕಾರ ಸಂಚಾರ ಆರಂಭಿಸಲಿವೆ. ಪರಿಸ್ಥಿತಿ ನೋಡಿಕೊಂಡು ಸಂಚಾರ ಮುಂದುವರಿಕೆ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮೂಲಗಳು ಹೇಳಿವೆ.

ಎಲ್ಲಿಯೇ ಬಲವಂತವಾಗಿ ಬಂದ್ ಮಾಡಲು ಮುಂದಾದರೆ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿ ನೋಟಿಸ್ ನೀಡಲಾಗಿದೆ. ಅಹಿತಕರ ಘಟನೆಗೆ ಆಸ್ಪದ ಕೊಡದಂತೆ ಪೊಲೀಸ್ ಪಹರೆಯನ್ನು ಹೆಚ್ಚಿಸಲಾಗಿದೆ.

ಬೆಂಗಳೂರಿನ ಹಲವು ಹೋರಾಟಗಾರರಿಗೆ ನೋಟಿಸ್ ಕಳುಹಿಸಿರುವ ಪೊಲೀಸರು, 'ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿ ಯಾವ ಭಾಗದಲ್ಲೂ ಧರಣಿ, ಪ್ರತಿಭಟನೆ, ಮೆರವಣಿಗೆ ಮಾಡಬಾರದು. ಆಕಸ್ಮಾತ್, ಮಾಡಿದರೆ ಅದರಿಂದ ಉಂಟಾಗುವ ನಷ್ಟಕ್ಕೆ ನೀವೇ (ಹೋರಾಟಗಾರರು/ ಸಂಘಟಕರು) ಹೊಣೆಗಾರರು. ನಿಮ್ಮ ವಿರುದ್ಧವೇ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ನೋಟಿಸ್‌ನಲ್ಲಿ ಎಚ್ಚರಿಸಿದ್ದಾರೆ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಚಿತ್ರರಂಗದ ಹೋರಾಟಕ್ಕೆ ಶಿವರಾಜ್‌ಕುಮಾರ್ ನೇತೃತ್ವ



ಕರ್ನಾಟಕ ಬಂದ್‌ಗೆ ಕನ್ನಡ ಚಿತ್ರರಂಗ ಸಂಪೂರ್ಣ ಬೆಂಬಲ ನೀಡಲಿದೆ. ನಟ ಶಿವರಾಜ್‌ಕುಮಾರ್ ನೇತೃತ್ವದಲ್ಲಿ ಚಿತ್ರರಂಗದ ಎಲ್ಲ ಸಂಘಟನೆಗಳು ಒಟ್ಟಾಗಿ ಶುಕ್ರವಾರ ಸಾಂಕೇತಿಕ ಪ್ರತಿಭಟನೆಯನ್ನೂ ನಡೆಸಲಿವೆ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್‌.ಎಂ. ಸುರೇಶ್ ತಿಳಿಸಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರ ನೇತೃತ್ವದ ತಂಡವು ಶಿವರಾಜ್‌ಕುಮಾರ್ ನಿವಾಸಕ್ಕೆ ತೆರಳಿ ಈ ಬಗ್ಗೆ ಮಾತುಕತೆ ನಡೆಸಿತು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಎನ್‌.ಎಂ. ಸುರೇಶ್, 'ವಾಣಿಜ್ಯ ಮಂಡಳಿ ಕಚೇರಿ ಬಳಿ ಬೆಳಿಗ್ಗೆ 11 ಗಂಟೆಗೆ ಶಿವರಾಜ್‌ಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದ್ದು, ಹಲವು ಕಲಾವಿದರು ಭಾಗಿಯಾಗುತ್ತಾರೆ. ಶುಕ್ರವಾರ ಸಂಜೆಯವರೆಗೆ ಯಾವುದೇ ಸಿನಿಮಾ ಪ್ರದರ್ಶನ ಇರುವುದಿಲ್ಲ. ಚಿತ್ರೀಕರಣ ಕೂಡ ಸ್ಥಗಿತಗೊಂಡಿರುತ್ತದೆ' ಎಂದು ಹೇಳಿದರು.

ಬಂದ್‌ಗೆ ಅವಕಾಶವಿಲ್ಲ:ಡಿಕೆಶಿ

'ಪ್ರತಿಭಟನೆ ಮಾಡಲು ಯಾರಿಗೂ ನಾವು ಅಡ್ಡಿ ಮಾಡುವುದಿಲ್ಲ. ಆದರೆ, ಬಂದ್ ಮಾಡಲು ಅವಕಾಶ ಇಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. 'ಬಂದ್ ವೇಳೆ ಸಾರ್ವಜನಿಕರಿಗೆ ರಕ್ಷಣೆ ಕೊಟ್ಟೇ ಕೊಡುತ್ತೇವೆ. ಬಂದ್ ವಿಚಾರವಾಗಿ ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳು ಒಂದಷ್ಟು ಸೂಚನೆಗಳನ್ನು ನೀಡಿವೆ. ಅದನ್ನು ಪಾಲಿಸಬೇಕು' ಎಂದರು.

'ರಾಜಕೀಯ ಕಾರಣದ ಬಂದ್ ಅನಗತ್ಯ'

'ತಮಿಳುನಾಡಿಗೆ ನೀರು ಬಿಡುಗಡೆ ಮಾಡುತ್ತಿರುವುದನ್ನು ವಿರೋಧಿಸಿ ಕರ್ನಾಟಕ ಬಂದ್ ಮಾಡುವ ಅಗತ್ಯ ಇಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಕರ್ನಾಟಕ ಬಂದ್ ಬೇಡವೆಂದು ಸಂಘಟನೆಗಳಿಗೆ ಮನವಿ ಮಾಡಿದ್ದೇವೆ. ಆದರೆ, ಪ್ರತಿಭಟನೆ ಮಾಡಬಹುದು. ಪ್ರತಿಭಟನೆ ಅವರ ಹಕ್ಕು. ಕೋರ್ಟ್ ಕೂಡ ಬಂದ್ ಮಾಡಬಾರದು ಎಂದು ಹೇಳಿದೆ. ವಿರೋಧ ಪಕ್ಷಗಳು ರಾಜಕೀಯ ಕಾರಣಕ್ಕೆ ಬಂದ್‌ಗೆ ಬೆಂಬಲ ಕೊಡುತ್ತಿವೆ. ಇಂತಹ ಸಂದರ್ಭದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೋಗಬಾರದು' ಎಂದರು.

'ಮಂಗಳವಾರ ನಡೆದ ಬೆಂಗಳೂರು ಬಂದ್‌ನಿಂದ ಅಂದಾಜು ₹1 ಸಾವಿರ ಕೋಟಿಯಿಂದ 2 ಸಾವಿರ ಕೋಟಿಯಷ್ಟು ನಷ್ಟವಾಗಿದೆ. ಗುರುವಾರ ರಜೆಯಾಗಿದ್ದು ಶುಕ್ರವಾರವೂ ಬಂದ್ ಮಾಡಿದರೆ ಮತ್ತಷ್ಟು ಸಮಸ್ಯೆ ಆಗಲಿದೆ. ಸ್ವಯಂಪ್ರೇರಿತವಾಗಿ ಸಂಘಟನೆಗಳು ಬಂದ್‌ಗೆ ಕರೆ ನೀಡಿವೆಯಾ ಅಥವಾ ಬೇರೆಯವರು ಒತ್ತಡ ಹೇರುತ್ತಿದ್ದಾರಾ ಗೊತ್ತಿಲ್ಲ' ಎಂದು ಬಿಜೆಪಿ ಹಾಗೂ ಜೆಡಿಎಸ್ ವಿರುದ್ಧ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದರು.

ಭದ್ರತೆಗೆ ಪೊಲೀಸ್ ಪಡೆ

250 ಕೆಎಸ್‌ಆರ್‌ಪಿ ತುಕಡಿಗಳು

5 ತುಕಡಿ (600 ಶಸ್ತ್ರಸಜ್ಜಿತ ಸಿಬ್ಬಂದಿ) ಕ್ಷಿಪ್ರ ಕಾರ್ಯಪಡೆ (ಆರ್‌ಎಎಫ್)

15,000 ಗೃಹ ರಕ್ಷಕರು

ನಗರ ಸಶಸ್ತ್ರ ಮೀಸಲು ಪಡೆ – ಜಿಲ್ಲಾವಾರು ತುಕಡಿಗಳು

ಜಿಲ್ಲಾ ಸಶಸ್ತ್ರ ಮೀಸಲು ಪಡೆ – ಜಿಲ್ಲಾವಾರು ತುಕಡಿಗಳು

ಶೂಟರ್‌ಗಳ ಗುರಿಗೆ ಚಿನ್ನದ ಗರಿ

19th Asian Games Hangzhou 2022

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಗುರುವಾರವೂ ಭಾರತದ ಪದಕ ಬೇಟೆ ಮುಂದುವರಿಯಿತು. ಒಂದು ಚಿನ್ನ ಸೇರಿದಂತೆ ಮೂರು ಪದಕಗಳನ್ನು ಭಾರತದ ಕ್ರೀಡಾಪಟುಗಳು ಜಯಿಸಿದರು.



ಚಿನ್ನ

ಶೂಟಿಂಗ್
ಪುರುಷರ 10 ಮೀಟರ್ಸ್ ಏರ್ ಪಿಸ್ತೂಲ್
ಸರಬ್ಜೋತ್‌ಸಿಂಗ್, ಅರ್ಜುನ್ ಸಿಂಗ್ ಚೀಮಾ ಮತ್ತು ಶಿವ ನರ್ವಾಲ್
ಪಾಯಿಂಟ್ಸ್: **1,734**



ಕಂಚು

ಈಕ್ವೆಸ್ಟ್ರಿಯನ್
ವೈಯಕ್ತಿಕ ಡ್ರೆಸಾಜ್
ಅನುಷ್ ಅಗರವಾಲ್
ಕುದುರೆ: ಅಸ್ಟ್ರೈಡ್ ಎಟ್ರೊ
ಅಂಕ: **73.030**

ಇತಿಹಾಸದಲ್ಲಿ ಭಾರತಕ್ಕೆ ಈ ವಿಭಾಗದಲ್ಲಿ ಒಲಿದ ಮೊಟ್ಟಮೊದಲ ಪದಕ.



ಬೆಳ್ಳಿ

ವುಶು
ಮಹಿಳೆಯರ 60 ಕೆ.ಜಿ. ಸಾಂಡಾ
ನವೊರೆಮ್ ರೋಶಿಬಿನಾ ದೇವಿ
ಫೈನಲ್: ಚೀನಾದ ವು ಷಿಯೋವಿ 2–0ಯಿಂದ ಗೆದ್ದರು

ಟೆನಿಸ್: ಪುರುಷರ ಡಬಲ್ಸ್ ಫೈನಲ್: ರಾಮಕುಮಾರ್ ರಾಮನಾಥನ್–ಸಾಕೇತ್ ಮೈನೇನಿ

ಮಿಶ್ರ ಡಬಲ್ಸ್ ಸೆಮಿಗೆ: ರೋಹನ್ ಬೋಪಣ್ಣ–ಋತುಜಾ ಭೋಸಲೆ

ಸ್ಕ್ವಾಷ್: ಸೆಮಿಫೈನಲ್‌ಗೆ ಪುರುಷರ ಮತ್ತು ಮಹಿಳಾ ತಂಡ

ಪುಟ 11

ಮಣಿಪುರ: ಹಿಂಸಾಚಾರ, ಜಿಲ್ಲಾಧಿಕಾರಿ ಕಚೇರಿ ಧ್ವಂಸ

ಇಂಫಾಲ್ (ಪಿಟಿಐ): ಮೈತೇಯಿ ಸಮುದಾಯಕ್ಕೆ ಸೇರಿದ ಇಬ್ಬರು ವಿದ್ಯಾರ್ಥಿಗಳ ಹತ್ಯೆ ಖಂಡಿಸಿ ಮಣಿಪುರ ರಾಜಧಾನಿ ಇಂಫಾಲ್‌ನಲ್ಲಿ ಗುರುವಾರ ಬೆಳಿಗ್ಗೆವರೆಗೆ ಹಿಂಸಾತ್ಮಕ ಪ್ರತಿಭಟನೆ ನಡೆದಿದೆ. ಉದ್ರಿಕ್ತರ ಗುಂಪು ಜಿಲ್ಲಾಧಿಕಾರಿ ಕಚೇರಿಯನ್ನು ಧ್ವಂಸಗೊಳಿಸಿದೆ. ಎರಡು ವಾಹನಗಳಿಗೆ ಬೆಂಕಿ ಹಚ್ಚಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜುಲೈನಲ್ಲಿ ನಾಪತ್ತೆಯಾಗಿದ್ದ ಇಬ್ಬರು ವಿದ್ಯಾರ್ಥಿಗಳ ಮೃತದೇಹಗಳ ಚಿತ್ರಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ನಂತರ ವಿದ್ಯಾರ್ಥಿಗಳು ಪ್ರತಿಭಟನೆ ಕೈಗೊಂಡಿದ್ದಾರೆ. ಮಂಗಳವಾರ ಬೆಳಿಗ್ಗೆಯಿಂದ ಇಂಫಾಲ್‌ನಲ್ಲಿ ಹಿಂಸಾಚಾರ ಭುಗಿಲೆದ್ದಿದೆ.

ಉರಿಪೊಕ್, ಯೈಸ್ಕುಲ್, ಸಗೋಲ್‌ಬಂಡ್ ಮತ್ತು ತೇರಾ ಪ್ರದೇಶಗಳಲ್ಲಿ ಪ್ರತಿಭಟನಕಾರರು ಬುಧವಾರ ರಾತ್ರಿ ಭದ್ರತಾ ಸಿಬ್ಬಂದಿಯೊಂದಿಗೆ ಘರ್ಷಣೆಗೆ ಇಳಿದಿದ್ದರು. ಪರಿಸ್ಥಿತಿ ನಿಯಂತ್ರಿಸಲು ಭದ್ರತಾ ಪಡೆಗಳು ಅಶ್ರುವಾಯು ಪ್ರಯೋಗಿಸಿದರು.

ವಸತಿ ಪ್ರದೇಶಗಳಿಗೆ ಭದ್ರತಾ ಸಿಬ್ಬಂದಿ ಪ್ರವೇಶಿಸುವುದನ್ನು ತಡೆಯಲು ಪ್ರತಿಭಟನಕಾರರು ರಸ್ತೆಗಳಲ್ಲಿ ಟೈರ್‌ಗಳನ್ನು ಸುಟ್ಟರು. ಬಂಡೆ ಗಾತ್ರದ ಕಲ್ಲುಗಳನ್ನು ರಸ್ತೆಗೆ ಉರುಳಿಸಿದರು. ಕಬ್ಬಿಣದ ಪೈಪ್‌ಗಳನ್ನು ಅಡ್ಡಲಾಗಿ ಹಾಕಿದರು ಎಂದು ಅಧಿಕಾರಿಗಳು ವಿವರಿಸಿದ್ದಾರೆ.

7ನೇ ಪುಟ ನೋಡಿ



ಪ್ರತಿಭಟನಕಾರರು ಬೆಂಕಿ ಹಚ್ಚಿದ್ದರಿಂದ ಹಾನಿಗೀಡಾಗಿರುವ ವಾಹನ –ಪಿಟಿಐ ಚಿತ್ರ

ದೌರ್ಜನ್ಯ ಪರಿಶೀಲಿಸಲು ಸಮಿತಿ ರಚನೆ

ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ಮೇಲೆ ಭದ್ರತಾ ಪಡೆಗಳು ದೌರ್ಜನ್ಯ ನಡೆಸಿವೆ ಎಂಬ ದೂರುಗಳನ್ನು ಪರಿಶೀಲಿಸಲು ಮಣಿಪುರ ಸರ್ಕಾರ ಗುರುವಾರ ಸಮಿತಿ ರಚಿಸಿದೆ.

ಐಜಿಪಿ (ಆಡಳಿತ) ಕೆ. ಜಯಂತ, ಸಮಿತಿಯ ನೇತೃತ್ವ ವಹಿಸುವರು. ಸಮಿತಿಯು ವರದಿಯನ್ನು ಆದಷ್ಟು ಶೀಘ್ರ ಸಲ್ಲಿಸಲಿದೆ ಎಂದು ಡಿಜಿಪಿ ನೀಡಿದ ಆದೇಶ ಹೇಳಿದೆ. 'ಇಂಫಾಲ್‌ನಲ್ಲಿ ಕೆಲ ದಿನಗಳಿಂದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಭದ್ರತಾಪಡೆಗಳು ದೌರ್ಜನ್ಯ ಎಸಗಿವೆ ಎಂಬ ವಿವಿಧ ವರದಿಗಳು/ ಆರೋಪಗಳು ಬಂದಿವೆ' ಎಂದು ತಿಳಿಸಿದೆ.

> ರಾಜ್ಯದಲ್ಲಿನ ಜನಾಂಗೀಯ ಘರ್ಷಣೆಗೆ ಆಫ್‌ಸ್ಪಾ ಪರಿಹಾರ ಆಗಲಾರದು. ಈ ಪ್ರದೇಶದ ವೈವಿಧ್ಯತೆಯನ್ನು ಕೇಂದ್ರ ಮತ್ತು ಮಣಿಪುರ ಸರ್ಕಾರ ಗೌರವಿಸಬೇಕು
>
> **ಇರೋಮ್ ಶರ್ಮಿಳಾ,** ಮಾನವ ಹಕ್ಕುಗಳ ಹೋರಾಟಗಾರ್ತಿ

'ಮುಂದಿನ 30ಗಳಿನಿಂದ 10 ಕೆ.ಜಿ. ಅಕ್ಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್ನಭಾಗ್ಯ ಯೋಜನೆಯಡಿ ಮುಂದಿನ ತಿಂಗಳಿಂದ 10 ಕೆ.ಜಿ. ಅಕ್ಕಿ ನೀಡಲಾಗುವುದು. ಬರಪೀಡಿತವೆಂದು ಘೋಷಿಸಿದ ತಾಲ್ಲೂಕುಗಳಲ್ಲಿ ಮೊದಲು ಹಂಚಿಕೆ ಮಾಡಲಾಗುವುದು' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಸದ್ಯ 5 ಕೆ.ಜಿ. ಅಕ್ಕಿ ಜೊತೆಗೆ ಹೆಚ್ಚುವರಿಯಾಗಿ 5 ಕೆ.ಜಿ. ಅಕ್ಕಿ ನೀಡಲು ಅಗತ್ಯವಾದ ಅಕ್ಕಿ ಸಿಗದ ಕಾರಣ, ಅಕ್ಕಿ ಬದಲು ಹಣ ನೀಡಲಾಗುತ್ತಿದೆ' ಎಂದರು.

'ಅಕ್ಕಿ ಖರೀದಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಮುಂದಿನ ತಿಂಗಳಿನಿಂದ ಹಣದ ಬದಲು ಅಕ್ಕಿ ನೀಡುತ್ತೇವೆ. ಪಡಿತರ ಚೀಟಿಯಲ್ಲಿರುವ ಎಲ್ಲ ಸದಸ್ಯರಿಗೂ ತಲಾ 10 ಕೆ.ಜಿ. ಅಕ್ಕಿ ಹಂಚಿಕೆ ಮಾಡಲಾಗುವುದು' ಎಂದೂ ತಿಳಿಸಿದರು.

ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿಕೆ

'ಲಿಂಗಾಯತ ಅಧಿಕಾರಿಗಳದ್ದು ನಾಯಿಪಾಡು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾರೇ ಮುಖ್ಯಮಂತ್ರಿಯಾದರೂ ಅವರ ಸಮುದಾಯದ ಅಧಿಕಾರಿಗಳಿಗೆ ಒಳ್ಳೆಯ ಸ್ಥಾನ ಕೊಡುತ್ತಾರೆ. ಈಗ ನಮ್ಮ ಸಮುದಾಯದವರು ಮೂಲೆಗುಂಪು ಆಗಿದ್ದಾರೆ. ಹೀಗಾಗಿ ವೀರಶೈವ ಲಿಂಗಾಯತ ಅಧಿಕಾರಿಗಳ ಸ್ಥಿತಿ ನಾಯಿಪಾಡು ಆಗಿದೆ' ಎಂದು ಕಾಂಗ್ರೆಸ್ ಶಾಸಕರೂ ಆಗಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿದರು.

ವೀರಶೈವ ಲಿಂಗಾಯತ ಮಹಾಸಭಾದ ಬೆಂಗಳೂರು ನಗರ ಜಿಲ್ಲಾ ಘಟಕದ ವತಿಯಿಂದ ಗುರುವಾರ ಹಾನಗಲ್ ಕುಮಾರೇಶ್ವರ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

'ಎಸ್. ನಿಜಲಿಂಗಪ್ಪ ಅವರಿಂದ ಹಿಡಿದು ಯಡಿಯೂರಪ್ಪ, ಬಸವರಾಜ ಬೊಮ್ಮಾಯಿವರೆಗೆ ನಮ್ಮ ಸಮುದಾಯದ ಮುಖ್ಯಮಂತ್ರಿಗಳು ಇದ್ದಾಗ ವೀರಶೈವ ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಆಯಕಟ್ಟಿನ ಸ್ಥಾನ ಇರುತ್ತಿತ್ತು' ಎಂದು ಅವರು ಹೇಳಿದರು.

'ನಾವು ಒಗ್ಗಟ್ಟಾಗಿ ಇಲ್ಲದ ಕಾರಣ ಅನ್ಯಾಯಕ್ಕೆ ಒಳಗಾಗುತ್ತಿದ್ದೇವೆ. ಉಪಪಂಗಡಗಳೆಲ್ಲ ಒಂದಾಗಬೇಕು. ಎಲ್ಲ ಸಮುದಾಯದವರೂ ತಮ್ಮ ತಮ್ಮ ಸಮಾಜ ಮುಂದಕ್ಕೆ ಬರಬೇಕು ಎಂದು ಬಯಸುತ್ತಾರೆ. ರಾಜ್ಯದ ದೊಡ್ಡ ಸಮುದಾಯವಾಗಿರುವ ನಾವೂ ಹಿಂದಕ್ಕೆ ಉಳಿಯಬಾರದು' ಎಂದರು.

'ಪ್ರತಿಭಾ ಪುರಸ್ಕಾರ ನೀಡುವ ಮೂಲಕ ಕಲಿಕೆಗೆ ಉತ್ತೇಜನ ನೀಡಬಹುದು. ಶಾಮನೂರು ಶಿವಶಂಕರಪ್ಪ ವಿದ್ಯಾರ್ಥಿ ವೇತನ ಎಂದು ₹ 5 ಕೋಟಿ ಠೇವಣಿ ಇಟ್ಟು, ಅದರ ಬಡ್ಡಿಯನ್ನು ವಿದ್ಯಾರ್ಥಿ ವೇತನವಾಗಿ ಪ್ರತಿವರ್ಷ ನೀಡುತ್ತಿದ್ದೇನೆ. ಆದರೆ, ವಿದ್ಯಾರ್ಥಿ ವೇತನದಿಂದ ದೊಡ್ಡ ಮಟ್ಟದ ಉಪಯೋಗವೇನು ಆಗುವುದಿಲ್ಲ. ಉತ್ತಮವಾಗಿ ಕಲಿಯುವವರನ್ನು ಗುರುತಿಸಿ ಅವರನ್ನು ದತ್ತು ತೆಗೆದುಕೊಂಡು ಅವರ ವಿದ್ಯಾಭ್ಯಾಸದ ಪೂರ್ಣ ವೆಚ್ಚವನ್ನು ಭರಿಸುವ ಕೆಲಸ ಮಾಡಬೇಕು. ನಮ್ಮ ಸಮುದಾಯದಲ್ಲಿ ಶ್ರೀಮಂತರಿಗೇನು ಕಡಿಮೆ ಇಲ್ಲ. ಒಂದಿಬ್ಬರ ಪೂರ್ಣ ವೆಚ್ಚ ಭರಿಸಲು ನಾನು ಸಿದ್ಧ ಇದ್ದೇನೆ' ಎಂದು ಹೇಳಿದರು.





ಭಾವೈಕ್ಯ ಭೋಜನ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಗಣಪತಿ ಪೆಂಡಾಲ್‌ನಲ್ಲಿ ಈದ್ ಮಿಲಾದ್ ಅಂಗವಾಗಿ ಮುಸ್ಲಿಮರು ಗುರುವಾರ ದಾಸೋಹ ಏರ್ಪಡಿಸಿದ್ದರು (ಎಡಚಿತ್ರ) ಈದ್ ಮಿಲಾದ್ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಮುಸ್ಲಿಮರಿಗೆ ಕೊಪ್ಪಳದಲ್ಲಿ ಹಿಂದೂ ಮಹಾಮಂಡಳಿಯ ಸದಸ್ಯರು ಉಪಾಹಾರ, ಸಿಹಿ ಉಣಬಡಿಸಿದರು –ಪ್ರಜಾವಾಣಿ ಚಿತ್ರಗಳು


ಎಇಡಿ ಸಾಧನ ಖರೀದಿ ಪ್ರಕ್ರಿಯೆ ನಡೆಸುತ್ತಿರುವ ಆರೋಗ್ಯ ಇಲಾಖೆ

ಸಾರ್ವಜನಿಕ ಸ್ಥಳದಲ್ಲೂ ಹೃದಯ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ಹಠಾತ್ ಹೃದಯಾಘಾತದಿಂದ ಸಂಭವಿಸುತ್ತಿರುವ ಮರಣಗಳನ್ನು ತಡೆಯಲು ಮುಂದಾಗಿರುವ ಆರೋಗ್ಯ ಇಲಾಖೆ, ರಾಜ್ಯದಾದ್ಯಂತ ಬಸ್ ನಿಲ್ದಾಣಗಳು ಸೇರಿ ಸಾರ್ವಜನಿಕ ಸ್ಥಳಗಳಲ್ಲಿಯೂ 'ಆಟೊಮೇಟೆಡ್ ಎಕ್ಸ್‌ಟರ್ನಲ್ ಡಿಫೈಬ್ರಿಲ್ಲೇಟರ್ಸ್' (ಎಇಡಿ) ಸಾಧನಗಳನ್ನು ಶೀಘ್ರದಲ್ಲಿಯೇ ಅಳವಡಿಸಲಿದೆ.

ವ್ಯಕ್ತಿಗೆ ಹೃದಯಾಘಾತವಾದ 90 ನಿಮಿಷಗಳಲ್ಲಿ ತುರ್ತು ಚಿಕಿತ್ಸೆ ಅಗತ್ಯ. ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 96 ಸಾವಿರ ಮಂದಿ ಹಠಾತ್ ಹೃದಯಾಘಾತದಿಂದ ಮೃತಪಡುತ್ತಿದ್ದಾರೆ. ಆದ್ದರಿಂದ ಹೃದಯಾಘಾತ ಸಂಭವಿಸಿದ ನಿಗದಿತ ಅವಧಿಯೊಳಗೆ ಚಿಕಿತ್ಸೆ ಒದಗಿಸಲು 'ಸ್ಟೆಮಿ' (ಹೃದಯ ಸ್ನಾಯುವಿನ ಸೋಂಕು ನಿವಾರಣೆ) ಯೋಜನೆ ಜಾರಿಗೊಳಿಸಿರುವ ಇಲಾಖೆ, ಈ ಯೋಜನೆಯಡಿ ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾನ ನಿಲ್ದಾಣ, ನ್ಯಾಯಾಲಯ, ಶಾಪಿಂಗ್ ಮಾಲ್‌ಗಳು ಸೇರಿ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಎಇಡಿ ಸಾಧನ ಅಳವಡಿಸಲು ಮುಂದಾಗಿದೆ. ಈ ಸಾಧನ ಖರೀದಿ ಪ್ರಕ್ರಿಯೆ ನಡೆಯುತ್ತಿದ್ದು, ನಿಗದಿತ ಸ್ಥಳದಲ್ಲಿನ ಸಿಬ್ಬಂದಿಗೆ ಸಾಧನಗಳ ನಿರ್ವಹಣೆ ಬಗ್ಗೆ ತರಬೇತಿ ನೀಡಲಾಗುತ್ತದೆ.



'ಸ್ಟೆಮಿ' ಯೋಜನೆಯಡಿ ಮೊದಲ ಹಂತದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ಘಟಕವನ್ನು ಕಾರ್ಯಾಚರಣೆಯ ಕೇಂದ್ರಗಳನ್ನಾಗಿ ಬಳಸಿಕೊಂಡು, ಆಸ್ಪತ್ರೆಗಳಲ್ಲಿ ಸೇವೆ ನೀಡಲಾಗುತ್ತಿದೆ. ಸದ್ಯ 10 ಜಿಲ್ಲಾ ಆಸ್ಪತ್ರೆಗಳು, 24 ತಾಲ್ಲೂಕು ಆಸ್ಪತ್ರೆಗಳು, 10 ಜನರಲ್ ಆಸ್ಪತ್ರೆಗಳು ಮತ್ತು ಒಂದು ಉಪ ಜಿಲ್ಲಾ ಆಸ್ಪತ್ರೆ ಸ್ಪೋಕ್ (ಜಾಲ) ಆಸ್ಪತ್ರೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳಲ್ಲಿ ಎಇಡಿ ಸಾಧನ ಸೇರಿ ಸ್ಟೆಮಿ ಕಿಟ್ ಅಳವಡಿಸಲಾಗಿದೆ. ನಿಂತು ಹೋದ ಎದೆ ಬಡಿತವನ್ನು ಪುನರಾರಂಭಿಸಲು ಇದು ಸಹಕಾರಿಯಾಗಲಿದೆ. ಯೋಜನೆಯಡಿ ಎದೆನೋವು ಕಾಣಿಸಿಕೊಂಡ 56,484 ಮಂದಿಗೆ ಹಾಗೂ ಹೃದಯಾಘಾತಕ್ಕೆ ಒಳಗಾದ 877 ಮಂದಿಗೆ ಚಿಕಿತ್ಸೆ ಒದಗಿಸಲಾಗಿದೆ.

ಎರಡನೇ ಹಂತದಲ್ಲಿ ಅಳವಡಿಕೆ: ಯೋಜನೆಯಡಿ ಎರಡನೇ ಹಂತದಲ್ಲಿ 41 ಆಸ್ಪತ್ರೆಗಳು ಸೇರ್ಪಡೆಯಾಗಲಿವೆ. ಈ ಹಂತದಲ್ಲಿಯೇ ಸಾರ್ವಜನಿಕ ಸ್ಥಳಗಳಲ್ಲಿ ಎಇಡಿ ಸಾಧನ ಅಳವಡಿಕೆ ಮಾಡಲಾಗುತ್ತದೆ. ಹೃದಯಾಘಾತಕ್ಕೆ ಒಳಗಾದ ವ್ಯಕ್ತಿಗೆ ತಕ್ಷಣ ಈ ಸಾಧನದ ಮೂಲಕ ತುರ್ತು ಚಿಕಿತ್ಸೆ ನೀಡಿ, ಪ್ರಕರಣದ ಗಂಭೀರತೆ ಆಧಾರದಲ್ಲಿ ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ಕಳುಹಿಸಲಾಗುತ್ತದೆ.

ಇದಕ್ಕೆ ಅಗತ್ಯವಿರುವ ₹ 5 ಕೋಟಿಗೆ ಅನುಮೋದನೆ ದೊರೆತಿದೆ. ವ್ಯಕ್ತಿಗೆ ತಲಾ ₹ 25 ಸಾವಿರ ಮೌಲ್ಯದ ಚುಚ್ಚುಮದ್ದುಗಳನ್ನೂ ಉಚಿತವಾಗಿ ಯೋಜನೆಯಡಿ ಬರುವ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತದೆ.

'ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬಸ್ ನಿಲ್ದಾಣಗಳು ಸೇರಿ ವಿವಿಧೆಡೆ ಎಇಡಿ ಸಾಧನ ಅಳವಡಿಸಲಾಗುತ್ತದೆ. ಅಲ್ಲಿನ ಸಿಬ್ಬಂದಿ ಸಾಧನ ನಿರ್ವಹಿಸುತ್ತಾರೆ. ಜೀವಸಾರ್ಥಕತೆ ಸಂಸ್ಥೆ ಮೂಲಕ ತರಬೇತಿ ನೀಡಲಾಗುತ್ತದೆ. ಮುಂದಿನ ತಿಂಗಳು ತರಬೇತಿ ಪ್ರಾರಂಭವಾಗುವ ಸಾಧ್ಯತೆಯಿದೆ' ಎಂದು ಇಲಾಖೆಯ ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪನಿರ್ದೇಶಕ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

> ಹಠಾತ್ ಹೃದಯಾಘಾತಕ್ಕೆ ಒಳಗಾದವರಿಗೆ ತುರ್ತು ಚಿಕಿತ್ಸೆ ಒದಗಿಸಲು ಸಾರ್ವಜನಿಕ ಸ್ಥಳಗಳಲ್ಲಿಯೂ ಎಇಡಿ ಸಾಧನ ಅಳವಡಿಸಲಾಗುವುದು. ಹೆಚ್ಚಿನ ಚಿಕಿತ್ಸೆಯನ್ನು ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತದೆ
>
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಆಹಾರ ಕ್ಷಾಮ ನಿವಾರಿಸಿದ 'ಹಸಿರು ಕ್ರಾಂತಿ'ಯ ಹರಿಕಾರ

ಚೆನ್ನೈ (ಪಿಟಿಐ/ರಾಯಿಟರ್ಸ್/ಎಎಫ್‌ಪಿ): ಎಂ.ಎಸ್. ಸ್ವಾಮಿನಾಥನ್ ಮುಂದಾಳತ್ವದಲ್ಲಿ ಆರು ದಶಕಗಳ ಹಿಂದೆ ದೇಶದಲ್ಲಿ ನಡೆದ 'ಹಸಿರು ಕ್ರಾಂತಿ'ಯು ದೇಶವು ಆಹಾರ ಕ್ಷಾಮವನ್ನು ಮೆಟ್ಟಿ ನಿಲ್ಲಲು ನೆರವಾಯಿತು. ಗೋಧಿಯ ಉತ್ಪಾದನೆಯಲ್ಲಿ ದೇಶವು ವಿಶ್ವದ ಮುಂಚೂಣಿ ಸ್ಥಾನಕ್ಕೆ ಬಂದು ನಿಂತಿತು. ದೇಶವು ಬಹುಕಾಲದಿಂದ ಎದುರಿಸುತ್ತಿದ್ದ ಆಹಾರದ ಕೊರತೆಯು 'ಹಸಿರು ಕ್ರಾಂತಿ'ಯ ಕಾರಣದಿಂದಾಗಿ ನಿವಾರಣೆ ಆಯಿತು.

ಸ್ವಾಮಿನಾಥನ್ ಅವರು ಯುವ ವಿಜ್ಞಾನಿಯಾಗಿದ್ದಾಗ ಅಕಾಡೆಮಿಕ್ ವಲಯದಲ್ಲಿ ಹಾಗೂ ಸರ್ಕಾರದಲ್ಲಿ ಆಕರ್ಷಕ ಹುದ್ದೆಗಳನ್ನು ಪಡೆಯುವ ಅವಕಾಶ ಇತ್ತು. ಆದರೆ ಅವುಗಳನ್ನು ನಿರಾಕರಿಸಿ, ಕೃಷಿ ಸಂಶೋಧನೆಯಲ್ಲಿ ತೊಡಗಿಸಿಕೊಂಡರು. ಗೋಧಿಯ ಮಿಶ್ರ ತಳಿಗಳ ಅಭಿವೃದ್ಧಿಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡರು. ಈ ತಳಿಗಳ ಕಾರಣದಿಂದಾಗಿ 15 ವರ್ಷಗಳ ಅವಧಿಯಲ್ಲಿ ಭಾರತಕ್ಕೆ ಗೋಧಿ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಿಸಲು ಸಾಧ್ಯವಾಯಿತು.

ಸ್ವಾಮಿನಾಥನ್ ಅವರಿಗೆ 1952ರಲ್ಲಿ ಅಮೆರಿಕದ ಕೇಂಬ್ರಿಜ್ ವಿಶ್ವವಿದ್ಯಾಲಯವು ಡಾಕ್ಟರೇಟ್ ನೀಡಿತು. ಅಮೆರಿಕದಲ್ಲಿ ಪ್ರೊಫೆಸರ್ ಆಗುವ ಅವಕಾಶ ಅವರಿಗೆ ಇತ್ತು. ಆದರೆ, ಸ್ವತಂತ್ರಗೊಂಡಿದ್ದ ಭಾರತಕ್ಕೆ ಮರಳಿ, 'ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳುವ' ನಿರ್ಣಯವನ್ನು ಕೈಗೊಂಡರು.

1943ರಲ್ಲಿ ಬಂಗಾಳವು ಕಂಡ ಭೀಕರ ಕ್ಷಾಮದ ಪರಿಣಾಮವಾಗಿ 38 ಲಕ್ಷ ಜನ ಹಸಿವಿನಿಂದ ಸತ್ತಿದ್ದು ಆಗಿನ್ನೂ ನೆನಪಿನಿಂದ ಮಾಸಿರಲಿಲ್ಲ. ಸ್ವಾಮಿನಾಥನ್ ಅವರು ಅಮೆರಿಕದ ಕೃಷಿ ತಜ್ಞ ನಾರ್ಮನ್ ಬೊರ್ಲಾಗ್ ಅವರೊಂದಿಗೆ ಸಹಭಾಗಿತ್ವದಲ್ಲಿ ಕೆಲಸ ಆರಂಭಿಸಿದರು.

1966ರಲ್ಲಿ ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರದಲ್ಲಿ ಸ್ವಾಮಿನಾಥನ್ ಅವರಿಗೆ ತಮ್ಮ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಮುಕ್ತ ಸ್ವಾತಂತ್ರ್ಯ ನೀಡಲಾಗಿತ್ತು.


7ನೇ ಪುಟ ನೋಡಿ

ಸ್ವಾಮಿನಾಥನ್ ನಿಧನ

ಚೆನ್ನೈ (ಪಿಟಿಐ): ಖ್ಯಾತ ಕೃಷಿ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್ (98) ಗುರುವಾರ ಇಲ್ಲಿನ ತಮ್ಮ ನಿವಾಸದಲ್ಲಿ ಬೆಳಿಗ್ಗೆ 11.15ಕ್ಕೆ ನಿಧನರಾದರು. ಅವರಿಗೆ ಮೂವರು ಪುತ್ರಿಯರು ಇದ್ದಾರೆ.

ಪುತ್ರಿಯರ ಪೈಕಿ ಒಬ್ಬರಾದ ಡಾ. ಸೌಮ್ಯಾ ಸ್ವಾಮಿನಾಥನ್ ಅವರು ಈ ಹಿಂದೆ ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ವಿಜ್ಞಾನಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಕೃಷಿ ಲೋಕದಲ್ಲಿ ಅನುಕರಣೀಯ ವ್ಯಕ್ತಿಯಾಗಿ ಬೆಳೆದಿದ್ದ ಸ್ವಾಮಿನಾಥನ್ ಅವರು ಕೆಲವು ಕಾಲದಿಂದ ವಯೋಸಹಜ ಕಾಯಿಲೆಗಳಿಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು.

ಸ್ವಾಮಿನಾಥನ್ ಅವರ ಅಂತ್ಯಸಂಸ್ಕಾರವು ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದ್ದಾರೆ. ಮೂಲಗಳ ಪ್ರಕಾರ ಶನಿವಾರ ಅವರ ಅಂತ್ಯಸಂಸ್ಕಾರ ನಡೆಯಲಿದೆ.



ಎಂ.ಎಸ್. ಸ್ವಾಮಿನಾಥನ್ (ಎಎಫ್‌ಪಿ ಚಿತ್ರ)

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಗರದ ದಕ್ಷಿಣ ಭಾಗದಲ್ಲಿ ವಾಹನ ಸಂಚಾರ ಸುಗಮಗೊಳಿಸಲು ಬಿಬಿಎಂಪಿ ಯೋಜನೆ

ದಟ್ಟಣೆ ನಿವಾರಣೆಗೆ ಎರಡು ಮೇಲ್ಸೇತುವೆ

• ಆರ್. ಮಂಜುನಾಥ್

ಬೆಂಗಳೂರು: ನಗರದ ದಕ್ಷಿಣ ಭಾಗದ ವಾಹನ ಸಂಚಾರ ಸುಗಮಗೊಳಿಸಲು ಎರಡು ಯೋಜನೆಗಳನ್ನು ಕೈಗೆತ್ತಿಗೊಳ್ಳಲು ಬಿಬಿಎಂಪಿ ಮುಂದಾಗಿದೆ.

ಕೃಷ್ಣರಾವ್ ಪಾರ್ಕ್‌ನಿಂದ ಕನಕಪುರ ರಸ್ತೆವರೆಗೆ ಇಂಟಿಗ್ರೇಟೆಡ್ ಮೇಲ್ಸೇತುವೆ, ಬನಶಂಕರಿ ಮಾರುಕಟ್ಟೆಯಿಂದ ಸಾರಕ್ಕಿ ಜಂಕ್ಷನ್‌ವರೆಗೆ ಅಂಡರ್‌ಪಾಸ್ ನಿರ್ಮಿಸಲು ಹಾಗೂ ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದ ವರೆಗೆ ಸ್ಟೀಲ್ ಬ್ರಿಡ್ಜ್ ನಿರ್ಮಾಣಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಂದಾಗಿದೆ.

ಬನಶಂಕರಿ ಜಂಕ್ಷನ್‌ನಲ್ಲಿ ಈಗ ಹೆಚ್ಚಿನ ಸಂಚಾರ ದಟ್ಟಣೆ ಇದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಲಿದೆ. ಇದೂ ಸೇರಿದಂತೆ ಐದಾರು ಜಂಕ್ಷನ್‌ಗಳಲ್ಲಿ ಸಿಗ್ನಲ್ ರಹಿತ ಸಂಚಾರಕ್ಕೆ ಅನುವಾಗುವಂತೆ ಮೇಲ್ಸೇತುವೆ ನಿರ್ಮಿಸಬೇಕು ಎಂದು ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಉಪ ಮುಖ್ಯಮಂತ್ರಿಗೆ ಮನವಿ ಮಾಡಿಕೊಂಡಿದ್ದರು.

ಈ ಮನವಿ ಮೇರೆಗೆ ಬನಶಂಕರಿ ಮೇಲ್ಸೇತುವೆ ನಿರ್ಮಾಣದ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಗಸ್ಟ್ 18ರಂದು ಸ್ಥಳ ಪರಿಶೀಲನೆ ನಡೆಸಿದ್ದರು. ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದ್ದರು. ಇದರಂತೆ ಸೆ.25ರಂದು ಯೋಜನೆಯ ಡಿಪಿಆರ್‌ಗೆ ಬಿಬಿಎಂಪಿ ಟೆಂಡರ್ ಆಹ್ವಾನಿಸಿದೆ. ಅ.3ರೊಳಗೆ ಟೆಂಡರ್ ಸಲ್ಲಿಸಲು ಅವಕಾಶವಿದ್ದು, ಅ.9ರಂದು ಟೆಂಡರ್ ಪ್ರಕ್ರಿಯೆ ಮುಗಿಯಲಿದೆ. ಇದಾದ 30 ದಿನಗಳಲ್ಲಿ ಡಿಪಿಆರ್ ಸಲ್ಲಿಸಲು ಅವಕಾಶವಿದೆ.

ಕೃಷ್ಣರಾವ್ ಪಾರ್ಕ್, ಟಾಟಾ ಸಿಲ್ಕ್ ಫಾರ್ಮ್ ಜಂಕ್ಷನ್, ಯಡಿಯೂರು ಜಂಕ್ಷನ್, ಯಡಿಯೂರು ಹೆರಿಗೆ ಆಸ್ಪತ್ರೆ ಜಂಕ್ಷನ್, ಜೆಎಸ್‌ಎಸ್ ಕಾಲೇಜು ಜಂಕ್ಷನ್, ಹುಣಸೆಮರ ಜಂಕ್ಷನ್, ಬನಶಂಕರಿ ದೇವಸ್ಥಾನ, ಕನಕಪುರ ರಸ್ತೆವರೆಗೆ ಇಂಟಿಗ್ರೇಟೆಡ್ ಮೇಲ್ಸೇತುವೆ ನಿರ್ಮಿಸುವ ಯೋಜನೆ ಇದೆ ಎಂದು ಬಿಬಿಎಂಪಿ ಎಂಜಿನಿಯರ್‌ಗಳು ತಿಳಿಸಿದರು.



ಎಲ್‌ಐಸಿ ಕೇಂದ್ರ ಕಚೇರಿ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ

ಜೆ.ಸಿ. ರಸ್ತೆ 'ಎಲಿವೇಟೆಡ್ ಕಾರಿಡಾರ್'ಗೆ ಅಸ್ತು!

ಬಿಜೆಪಿ ಸರ್ಕಾರದಲ್ಲಿ ಅಮೃತ ನಗರೋತ್ಥಾನ ಅನುದಾನದಲ್ಲಿ ನಿರ್ಮಿಸಲು ಯೋಜಿಸಲಾಗಿದ್ದ ಜೆ.ಸಿ. ರಸ್ತೆ 'ಎಲಿವೇಟೆಡ್ ಕಾರಿಡಾರ್' ನಿರ್ಮಾಣಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೆ.6ರಂದು ಅನುಮೋದನೆ ನೀಡಿದ್ದಾರೆ. ಕೂಡಲೇ ಟೆಂಡರ್ ಕರೆದು, ಯೋಜನೆ ಅನುಷ್ಠಾನಕ್ಕೆ ಸೂಚಿಸಿದ್ದಾರೆ.

'ಈ ಹಿಂದೆ ಸ್ಟೀಲ್ ಮೇಲ್ಸೇತುವೆಗೆ ವಿರೋಧ ವ್ಯಕ್ತವಾಗಿತ್ತು. ಹೀಗಾಗಿ, ಹಿಂದೆ ತಯಾರಿಸಲಾಗಿದ್ದ ಡಿಪಿಆರ್‌ನಲ್ಲೇ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಅಮೃತ ನಗರೋತ್ಥಾನ ಯೋಜನೆಯಲ್ಲಿ 'ಎಲಿವೇಟೆಡ್ ಕಾರಿಡಾರ್'ಗೆ ₹213 ಕೋಟಿ ಅನುದಾನ ನೀಡಲಾಗಿದೆ' ಎಂದು ಯೋಜನೆ ವಿಭಾಗದ ಎಂಜಿನಿಯರ್ ತಿಳಿಸಿದರು.

ಮಿನರ್ವ ವೃತ್ತದಿಂದ ಜೆ.ಸಿ. ರಸ್ತೆ ಮಾರ್ಗವಾಗಿ ಹಡ್ಸನ್ ವೃತ್ತದವರೆಗೆ 'ಎಲಿವೇಟೆಡ್ ಕಾರಿಡಾರ್' ನಿರ್ಮಾಣವಾಗಲಿದೆ. ದ್ವಿಮುಖ ನಾಲ್ಕು ಪಥದ ಮೇಲ್ಸೇತುವೆ ಇದಾಗಿದೆ. ಮಿನರ್ವ ವೃತ್ತ, ಭಾರತ್ ಟಾಕೀಸ್, ಶಿವಾಜಿ ಟಾಕೀಸ್, ಟೌನ್‌ಹಾಲ್, ಎಲ್‌ಐಸಿ ಕೇಂದ್ರ ಕಚೇರಿ, ಹಲಸೂರು ಗೇಟ್ ಪೊಲೀಸ್ ಠಾಣೆ ಜಂಕ್ಷನ್ ಹಾಗೂ ಹಡ್ಸನ್ ವೃತ್ತಗಳು ಸಿಗ್ನಲ್ ಮುಕ್ತವಾಗಲಿವೆ. ವಿ.ವಿ ಪುರ ಹಾಗೂ ಆರ್.ವಿ ರಸ್ತೆಯಿಂದ ಮೇಲೇರಿ, ಕೆ.ಜಿ. ರಸ್ತೆ, ಕಸ್ತೂರಬಾ ರಸ್ತೆಗೆ ಇಳಿಯಬಹುದು. ನೃಪತುಂಗ ರಸ್ತೆಯಲ್ಲಿ ಮೇಲೇರಿ ಆರ್.ವಿ. ರಸ್ತೆಯಲ್ಲಿ ಇಳಿಯಬಹುದು. ಕಳೆದ ವರ್ಷ ಜುಲೈನಲ್ಲೇ ಈ ಯೋಜನೆ ಆರಂಭವಾಗಬೇಕಿತ್ತು.

ಜೆ.ಸಿ. ರಸ್ತೆ ಮೇಲ್ಸೇತುವೆ ಕಾಮಗಾರಿ 2009ರಲ್ಲಿಯೇ ಆರಂಭವಾಗಬೇಕಿತ್ತು. ಆಗ ಯೋಜನೆ ಮೊತ್ತ ₹86 ಕೋಟಿಯಾಗಿತ್ತು. 2013–14ರಲ್ಲಿ ರಾಜ್ಯ ಸರ್ಕಾರ ಯೋಜನೆಗೆ ಸಮ್ಮತಿ ಸೂಚಿಸಿತ್ತು. 2016ರ ನಗರೋತ್ಥಾನ ಯೋಜನೆಯಲ್ಲಿ ಸ್ಟೀಲ್ ಮೇಲ್ಸೇತುವೆಗೆ ₹135 ಕೋಟಿ ವೆಚ್ಚ ಮಾಡಲು ಅನುಮೋದನೆ ನೀಡಲಾಗಿತ್ತು. ಇದೀಗ, 'ಎಲಿವೇಟೆಡ್ ಕಾರಿಡಾರ್'ಗೆ ವೆಚ್ಚ ದುಪ್ಪಟ್ಟಾಗಲಿದೆ.

ಸುದ್ದಿ 2 ನಿಮಿಷ

ಇಂದು ಮೆಟ್ರೊ ನೇರಳೆ ಮಾರ್ಗದಲ್ಲಿ ವ್ಯತ್ಯಯ

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದಲ್ಲಿ ಕೆಂಗೇರಿಯಿಂದ ಚಲ್ಲಘಟ್ಟ ಮೆಟ್ರೊ ನಿಲ್ದಾಣದವರೆಗೆ ಸೆ.29ರಂದು ಸುರಕ್ಷತಾ ಪರಿಶೀಲನೆ ಹಮ್ಮಿಕೊಳ್ಳಲಾಗಿದೆ. ಅಂದು ಮೈಸೂರು ರಸ್ತೆ ನಿಲ್ದಾಣ–ಕೆಂಗೇರಿ ನಿಲ್ದಾಣಗಳ ನಡುವೆ ಮಾತ್ರವಲ್ಲ, ಕೃಷ್ಣರಾಜಪುರ–ಗರುಡಾಚಾರ್ ಪಾಳ್ಯ ನಡುವೆಯೂ ರೈಲು ಸೇವೆ ಸ್ಥಗಿತಗೊಳ್ಳಲಿದೆ.

ಮೆಟ್ರೊ ರೈಲ್ವೆ ಸುರಕ್ಷತಾ ಆಯುಕ್ತರು (ದಕ್ಷಿಣ ವೃತ್ತ) ಪರಿಶೀಲನೆ ನಡೆಸಲಿದ್ದಾರೆ. ಅದಕ್ಕಾಗಿ ಪೂರ್ಣದಿನ ರೈಲು ಸ್ಥಗಿತಗೊಳ್ಳಲಿದೆ. ಬೈಯಪ್ಪನಹಳ್ಳಿ–ಮೈಸೂರು ರಸ್ತೆವರೆಗೆ ಮತ್ತು ವೈಟ್‌ಫೀಲ್ಡ್–ಗರುಡಾಚಾರ್‌ಪಾಳ್ಯ ನಡುವೆ ಎಂದಿನಂತೆ ಮೆಟ್ರೊ ರೈಲು ಸಂಚರಿಸಲಿವೆ. ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನೇರಳೆ ಮಾರ್ಗದ ಇನ್ನೊಂದು ತುದಿಯಲ್ಲಿರುವ ಕೆಂಗೇರಿ–ಚಲ್ಲಘಟ್ಟ ಮಾರ್ಗಗಳ ಪರಿಶೀಲಿಸಿ, ಸುರಕ್ಷತೆ ಬಗ್ಗೆ ಹಸಿರು ನಿಶಾನೆ ತೋರಿಸಿದ ಬಳಿಕ ಎರಡೂ ಕಡೆಗಳಲ್ಲಿ ರೈಲು ಸಂಚಾರಕ್ಕೆ ದಿನ ನಿಗದಿಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಾಳೆ ಜಲಮಂಡಳಿ ಫೋನ್ ಇನ್

ಬೆಂಗಳೂರು: ಜಲಮಂಡಳಿಯು ಇದೇ ಶನಿವಾರ ಬೆಳಿಗ್ಗೆ 9ರಿಂದ 10.30ರವರೆಗೆ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಕುಡಿಯುವ ನೀರಿನ ಸಮಸ್ಯೆ, ಒಳಚರಂಡಿ ನೀರು ಹೊರಬರುತ್ತಿರುವುದು, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆ ಸೇರಿ ವಿವಿಧ ಕುಂದು ಕೊರತೆಗಳ ಬಗ್ಗೆ ಮಂಡಳಿಯ ಅಧ್ಯಕ್ಷ ಎನ್. ಜಯರಾಮ್ ಅವರ ಜತೆಗೆ ಮಾತನಾಡಿ, ಬಗೆಹರಿಸಿಕೊಳ್ಳಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ, ದೂರನ್ನು ನೀಡಬಹುದು ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಸಂಪರ್ಕ ಸಂಖ್ಯೆ: 080 22945119

'ಇಸ್ಲಾಂ ಹಿಂಸೆ ಬಿತ್ತುತ್ತದೆ ಎನ್ನುವುದೇ ಮಿಥ್ಯೆ'

'ನನ್ನ ಅರಿವಿನ ಪ್ರವಾದಿ' ಪುಸ್ತಕ ಬಿಡುಗಡೆಗೊಳಿಸಿ ಚಿರಂಜೀವಿ ಸಿಂಘ್ ಅಭಿಮತ



ಬೆಂಗಳೂರಿನಲ್ಲಿ ಗುರುವಾರ ಶಾಂತಿ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ನನ್ನ ಅರಿವಿನ ಪ್ರವಾದಿ' ಪುಸ್ತಕವನ್ನು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಬಿಡುಗಡೆ ಮಾಡಿದರು. ಮಹಮ್ಮದ್ ಕುಂಞ, ಕೃತಿಕಾರ ಯೋಗೀಶ್ ಮಾಸ್ಟರ್, ವಸುಂಧರಾ ಭೂಪತಿ ಇದ್ದಾರೆ –ಪ್ರಜಾವಾಣಿ ಚಿತ್ರ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ಲಾಂ ಎಂದರೆ ಹಿಂಸೆ ಬಿತ್ತುವ ಧರ್ಮ ಎನ್ನುವ ಜಗತ್ತಿನ ಮಿಥ್ಯೆ ಹೋಗಲಾಡಿಸಿ, ಶಾಂತಿಯ ಧರ್ಮ ಎನ್ನುವ ಸತ್ಯದ ದರ್ಶನವನ್ನು 'ನನ್ನ ಅರಿವಿನ ಪ್ರವಾದಿ' ಮಾಡಿಸುತ್ತದೆ ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಹೇಳಿದರು.

ಮಂಗಳೂರಿನ ಶಾಂತಿ ಪ್ರಕಾಶನ ಗುರುವಾರ ಹಮ್ಮಿಕೊಂಡಿದ್ದ ಯೋಗೀಶ್ ಮಾಸ್ಟರ್ ಅವರ 'ನನ್ನ ಅರಿವಿನ ಪ್ರವಾದಿ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಬಸವ ತತ್ವಕ್ಕೂ ಕುರಾನ್‌ಗೂ ಸಾಕಷ್ಟು ಹೋಲಿಕೆ ಇದೆ. ಎರಡೂ ಧರ್ಮಗಳ ಸಾರವೂ ಒಂದೇ ಆಗಿದೆ. ಯೋಗೀಶ್ ಮಾಸ್ಟರ್ ಅವರ ಪುಸ್ತಕ ಪೈಗಂಬರ್ ಅವರ ಅನುಭವದ ಕಥನವಾಗಿದೆ. ಎಲ್ಲ ಧರ್ಮಗಳನ್ನೂ ಗೌರವಿಸುವ, ಸ್ಮರಿಸುವ ಧ್ಯೇಯಗಳನ್ನು ಒಳಗೊಂಡಿದೆ. ಸರ್ವ ಜನಾಂಗದ ಶಾಂತಿಯ ತೋಟದ ಪರಿಕಲ್ಪನೆ ಕಟ್ಟಿಕೊಟ್ಟಿದೆ. ಓದುವ ಅಭ್ಯಾಸ ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ ಪುಸ್ತಕವನ್ನು ಡಿಜಿಟಲ್ ಆವೃತ್ತಿಗಳ ಮೂಲಕವೂ ಜನರಿಗೆ ತಲುಪಿಸುವ ಕೆಲಸ ಆಗಬೇಕು ಎಂದರು.

ಲೇಖಕಿ ವಸುಂಧರಾ ಭೂಪತಿ ಮಾತನಾಡಿ, ಉತ್ತಮ ನಡೆಯ ಮೂಲಕ ಅಪ್ಪಂದಿರು ಮಕ್ಕಳನ್ನು ತಿದ್ದಬೇಕು. ಸ್ನೇಹಿತರಂತೆ ಕಾಣಬೇಕು. ತ್ಯಾಗ ಸೌಹಾರ್ದ ಕಲಿಸಬೇಕು. ಮಕ್ಕಳ ಸುಳ್ಳುಗಳನ್ನು ಕ್ಷಮಿಸಬೇಕು. ಅಂತಹ ಮಕ್ಕಳು ಸಮಾಜಕ್ಕೆ ಉತ್ತಮ ಪ್ರಜೆಗಳಾಗುತ್ತಾರೆ ಎಂಬ ವಿವರಗಳನ್ನೂ ಪುಸ್ತಕ ದಾಖಲಿಸಿದೆ ಎಂದರು.

ಕೃತಿ ಕುರಿತು 'ಸುಧಾ' ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಮಾತನಾಡಿದರು. ಜಮಾತೆ ಇಸ್ಲಾಮೀ ಹಿಂದ್ ಕಾರ್ಯದರ್ಶಿ ಮಹಮದ್ ಕುಂಞ, ಲೇಖಕ ಯೋಗೀಶ್ ಮಾಸ್ಟರ್ ಉಪಸ್ಥಿತರಿದ್ದರು. ಶಾಂತಿ ಪ್ರಕಾಶನ ಅಧ್ಯಕ್ಷ ಮಹಮ್ಮದ್ ಸಾದ್ ಬೆಳಗಾಮಿ ಅಧ್ಯಕ್ಷತೆ ವಹಿಸಿದ್ದರು.

ಸಂಸದರ ರಾಜೀನಾಮೆಗೆ ಕರವೇ ಆಗ್ರಹ

ಬೆಂಗಳೂರು: 'ನಾಡು, ನುಡಿ, ಜಲದ ವಿಚಾರದಲ್ಲಿ ಬದ್ಧತೆ ಇಲ್ಲದ ನಮ್ಮ ರಾಜ್ಯದ ಸಂಸದರು ರಾಜೀನಾಮೆ ನೀಡಬೇಕು' ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ನಾರಾಯಣಗೌಡ ಆಗ್ರಹಿಸಿದರು.

'ಕಾವೇರಿ ನೀರು ವಿಚಾರದಲ್ಲಿ ತಮಿಳುನಾಡಿನ ಸಂಸದರು ಒಗ್ಗಟ್ಟಾಗಿದ್ದಾರೆ. ಎಲ್ಲದ್ದಕ್ಕೂ ಸಿದ್ಧರಾಗಿದ್ದಾರೆ. ಆದರೆ, ನಮ್ಮ ಸಂಸದರು ಅಧಿಕಾರಕ್ಕೆ ಅಂಟಿಕೊಂಡಿದ್ದಾರೆ. ನಾಡುನುಡಿ ವಿಚಾರದಲ್ಲಿ ಅಂಬರೀಶ್ ಅವರನ್ನು ಸ್ಮರಿಸಿಕೊಳ್ಳಬೇಕು. ಕಾವೇರಿಗಾಗಿ ಅವರು ಕೇಂದ್ರ ಸಚಿವ ಸ್ಥಾನಕ್ಕೇ ರಾಜೀನಾಮೆ ನೀಡಿದ್ದರು' ಎಂದರು.

'ಕನ್ನಡಪರ ಹೋರಾಟಗಾರರು ರಾಜ್ಯದ ಸಂಸದರ ಮನೆಗಳಿಗೆ ಮುತ್ತಿಗೆ ಹಾಕುವ ಮುನ್ನ ಅವರು ರಾಜೀನಾಮೆ ನೀಡಲಿ' ಎಂದು ಒತ್ತಾಯಿಸಿದರು.



'ಕಾವೇರಿ ನದಿ ನೀರಿನ ವಿಚಾರದಲ್ಲಿ ಮೌನ ವಹಿಸಿರುವ ರಾಜ್ಯದ ಸಂಸದರು ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯ (ಟಿ.ಎ. ನಾರಾಯಣಗೌಡ ಬಣ) ಕಾರ್ಯಕರ್ತೆಯರು ಗಾಂಧಿನಗರದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಗುರುವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು – ಪ್ರಜಾವಾಣಿ ಚಿತ್ರ

ಸ್ಟಾಲಿನ್ ಭೇಟಿಗೆ ಸಿಗದ ಅವಕಾಶ: ಲಹರ್ ಸಿಂಗ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ಕೊಳ್ಳದ ಜಲಾಶಯಗಳ ಸ್ಥಿತಿಗತಿ ಕುರಿತು ಮನವರಿಕೆ ಮಾಡಲು ಚೆನ್ನೈಗೆ ತೆರಳಿ 48 ಗಂಟೆ ಕಾದರೂ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಭೇಟಿಗೆ ಅವಕಾಶ ಸಿಗಲಿಲ್ಲ' ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯ ಹೇಳಿದರು.

'ಬೆಂಗಳೂರಿನ ಕುಡಿಯುವ ನೀರಿನ ಬಿಕ್ಕಟ್ಟು, ಕರ್ನಾಟಕದ ಬರ ಪರಿಸ್ಥಿತಿ ಬಗ್ಗೆ ಮನವರಿಕೆ ಮಾಡಿಕೊಡಲು, ಕಾವೇರಿ ನೀರು ಹಂಚಿಕೆ ಸಮಸ್ಯೆಯನ್ನು ಪ್ರಾದೇಶಿಕ ಸಂಘರ್ಷವಾಗಿ ನೋಡುವ ಬದಲು, ಮಾನವೀಯ ನೆಲೆಯಲ್ಲಿ ಪರಿಗಣಿಸುವಂತೆ ಒತ್ತಾಯಿಸುವುದು ನನ್ನ ಭೇಟಿಯ ಉದ್ದೇಶವಾಗಿತ್ತು' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಡಿಎಂಕೆ ಸಂಸದರು, ತಮಿಳುನಾಡು ನಾಯಕರ ಜತೆ ಚರ್ಚಿಸಿದೆ. ಅವರು ನನ್ನ ಸಲಹೆಗಳನ್ನು ಸ್ವೀಕರಿಸಿದರು. ಎರಡೂ ಸರ್ಕಾರಗಳು ಮುಕ್ತವಾಗಿ ಚರ್ಚಿಸಿದರೆ ಪರಿಹಾರ ದೊರೆಯುತ್ತದೆ ಎಂಬ ನಿಲುವನ್ನು ಅವರೆಲ್ಲರೂ ಹೊಂದಿದ್ದಾರೆ. ಹಾಗಾಗಿ, ಕರ್ನಾಟಕ, ತಮಿಳುನಾಡು ಮುಖ್ಯಮಂತ್ರಿಗಳು ಮಾತುಕತೆ ನಡೆಸಬೇಕು. ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಬೇಕು' ಎಂದರು.

ನ್ಯಾಯಾಲಯದ ಹೊರಗೆ ಈ ಸಮಸ್ಯೆ ಇತ್ಯರ್ಥ ಮಾಡಿಕೊಳ್ಳಬೇಕು ಎಂಬ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರ ಸಲಹೆ ಸ್ವಾಗತಾರ್ಹ ಎಂದು ಹೇಳಿದರು.

ಅಫ್ಗನ್ ರಾಯಭಾರ ಕಚೇರಿ ಹೇಳಿಕೆ ಪರಿಶೀಲನೆ: ಭಾರತ

ನವದೆಹಲಿ(ಪಿಟಿಐ): 'ಭಾರತದಲ್ಲಿನ ತನ್ನ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಲಾವುದು' ಎಂಬುದಾಗಿ ಅಫ್ಗಾನಿಸ್ತಾನದ ರಾಯಭಾರ ಕಚೇರಿ ಹೇಳಿದೆ ಎನ್ನಲಾದ ಮಾಹಿತಿಯ ವಿಶ್ವಾಸಾರ್ಹತೆಯನ್ನು ಪರಿಶೀಲಿಸಲು ಭಾರತ ಮುಂದಾಗಿದೆ ಎಂದು ಮೂಲಗಳು ಗುರುವಾರ ಹೇಳಿವೆ.

'ಭಾರತದಲ್ಲಿನ ಅಫ್ಗನ್ ರಾಯಭಾರಿ ಫರೀದ್ ಮಮುಂದ್ಜೆ ಅವರು ಕಳೆದ ಕೆಲ ತಿಂಗಳುಗಳಿಂದ ದೇಶದಿಂದ ಹೊರಗಿದ್ದಾರೆ. ಈ ಸಂದರ್ಭದಲ್ಲಿಯೇ ಇಂತಹ ಹೇಳಿಕೆ ಹರಿದಾಡುತ್ತಿದೆ. ಇದರ ವಿಶ್ವಾಸಾರ್ಹತೆಯನ್ನು ಪರಿಶೀಲಿಸಲಾಗುತ್ತಿದೆ' ಎಂದು ಇವೇ ಮೂಲಗಳು ಹೇಳಿವೆ.

ಫರೀದ್ ಅವರು ಈ ಹಿಂದಿನ ಅಧ್ಯಕ್ಷ ಅಶ್ರಫ್ ಘನಿ ನೇತೃತ್ವದ ಸರ್ಕಾರದಿಂದ ರಾಯಭಾರಿಯಾಗಿ ನೇಮಕಗೊಂಡಿದ್ದರು. 2021ರಲ್ಲಿ ಅಫ್ಗಾನಿಸ್ತಾನದ ಆಡಳಿತವನ್ನು ತಾಲಿಬಾನ್ ತನ್ನ ತೆಕ್ಕೆಗೆ ತೆಗೆದುಕೊಂಡ ನಂತರವೂ ಫರೀದ್ ಅವರೇ ರಾಯಭಾರಿಯಾಗಿ ಮುಂದುವರಿದಿದ್ದಾರೆ.

ಬೈಡನ್ ವಿರುದ್ಧ ವಾಗ್ದಂಡನೆ: ವಿಚಾರಣೆ ಶುರು

ವಾಷಿಂಗ್ಟನ್(ಎಪಿ): ಅಧ್ಯಕ್ಷ ಜೋ ಬೈಡನ್ ವಿರುದ್ಧ ಮಂಡನೆಯಾಗಿರುವ ವಾಗ್ದಂಡನೆ ನಿಲುವಳಿ ಕುರಿತ ವಿಚಾರಣೆಯನ್ನು ಅಮೆರಿಕದ ರಿಪಬ್ಲಿಕನ್ ಸಂಸದರು ಗುರುವಾರ ಆರಂಭಿಸಿದರು.

'ಸಂಸತ್‌ನ ಮೇಲುಸ್ತುವಾರಿ, ನ್ಯಾಯಾಂಗ ಕುರಿತ ಸಮಿತಿಗಳ ಅಧ್ಯಕ್ಷರು ವಿಚಾರಣೆ ಆರಂಭಿಸಿದ್ದು, ವಾಗ್ದಂಡನೆ ಪ್ರಕ್ರಿಯೆ ಒಳಗೊಂಡಿರುವ ಸಾಂವಿಧಾನಿಕ ಮತ್ತು ಕಾನೂನಾತ್ಮಕ ಪ್ರಶ್ನೆಗಳ ಕುರಿತು ಪರಿಶೀಲನೆ ನಡೆಸಿದರು' ಎಂದು ಮೂಲಗಳು ಹೇಳಿವೆ.



ಜೋ ಬೈಡನ್

ಪುತ್ರ ಹಂಟರ್ ಅವರು ವಿದೇಶಗಳಲ್ಲಿ ಹೊಂದಿರುವ ಉದ್ಯಮದೊಂದಿಗೆ ಅಧ್ಯಕ್ಷ ಬೈಡನ್ ಹೊಂದಿರುವ ನಂಟಿಗೆ ಸಂಬಂಧಿಸಿ ಈ ವಾಗ್ದಂಡನೆ ನಿಲುವಳಿ ಮಂಡಿಸಲಾಗಿದೆ.

'ಉದ್ಯಮದಲ್ಲಿ ಕುಟುಂಬಕ್ಕೆ ಲಾಭ ಮಾಡಿಕೊಡುವ ಸಲುವಾಗಿ ಬೈಡನ್ ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದರು ಎಂಬುದಕ್ಕೆ ಸಂಸದರ ಬಳಿ ಸಾಕಷ್ಟು ಸಾಕ್ಷ್ಯಗಳಿವೆ' ಎಂದು ಮೇಲುಸ್ತುವಾರಿ ಮತ್ತು ಉತ್ತರದಾಯಿತ್ವ ಸಮಿತಿ ಅಧ್ಯಕ್ಷ ಜೇಮ್ಸ್ ಕಾಮರ್ ಹೇಳಿದ್ದಾರೆ.

'ಬೈಡನ್ ಪುತ್ರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ, ಹಣಕಾಸು ವ್ಯವಹಾರ ಹಾಗೂ ಸಾಕ್ಷ್ಯಗಳನ್ನು ಸಮಿತಿಯು ಪರಿಶೀಲನೆ ನಡೆಸಲಿದೆ' ಎಂದೂ ಹೇಳಿದ್ದಾರೆ.

ಟೀಕೆ: 'ಪ್ರಸಕ್ತ ಹಣಕಾಸು ವರ್ಷ ಕೊನೆಗೊಳ್ಳಲು ಇನ್ನೂ 62 ಗಂಟೆಗಳು ಬಾಕಿ ಇವೆ. ಈಗ, ರಿಪಬ್ಲಿಕನ್ ಸಂಸದರು ವಾಗ್ದಂಡನೆ ನಿಲುವಳಿ ಕುರಿತ ವಿಚಾರಣೆಯನ್ನು ಆರಂಭಿಸಿದ್ದಾರೆ' ಎಂದು ಡೆಮಾಕ್ರಟಿಕ್ ಸಂಸದ ಜೆಮಿ ರಸ್ಕಿನ್ ಟೀಕಿಸಿದ್ದಾರೆ.

ನಗರದಲ್ಲಿ ಇಂದು

ವಾಹನ ಚಾಲಕರ ದಿನಾಚರಣೆ ಹಾಗೂ ಸಂಘದ ಮಹಾಸಭೆ: ಉದ್ಘಾಟನೆ: ವಂದಿತಾ ಶರ್ಮ, ಅಧ್ಯಕ್ಷತೆ: ಎನ್. ಶ್ರೀನಿವಾಸ್, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರದ ವಾಹನ ಚಾಲಕರ ಕೇಂದ್ರ ಸಂಘ, ಸ್ಥಳ: ಜಯಪ್ರಕಾಶ್ ನಾರಾಯಣ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.15

ಮುಖ್ಯಮಂತ್ರಿಗಳ ಪದಕ ಪ್ರದಾನ: ಸಿದ್ದರಾಮಯ್ಯ, ಅಧ್ಯಕ್ಷತೆ: ಈಶ್ವರ್ ಖಂಡ್ರೆ, ಉಪಸ್ಥಿತಿ: ಜಾವೇದ್ ಅಖ್ತರ್, ರಾಜೀವ್ ರಂಜನ್, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಮಧ್ಯಾಹ್ನ 3

ಐದನೇ ಸಂಗೀತ ಸಮ್ಮೇಳನ ಉದ್ಘಾಟನೆ: ಅಧ್ಯಕ್ಷತೆ: ಎಂ. ಅನಂತ್, ಮುಖ್ಯ ಅತಿಥಿಗಳು: ಎಂ.ಆರ್. ಸೀತಾರಾಂ, ರೇಖಾ ಲಕ್ಷ್ಮಣ್, ದಕ್ಷಿಣಾಮೂರ್ತಿ, ಸಂಗೀತ ಕಛೇರಿ: ಜಿ.ಎನ್. ನಾಗಮಣಿ ಶ್ರೀನಾಥ್, ಉಮ ಕುಮಾರ್, ಸಿಂಧು ಸುಚೇತನ್, ಅನಿರುದ್ಧ ಭಟ್, ಎಸ್.ಎನ್. ನಾರಾಯಣ ಮೂರ್ತಿ, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 5.30

'ಶ್ರೀ ರಾಮ ಕಿಂಕರ ಚರಿತಾಮೃತ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಸುರೇಶ್ ಶೆಟ್ಟಿ ಮುಡುಬೆಳ್ಳೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ 10



ಈದ್ ಮಿಲಾದ್ ಮೆರವಣಿಗೆಯಲ್ಲಿ ಯುವಕರು ಕುಣಿದು ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ



ಬೆಂಗಳೂರಿನ ಟ್ಯಾನರಿ ರಸ್ತೆಯಲ್ಲಿ ಗುರುವಾರ ಮುಸ್ಲಿಮರು ಈದ್ ಮಿಲಾದ್ ಹಬ್ಬದ ಅಂಗವಾಗಿ ಮೆರವಣಿಗೆ ನಡೆಸಿದರು ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಸಂಭ್ರಮದಿಂದ ನಡೆದ ಈದ್ ಮಿಲಾದ್



ಮಳೆ ಬಂದ ಕಾರಣ ಮಹಿಳೆಯರು, ಮಕ್ಕಳು ಛತ್ರಿ ಆಶ್ರಯದೊಂದಿಗೆ ಈದ್ ಮಿಲಾದ್ ಮೆರವಣಿಗೆಯನ್ನು ವೀಕ್ಷಿಸಿದರು



ಮೆರವಣಿಗೆ ಸಂದರ್ಭದಲ್ಲಿ ಮಳೆ ಬಂದಿದ್ದರಿಂದ ಕೆಲವರು ಟಾರ್ಪಲಿನ್ ಹೊದ್ದು ಮೆರವಣಿಗೆ ವೀಕ್ಷಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾದಿ ಮೊಹಮ್ಮದ್ ಅವರ ಜನ್ಮದಿನವನ್ನು ನೆನಪಿಸುವ ಈದ್ ಮಿಲಾದ್ ಹಬ್ಬವನ್ನು ಮುಸ್ಲಿಂ ಸಮುದಾಯವರು ಗುರುವಾರ ನಗರದಲ್ಲಿ ಸಂಭ್ರಮದಿಂದ ಆಚರಿಸಿದರು.

ಮುಸ್ಲಿಮರ ಮನೆಯಲ್ಲಿ ಬೆಳಿಗ್ಗೆಯಿಂದಲೇ ಸಂಭ್ರಮವಿತ್ತು. ಸಂಬಂಧಿಕರು ಹಾಗೂ ಸ್ನೇಹಿತರನ್ನು ಮನೆಗೆ ಆಹ್ವಾನಿಸಿ ಹಬ್ಬದ ಶುಭಾಶಯ ಕೋರಿದರು. ಹಲವರು ದವಸ-ಧಾನ್ಯ ಹಾಗೂ ನಗದು ದಾನ ಮಾಡಿದರು. ಶಿವಾಜಿನಗರ, ರಸೆಲ್ ಮಾರುಕಟ್ಟೆ, ಕೆ.ಆರ್. ಮಾರುಕಟ್ಟೆ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ಖರೀದಿಯೂ ಜೋರಾಗಿತ್ತು.

ನಗರದ ಮಸೀದಿ, ದರ್ಗಾ ಹಾಗೂ ಮದರಸಾಗಳಿಗೆ ವಿಶೇಷ ವಿದ್ಯುತ್ ಹಾಗೂ ಬಣ್ಣದ ಕಾಗದಗಳ ಅಲಂಕಾರ ಮಾಡಲಾಗಿತ್ತು. ವಿದ್ಯುತ್ ಬೆಳಕಿನಲ್ಲಿ ಮಸೀದಿಗಳು ಕಂಗೊಳಿಸುತ್ತಿದವು.

ಟ್ಯಾನರಿ ರಸ್ತೆಯಿಂದ ಶಿವಾಜಿನಗರಕ್ಕೆ ಮಿಲಾದ್ (ಜನ್ಮ ದಿನ) ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರು ಕೈಯಲ್ಲಿ ಬಲೂನ್‌ಗಳನ್ನು ಹಿಡಿದು ರಸ್ತೆಯುದ್ದಕ್ಕೂ ನೆರೆದಿದ್ದವರಿಗೆ ಶುಭಾಶಯ ಕೋರಿದರು. ಮೊಹಮ್ಮದ್ ಪೈಗಂಬರ್ ಅವರ ಸಂದೇಶಗಳ ಫಲಕಗಳನ್ನು ಹೊಂದಿದ್ದ ವಾಹನಗಳು ಗಮನಸೆಳೆದವು. ಮಕ್ಕಳು ಟಿಪ್ಪು ಸುಲ್ತಾನ್ ವೇಷ ಧರಿಸಿ ಮಿಂಚಿದರು.

ಕೆ.ಆರ್. ಮಾರುಕಟ್ಟೆ ಸಹಿತ ನಗರದ ವಿವಿಧ ಪ್ರದೇಶಗಳಲ್ಲಿ ಈದ್ ಮೆರವಣಿಗೆಗಳು ನಡೆದವು. ಕವ್ವಾಲಿಗಳನ್ನು ಹಾಡಲಾಯಿತು. ಸಾಮೂಹಿಕ ಪ್ರಾರ್ಥನೆಗಳು ನಡೆದವು.

ಈದ್ ಮಿಲಾದ್ ಹಬ್ಬದ ಅಂಗವಾಗಿ ಮುಸ್ಲಿಮರು ತಮ್ಮ ಮನೆಗಳಲ್ಲಿ ಪಾಯಸ, ಕಡುಬು ಹಾಗೂ ಇತರೆ ಸಿಹಿ ಪದಾರ್ಥ, ಬಿರಿಯಾನಿ ತಯಾರಿಸಿ ನೆರೆಹೊರೆಯವರಿಗೆ ಹಂಚಿದರು. ಪ್ರಮುಖ ಮಸೀದಿ ಹಾಗೂ ದರ್ಗಾಗಳಲ್ಲಿ ದಾನಿಗಳಿಂದ ಊಟ ವಿತರಣೆ ನಡೆಯಿತು.



ನಗರದ ಟ್ಯಾನರಿ ರಸ್ತೆಯಲ್ಲಿ ನಡೆದ ಈದ್ ಮಿಲಾದ್ ಮೆರವಣಿಗೆಯಲ್ಲಿ ಟಿಪ್ಪು ಸುಲ್ತಾನ್ ವೇಷಧಾರಿ ಮಗು ಗಮನ ಸೆಳೆಯಿತು

ಸಂಕ್ಷಿಪ್ತ ಸುದ್ದಿ

ಬಿಆರ್‌ಎಸ್ ನಾಯಕರು ಕಾಂಗ್ರೆಸ್ ಸೇರ್ಪಡೆ

ನವದೆಹಲಿ(ಪಿಟಿಐ): ತೆಲಂಗಾಣದ ಆಡಳಿತಾರೂಢ ಪಕ್ಷ ಬಿಆರ್‌ಎಸ್‌ನ ಇಬ್ಬರು ನಾಯಕರು ಗುರುವಾರ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

ವರ್ಷಾಂತ್ಯಕ್ಕೆ ವಿಧಾನಸಭೆಗೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆ ಗಮನಾರ್ಹವೆನಿಸಿದೆ. ಮಲ್ಕಾಜಗಿರಿ ಕ್ಷೇತ್ರದ ಶಾಸಕ ಮೈನಂಪಲ್ಲಿ ಹನುಮಂತರಾವ್ ಹಾಗೂ ಮಾಜಿ ಶಾಸಕ ವೇಮುಲ ವೀರೇಶಮ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮ್ಮುಖದಲ್ಲಿ ಅವರ ನಿವಾಸದಲ್ಲಿ ಕಾಂಗ್ರೆಸ್ ಸೇರಿದರು. ಪಕ್ಷದ ತೆಲಂಗಾಣ ಘಟಕದ ಅಧ್ಯಕ್ಷ ಎ.ರೇವಂತ ರೆಡ್ಡಿ ಈ ಸಂದರ್ಭದಲ್ಲಿ ಇದ್ದರು.

ಕೆಪಿಸಿಸಿ ಒಬಿಸಿ ಉಪಾಧ್ಯಕ್ಷೆಯಾಗಿ ಪವಿತ್ರಾ ನೇಮಕ

ಬೆಂಗಳೂರು: ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಉಪಾಧ್ಯಕ್ಷರನ್ನಾಗಿ ರಾಜರಾಜೇಶ್ವರಿನಗರದ ಪವಿತ್ರಾ ಅವರನ್ನು ನೇಮಿಸಲಾಗಿದೆ



ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎಸ್. ಮಧು ಬಂಗಾರಪ್ಪ ತಿಳಿಸಿದ್ದಾರೆ.

ಸ್ಥಳೀಯ ನಾಯಕರ ಸಹಯೋಗದಲ್ಲಿ ಹಿಂದುಳಿದ ವರ್ಗಗಳ ವಿಭಾಗದ ಸಂಘಟನೆ, ಬಲವರ್ಧನೆ ಮಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅ. 9ರಿಂದ ಉಚಿತ ತಪಾಸಣಾ ಶಿಬಿರ

ಬೆಂಗಳೂರು: ನಗರದ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆಯು ಅ.9ರಿಂದ 13ರ ವರೆಗೆ 'ಮೂಲವ್ಯಾಧಿ ಮತ್ತು ಪಿಸ್ತುಲಾ' ಸಮಸ್ಯೆಗಳಿಗೆ ಉಚಿತ ತಪಾಸಣೆ ಶಿಬಿರವನ್ನು ಆಯೋಜಿಸಿದೆ.

ಸರ್ಜಾಪುರ ರಸ್ತೆಯಲ್ಲಿರುವ ಆಸ್ಪತ್ರೆ ಯಲ್ಲಿ ಬೆಳಿಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ಉಚಿತ ತಪಾಸಣೆ ನಡೆಯಲಿದೆ. ಶಿಬಿರದಲ್ಲಿ ಪಾಲ್ಗೊಂಡವರಲ್ಲಿ ಯಾರಿಗಾದರೂ ಶಸ್ತ್ರಚಿಕಿತ್ಸೆ ಅಗತ್ಯವಿದ್ದರೆ, ಅಂಥವರಿಗೆ ₹20 ಸಾವಿರ ರಿಯಾಯಿತಿ ದರದಲ್ಲಿ ಶಸ್ತ್ರ ಚಿಕಿತ್ಸೆಯನ್ನು ಅ.11ರಿಂದ ಅ.27ರವರೆಗೆ ನಡೆಸಲಾಗುತ್ತದೆ ಎಂದು ಆಸ್ಪತ್ರೆಯ ಸಹ ನಿರ್ದೇಶಕ ಜಾನ್ ವರ್ಗೀಸ್ ತಿಳಿಸಿದ್ದಾರೆ.

ಬಾಲಕಿ ಹತ್ಯೆ: ಮೂವರ ಸೆರೆ

ಕರೀಮ್‌ಗಂಜ್(ಅಸ್ಸಾಂ)(ಪಿಟಿಐ): ಬಾಲಕಿಯನ್ನು ಕತ್ತು ಹಿಸುಕಿ ಕೊಂದು, ನಂತರ ಆಕೆಯ ಶವಸಂಭೋಗ ನಡೆಸಿದ ಆರೋಪದ ಮೇಲೆ ರೈಲ್ವೆ ನೌಕರ ಸೇರಿ ಮೂವರನ್ನು ಗುರುವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರೀಮ್‌ಗಂಜ್ ಬೈಪಾಸ್ ಬಳಿ ಸೆ.9ರಂದು ಬಾಲಕಿಯ ಶವ ಪತ್ತೆಯಾಗಿತ್ತು. 'ರೈಲ್ವೆಯಲ್ಲಿ ಹೊಸದಾಗಿ ನೌಕರಿಗೆ ಸೇರಿದ್ದ ಆರೋಪಿಯು ಬಾಲಕಿಯನ್ನು ಪ್ರೀತಿಸುತ್ತಿದ್ದನಲ್ಲದೇ, ದೈಹಿಕ ಸಂಪರ್ಕಕ್ಕೆ ಒತ್ತಾಯಿಸುತ್ತಿದ್ದ. ಇದನ್ನು ಬಾಲಕಿ ವಿರೋಧಿಸಿದ್ದಳು ಎಂಬುದು ತಿಳಿದುಬಂದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಾರ್ಥ ಪ್ರತಿಮ್ ದಾಸ್ ತಿಳಿಸಿದ್ದಾರೆ.

'ಬಾಲಕಿ ಒಬ್ಬಳೇ ಮನೆಯಲ್ಲಿ ಇರುವುದನ್ನು ತಿಳಿದುಕೊಂಡ ಆಕೆಯ ಪ್ರಿಯತಮ, ತನ್ನಿಬ್ಬರು ಸ್ನೇಹಿತರೊಂದಿಗೆ ಮನೆಗೆ ತೆರಳಿ ಆಕೆ ಮೇಲೆ ಅತ್ಯಾಚಾರ ಎಸಗಲು ಯತ್ನಿಸಿದ್ದಾನೆ. ಪ್ರತಿರೋಧ ಒಡ್ಡಿದ್ದ ಆಕೆಯನ್ನು ಕತ್ತು ಹಿಸುಕಿ ಕೊಂದ ಆರೋಪಿಗಳು, ನಂತರ ಆಕೆಯ ಶವದೊಂದಿಗೆ ಸಂಭೋಗ ನಡೆಸಿದ್ದಾರೆ' ಎಂದು ತಿಳಿಸಿದ್ದಾರೆ. 'ಬಾಲಕಿಯ ಡೈರಿಯಲ್ಲಿದ್ದ ಮೊಬೈಲ್ ಸಂಖ್ಯೆಗಳ ನೆರವಿನಿಂದ ಮೂವರು ಆರೋಪಿಗಳನ್ನು ಪತ್ತೆ ಹಚ್ಚಿ, ಬಂಧಿಸಲಾಗಿದೆ' ಎಂದೂ ತಿಳಿಸಿದ್ದಾರೆ.

ಮನ ಸೆಳೆದ ವನ್ಯಜೀವಿ ಛಾಯಾಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಭಾರತದ ಹೆಮ್ಮೆಯ 'ಹುಲಿ ಯೋಜನೆ'ಯ ಸುವರ್ಣ ಮಹೋತ್ಸವದ ನೆನಪಿಗಾಗಿ ಹಾಗೂ ಜಾಗತಿಕ ಜೀವವೈವಿಧ್ಯ ಆಚರಣೆ ಹಿನ್ನೆಲೆಯಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಲಾಗಿರುವ ನಿವೃತ್ತ ಅರಣ್ಯಾಧಿಕಾರಿ ಹಾಗೂ ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕ ಎಂ.ಎನ್.ಜಯಕುಮಾರ್ ಅವರ ಏಕವ್ಯಕ್ತಿ 'ವನ್ಯಜೀವಿ ಛಾಯಾಚಿತ್ರ' ಪ್ರದರ್ಶನ 'ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0'ಗೆ ಗುರುವಾರ ಚಾಲನೆ ನೀಡಲಾಯಿತು.

ಜಯಕುಮಾರ್ ಅವರು ಭಾರತ, ಆಗ್ನೇಯ ಏಷ್ಯಾ, ಆಫ್ರಿಕಾ ಮತ್ತು ಅಮೆರಿಕದ ಅರಣ್ಯಗಳಲ್ಲಿ ಸೆರೆ ಹಿಡಿದಿರುವ 231 ವೈವಿಧ್ಯಮಯ ವನ್ಯಜೀವಿಗಳ ಛಾಯಾಚಿತ್ರಗಳು ಪ್ರದರ್ಶನಗೊಳ್ಳುತ್ತಿವೆ. ಕರ್ನಾಟಕ ಅರಣ್ಯ ಇಲಾಖೆಯ ಸಹಯೋಗದಲ್ಲಿ ಅಕ್ಟೋಬರ್ 8ರವರೆಗೆ ಛಾಯಾಚಿತ್ರ ಪ್ರದರ್ಶನಗೊಳ್ಳಲಿದೆ.

ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ಪ್ರದರ್ಶನವಿದೆ. ಮೊದಲ ಗ್ಯಾಲರಿಯಲ್ಲಿ 'ಹುಲಿ ಯೋಜನೆ'ಯ ನೆನಪಿಗಾಗಿ ಹುಲಿಗಳ ಛಾಯಾಚಿತ್ರ ಪ್ರದರ್ಶಿಸಲಾಗಿದೆ. ಎರಡನೇ ಗ್ಯಾಲರಿಯಲ್ಲಿ ಏಷ್ಯಾದ ವನ್ಯಜೀವಿಗಳು, ಮೂರನೇ ಗ್ಯಾಲರಿಯಲ್ಲಿ ಆಫ್ರಿಕಾದ ವನ್ಯಜೀವಿಗಳ ಚಿತ್ರಗಳಿವೆ. ನಾಲ್ಕನೇ ಗ್ಯಾಲರಿಯಲ್ಲಿ 'ಕಲರ್ಸ್ ಆಫ್ ನೇಚರ್' ಶೀರ್ಷಿಕೆಯಡಿ ವೈವಿಧ್ಯಮಯ ಪಕ್ಷಿಗಳ ಛಾಯಾಚಿತ್ರಗಳ ಪ್ರದರ್ಶನವಿದೆ.

ಪ್ರತಿ ಛಾಯಾಚಿತ್ರದ ಎದುರು ಇಟ್ಟಿರುವ ಫಲಕದಲ್ಲಿ ಕ್ಯೂಆರ್ ಕೋಡ್ ನೀಡಲಾಗಿದೆ. ಅದನ್ನು ಸ್ಕ್ಯಾನ್ ಮಾಡಿದರೆ, ಫೋಟೊದಲ್ಲಿನ ವನ್ಯಜೀವಿಗಳ ವಿವರ ಇಂಗ್ಲಿಷ್‌ನಲ್ಲಿ ಲಭ್ಯವಾಗುತ್ತದೆ. ವಿವರವನ್ನು ಓದಬಹುದು ಹಾಗೂ ಹೆಡ್‌ಫೋನ್ ಬಳಸಿ ಕೇಳಲೂಬಹುದು.

ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 7.30ರ ವರೆಗೆ ಪ್ರದರ್ಶನವಿರುತ್ತದೆ. ಜೊತೆಗೆ ನಿತ್ಯ ಸಂಜೆ 5.30 ರಿಂದ 7.30ರ ವರೆಗೆ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಛಾಯಾಗ್ರಹಣ ಮತ್ತು ಚಿತ್ರ ನಿರ್ಮಾಣ ತಜ್ಞರಿಂದ ವಿಚಾರ ಮಂಡನೆ, ಪ್ರೇಕ್ಷಕರೊಂದಿಗೆ ಸಂವಾದವೂ ಇದೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿದೆ.



ವನ್ಯಜೀವಿ ಛಾಯಾಚಿತ್ರ ಪ್ರದರ್ಶನವನ್ನು (ಎಡದಿಂದ ಬಲಕ್ಕೆ) ಅರಣ್ಯ ಇಲಾಖೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ ವಿಭಾಗ) ಸುಭಾಷ್ ಮಾಳ್ಖೆಡೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥ ರಾಜೀವ್ ರಂಜನ್, ಪಿಗ್ಮಾಲಿಯನ್ ವೆಲ್ತ್ ಸಿಇಒ ಶ್ರೀಕಾಂತ್, ಪಿಗ್ಮಾಲಿಯನ್ ವೆಲ್ತ್ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ವೆಂಕಟೇಶ್ವರನ್ ರಮಣನ್, ನಿವೃತ್ತ ಅರಣ್ಯಾಧಿಕಾರಿ ಮತ್ತು ವನ್ಯಜೀವಿ ಛಾಯಾಗ್ರಾಹಕ ಎಂ.ಎನ್. ಜಯಕುಮಾರ್, ಕರ್ನಾಟಕ ಬ್ಯಾಂಕ್ ಎಂಡಿ ಮತ್ತು ಸಿಇಒ ಶ್ರೀಕೃಷ್ಣನ್ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ ವನ್ಯಜೀವಿ ಚಲನಚಿತ್ರ ನಿರ್ಮಾಪಕ ಸುಬ್ಬಯ್ಯ ನಲ್ಲಮುತ್ತು ವೀಕ್ಷಿಸಿದರು —ಪ್ರಜಾವಾಣಿ ಚಿತ್ರ

ಸಿಬಿಐ ತನಿಖೆ ಸ್ವಾಗತಿಸಿದ ಸಿ.ಎಂ ಕೇಜ್ರಿವಾಲ್

ನವದೆಹಲಿ (ಪಿಟಿಐ): ಬಂಗಲೆಯ ನವೀಕರಣದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಕುರಿತ ಸಿಬಿಐ ತನಿಖೆಯನ್ನು ಸ್ವಾಗತಿಸಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, 'ಇದರಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ. ಹಾಗಾಗಿ ಅವರಿಗೆ ಏನೂ ಸಿಗುವುದಿಲ್ಲ' ಎಂದು ಗುರುವಾರ ಹೇಳಿದ್ದಾರೆ.

ಈ ತನಿಖೆಯು ಪ್ರಧಾನಿಯವರ ಆತಂಕವನ್ನು ತೋರ್ಪಡಿಸುತ್ತದೆ ಎಂದು ವಾಗ್ದಾಳಿ ನಡೆಸಿದ ಅವರು, ತನಿಖೆಯಲ್ಲಿ ಏನೂ ಹೊರಬರದಿದ್ದರೆ ನರೇಂದ್ರ ಮೋದಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರಾ ಎಂದು ಪ್ರಶ್ನಿಸಿದ್ದಾರೆ.

'ನನ್ನ ವಿರುದ್ಧ ತನಿಖೆ ಹೊಸದಲ್ಲ. ಕಳೆದ ಎಂಟು ವರ್ಷಗಳಲ್ಲಿ 50ಕ್ಕೂ ಹೆಚ್ಚು ತನಿಖೆಗಳು ನನ್ನ ವಿರುದ್ಧ ನಡೆದಿವೆ. ಮೋದಿಯವರು ಆತಂಕದಲ್ಲಿದ್ದಾರೆ. ಈ ತನಿಖೆಯೂ ಅವರ ಆತಂಕವನ್ನು ತೋರಿಸುತ್ತದೆ' ಎಂದಿದ್ದಾರೆ.

ಇದಕ್ಕೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಸಂಸದ ಮನೋಜ್ ತಿವಾರಿ, 'ಕೇಜ್ರಿವಾಲ್ ಅವರ ಬಂಗಲೆಯ ನವೀಕರಣದ ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿರುವ ಅವ್ಯವಹಾರ ಸಿಬಿಐ ತನಿಖೆಯಿಂದ ಬಹಿರಂಗವಾಗಲಿದೆ' ಎಂದಿದ್ದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಕೇಜ್ರಿವಾಲ್, 'ನಾಲ್ಕನೇ ತರಗತಿ ಪಾಸಾದ 'ರಾಜ'ನಿಂದ ಏನನ್ನು ನಿರೀಕ್ಷಿಸಲು ಸಾಧ್ಯ? ಎಂದು ಪ್ರಶ್ನಿಸಿದ್ದಾರೆ.



ಬದುಕು ಜಟಕಾ ಬಂಡಿ...

ಮಳೆಯಿಂದ ನೆನೆಯುವುದನ್ನು ತಪ್ಪಿಸಲು ಕುದುರೆ ಮೇಲೆ ಪ್ಲಾಸ್ಟಿಕ್ ಹೊದಿಸಿ ಜಟಕಾ ಬಂಡಿ ಮಾಲೀಕ ಸವಾರಿ ಮಾಡುತ್ತಿರುವುದು ಬೆಂಗಳೂರಿನ ಟೌನ್‌ಹಾಲ್ ಬಳಿ ಕಂಡು ಬಂತು

ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಅಭಿವೃದ್ಧಿಗೆ ₹ 50 ಕೋಟಿ ಬಿಡುಗಡೆ: ಎಸ್‌ಟಿಎಸ್

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕ್ಷೇತ್ರದಲ್ಲಿ ಕುಡಿಯುವ ನೀರು ಒದಗಿಸಲು ₹10 ಕೋಟಿ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ರಾಜ್ಯ ಸರ್ಕಾರ ₹40 ಕೋಟಿ ಅನುದಾನ ಬಿಡುಗಡೆ ಮಾಡಿದೆ ಎಂದು ಶಾಸಕ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಬ್ಯಾಡರಹಳ್ಳಿಯಲ್ಲಿರುವ ಕಬ್ಬಾಳಮ್ಮ ದೇವಸ್ಥಾನ ಆವರಣದಲ್ಲಿ ನಗರೋತ್ಥಾನ ಅನುದಾನದಲ್ಲಿ ₹2 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಕಬ್ಬಾಳಮ್ಮ ಸಭಾಭವನವನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಮಾಗಡಿ ರಸ್ತೆಯಿಂದ ತುಮಕೂರು ರಸ್ತೆಗೆ ಹೊಂದಿಕೊಂಡಂತೆ ಎರಡು ವಾರ್ಡ್‌ಗಳು ಸೇರಿವೆ. ಇವುಗಳ ಅಭಿವೃದ್ಧಿಗೆ ಮುಖ್ಯಮಂತ್ರಿ ಉಪ ಮುಖ್ಯಮಂತ್ರಿಗಳ ಮನವೊಲಿಸಿ ಅನುದಾನ ತರಲಾಗುವುದು ಎಂದರು.

ಸಭಾಭವನದ ಮೇಲ್ಭಾಗ ಊಟದ ಸಭಾಂಗಣ, ಬ್ಯಾಡರಹಳ್ಳಿ ಸ್ಮಶಾನ, ರಸ್ತೆ ಅಭಿವೃದ್ಧಿ, ಸರ್ಕಾರಿ ಶಾಲೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಮುಂದಿನ ವಾರ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಎಚ್. ಹನುಮಂತರಾಯಪ್ಪ ಮಾತನಾಡಿ, 'ಸಭಾಭವನ ನಿರ್ಮಾಣಗೊಂಡಿರುವುದರಿಂದ ಬಡವರು, ಮಧ್ಯಮ ವರ್ಗದವರು ಸಮಾರಂಭ ಮಾಡಲು ಅನುಕೂಲವಾಗಿದೆ' ಎಂದು ತಿಳಿಸಿದರು.

ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ರಾಜಣ್ಣ, ನಿವೃತ್ತ ಕಾರ್ಯಪಾಲಕ ಎಂಜಿನಿಯರ್ ಇ. ದೊಡ್ಡನಾಗಯ್ಯ, ಎಂಜಿನಿಯರ್ ನಟರಾಜ್, ವಿವಿಧ ದೇವಸ್ಥಾನಗಳ ಅಭಿವೃದ್ಧಿ ಸಮಿತಿಯ ಪಟೇಲ್ ಚಿಕ್ಕಣ್ಣ, ಹೊಸಹಳ್ಳಿ ಸತೀಶ್, ತಮ್ಮಯ್ಯಪ್ಪ, ಬಿ.ಕೆ. ರಾಮಚಂದ್ರಯ್ಯ, ರಾಮಕೃಷ್ಣಪ್ಪ ಇದ್ದರು.



ಮಾಗಡಿ ಮುಖ್ಯರಸ್ತೆ ಬ್ಯಾಡರಹಳ್ಳಿಯ ಕಬ್ಬಾಳಮ್ಮ ದೇವಾಲಯದ ಆವರಣದಲ್ಲಿ ನಿರ್ಮಿಸಿರುವ ಸಭಾ ಭವನವನ್ನು ಶಾಸಕ ಎಸ್‌.ಟಿ.ಸೋಮಶೇಖರ್ ಅವರು ಲೋಕಾರ್ಪಣೆ ಮಾಡಿದರು. ರಾಮಚಂದ್ರಯ್ಯ, ಪಟೇಲ್ ಚಿಕ್ಕಣ್ಣ, ಎಚ್‌ಹನುಮಂತರಾಯಪ್ಪ ಇದ್ದಾರೆ

ವಿಶ್ವ ಹೃದಯ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆಗಳ ಸಮೂಹದಿಂದ ವ್ಯವಸ್ಥೆ

ತುರ್ತು ಸಹಾಯಕ್ಕೆ ಕ್ಯೂಆರ್ ಕೋಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಹೃದಯ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆಗಳ ಸಮೂಹವು ತುರ್ತು ಸಹಾಯ (ಎಸ್‌ಒಎಸ್) ಕ್ಯೂಆರ್ ಕೋಡ್ ಹಾಗೂ ಹೃದಯ ಮತ್ತು ಶ್ವಾಸಕೋಶ ಕಾಯಿಲೆಗೆ ಸಂಬಂಧಿಸಿದ ತರಬೇತಿಗೆ (ಸಿಪಿಆರ್) ಚಾಲನೆ ನೀಡಿತು.

ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ನೂತನ ವ್ಯವಸ್ಥೆಗೆ ಚಾಲನೆ ನೀಡಿ, ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದಲ್ಲಿ ಕಳೆದ ವರ್ಷ ಪರಿಚಯಿಸಿದ್ದ ಎಸ್‌ಒಎಸ್ ಕ್ಯೂಆರ್ ಕೋಡ್ ವ್ಯವಸ್ಥೆಗೆ ಉತ್ತಮ ಸ್ಪಂದನೆ ವ್ಯಕ್ತವಾದ್ದರಿಂದ ಈ ವರ್ಷ 37 ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಮರು ಪರಿಚಯಿಸಲಾಗಿದೆ. ಬಿಬಿಎಂಪಿ ಹಾಗೂ ಬೆಂಗಳೂರು ನಗರ ಸಂಚಾರ ಪೊಲೀಸರ ಸಹಯೋಗದಲ್ಲಿ ಈ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಹೃದಯದ ಸಮಸ್ಯೆ ಕಾಣಿಸಿಕೊಂಡಾಗ ಪ್ರಾಥಮಿಕ ಅಥವಾ ತುರ್ತು ಚಿಕಿತ್ಸೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವೈದ್ಯಕೀಯ ಸೇವೆ ಪಡೆದುಕೊಳ್ಳಬಹುದು. ವ್ಯಕ್ತಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುತ್ತಿದ್ದಂತೆಯೇ ತುರ್ತು ಸಂಖ್ಯೆಗೆ ಸಂಪರ್ಕ ಕಲ್ಪಿಸಿ, ಆಂಬುಲೆನ್ಸ್ ಸೇವೆಗೆ ನಿರ್ದೇಶಿಸಲಾಗುತ್ತದೆ ಎಂದು ಆಸ್ಪತ್ರೆಯ ವೈದ್ಯರು ವಿವರಿಸಿದರು.

'ಗುರುತಿಸಲಾದ ಟ್ರಾಫಿಕ್ ಜಂಕ್ಷನ್‌ಗಳಲ್ಲಿನ ಸಂಚಾರ ದೀಪಗಳಲ್ಲಿ ಹೃದಯದ ಆಕಾರ ಮೂಡಲಿದ್ದು, ಇದು ಪ್ರತಿಯೊಬ್ಬರಿಗೂ ಜೀವದ ಮೌಲ್ಯವನ್ನು ನೆನಪಿಸುತ್ತದೆ. ಹೃದಯದ ಆರೋಗ್ಯವನ್ನು ನಿರ್ಲಕ್ಷಿಸಬಾರದು ಎಂಬ ಸಂದೇಶವನ್ನು ಸಾರುತ್ತದೆ' ಎಂದು ಹೇಳಿದರು.

ಮುಖ್ಯಾಂಶಗಳು

- ಈ ವರ್ಷದಿಂದ 37 ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಕ್ಯೂಆರ್ ಕೋಡ್ ಮರುಪರಿಚಯ
- ಬಿಬಿಎಂಪಿ ಹಾಗೂ ಸಂಚಾರ ಪೊಲೀಸರ ಸಹಯೋಗ
- ತುರ್ತು ಸಂದರ್ಭಗಳಲ್ಲಿ ಜನರಿಗೆ ನೆರವು



ಕಾರ್ಯಕ್ರಮದಲ್ಲಿ ಜಿ. ಪರಮೇಶ್ವರ ಹಾಗೂ ದಿನೇಶ್ ಗುಂಡೂರಾವ್ ಅವರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರು. ಡಾ.ಸುದರ್ಶನ್ ಬಲ್ಲಾಳ್ ಇದ್ದಾರೆ

ಜಿ. ಪರಮೇಶ್ವರ, 'ಸಿಪಿಆರ್ ವಿಧಾನದಿಂದ ಹೃದಯ ಮತ್ತು ಶ್ವಾಸಕೋಶಗಳ ಪುನರುಜ್ಜೀವನಗೊಳಿಸಿ, ವ್ಯಕ್ತಿಯ ಜೀವ ಉಳಿಸಲು ಸಾಧ್ಯ. ಇದನ್ನು ಯಾವ ರೀತಿ ಬಳಸಬಹುದು ಎಂಬುದು ಬಹುತೇಕರಿಗೆ ತಿಳಿದಿಲ್ಲ. ತುರ್ತು ಸಂದರ್ಭದಲ್ಲಿ ತ್ವರಿತವಾಗಿ ರೋಗಿಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲು ಕ್ಯೂಆರ್ ಕೋಡ್ ಸಹಕಾರಿಯಾಗಲಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸೇವೆ ಸುಲಭ: ಮಣಿಪಾಲ್ ಆಸ್ಪತ್ರೆಯ ಅಧ್ಯಕ್ಷ ಡಾ.ಸುದರ್ಶನ್ ಬಲ್ಲಾಳ್, 'ಟ್ರಾಫಿಕ್ ಜಂಕ್ಷನ್‌ಗಳ ಜತೆಗೆ ಅಪಾರ್ಟ್‌ಮೆಂಟ್ ಸಮುಚ್ಚಯ ಸೇರಿ ಪ್ರಮುಖ ಸ್ಥಳಗಳಲ್ಲಿ ಕ್ಯೂಆರ್ ಕೋಡ್ ಇರಿಸಲಾಗುತ್ತದೆ. ರೋಗಿಗಳು ಅಥವಾ ಅವರನ್ನು ಆರೈಕೆ ಮಾಡುವವರು ತಮ್ಮ ಮೊಬೈಲ್‌ಗಳ ಮೂಲಕ ಸ್ಕ್ಯಾನ್ ಮಾಡಿ, ಸೇವೆ ಪಡೆದುಕೊಳ್ಳಬಹುದು. ಸ್ಕ್ಯಾನ್ ಮಾಡಿದ ಬಳಿಕ 'ಮಣಿಪಾಲ್ ಆಂಬುಲೆನ್ಸ್ ರೆಸ್ಪಾನ್ಸ್ ಸರ್ವಿಸ್' ಹಾಗೂ '108 ಆಂಬುಲೆನ್ಸ್' ವ್ಯವಸ್ಥೆಗೆ ಸ್ಥಳದ ಮಾಹಿತಿ ರವಾನೆಯಾಗುತ್ತದೆ. ಆಂಬುಲೆನ್ಸ್ ಹತ್ತಿರದ ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯಲಿದೆ' ಎಂದರು.


ಗಣೇಶ್

‘ಬಾನದಾರಿಯಲ್ಲಿ’ ಗಣೇಶ್!

ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ ‘ಬಾನದಾರಿಯಲ್ಲಿ’ ಚಿತ್ರ ಗುರುವಾರ(ಸೆ.28) ತೆರೆ ಕಂಡಿದೆ. ‘ಮುಂಗಾರು ಮಳೆ’ ಚಿತ್ರದಿಂದಲೂ ತನ್ನ ಜೊತೆಗಾರನಾಗಿರುವ ಗೆಳೆಯ ಪ್ರೀತಂ ಗುಬ್ಬಿ ನಿರ್ದೇಶನದ ಚಿತ್ರ ಹಾಗೂ ತಮ್ಮ ಪಾತ್ರದ ಬಗ್ಗೆ ಗಣೇಶ್ ಒಂದಷ್ಟು ಮಾತನಾಡಿದ್ದಾರೆ...

ವಿನಾಯಕ ಕೆ.ಎಸ್

- **ಚಿತ್ರದಲ್ಲಿನ ನಿಮ್ಮ ಪಾತ್ರದ ಕುರಿತು ಹೇಳಬಹುದೇ?**

ಇದು ಸಾಮಾನ್ಯ ಪ್ರೇಮಕಥೆಯ ಚಿತ್ರವಲ್ಲ. ಪ್ರೀತಿಯ ಕುರಿತಾಗಿ ಬೇರೆಯೇ ಆಯಾಮ ಹೊಂದಿರುವ ಕಥೆ. ಪ್ರೀತಿಯಲ್ಲಿ ಬಿದ್ದ ಹುಡುಗನ ಪಾತ್ರ ನನ್ನದು. ಕ್ರಿಕೆಟ್‌ನಲ್ಲಿನ ರಿವರ್ಸ್ ಸ್ವೀಪ್ ರೀತಿ ಬದುಕಿನಲ್ಲಿ ಉಲ್ಟಾ ಹೊಡೆಯುವ ವ್ಯಕ್ತಿ. ಪ್ರೀತಿ ಅನಂತ. ಪ್ರೀತಿಗೆ ಚೌಕಟ್ಟಿಲ್ಲ. ಪ್ರೀತಿಯ ಆಳ-ಅಗಲ ಪರೀಕ್ಷೆ ಮಾಡಲು ಸಾಧ್ಯವಿಲ್ಲ ಎಂಬ ಪಾತ್ರ ಮಾಡಿರುವೆ.

- **ಚಿತ್ರದಲ್ಲಿ ಕ್ರಿಕೆಟ್ ಆಟಗಾರನಾಗಿರುತ್ತೀರಾ?**

ಹೌದು. ಪಾತ್ರವಾಗಿಯೂ ಕ್ರಿಕೆಟ್ ಆಡುತ್ತಿರುತ್ತೇನೆ. ಬಿಳಿ ಬಟ್ಟೆ ಧರಿಸಿ ರೆಡ್ ಬಾಲ್ ಕ್ರಿಕೆಟ್ ಆಡುತ್ತೇನೆ. ಟಿ-20 ಅಲ್ಲ. ಟೆಸ್ಟ್, 50 ಓವರ್‌ನ ಪಂದ್ಯಗಳು. ಒಬ್ಬರು ನಾಯಕಿ ಲೀಲಾ ಕೂಡ ಚಿತ್ರದಲ್ಲಿ ರಾಷ್ಟ್ರ ಮಟ್ಟದ ಸ್ವಿಮ್ಮರ್.

- **ಇದು ‘ಮುಂಗಾರು ಮಳೆ’ ಧಾಟಿಯದ್ದೇ ಚಿತ್ರವೇ?**

ಪ್ರೀತಿಯ ಕಥಾವಸ್ತು. ಇದು ‘ಮುಂಗಾರುಮಳೆ’ ರೀತಿಯದ್ದಲ್ಲ. ಬೇರೆಯದೇ ರೀತಿಯ ಕಥೆ. ಪ್ರೀತಿ ಎಂದರೆ ಹುಡುಗ-ಹುಡುಗಿಯ ನಡುವಿನದ್ದು ಮಾತ್ರವಲ್ಲ. ಹೆತ್ತವರನ್ನೂ ಪ್ರೀತಿಸಬಹುದು, ಮಕ್ಕಳನ್ನೂ ಪ್ರೀತಿಸಬಹುದು. ಇದಕ್ಕೊಂದು ಚೌಕಟ್ಟಿಲ್ಲ.

- **ಈ ಚಿತ್ರದ ಕಥೆಯಾಗಿಯೇ ಕೀನ್ಯಾದ ಭಾಗ ಬರುತ್ತದೆಯಾ?**

ಕಥೆಯೇ ಚಿತ್ರವನ್ನು ಕೀನ್ಯಾಕ್ಕೆ ಕರೆದುಕೊಂಡು ಹೋಗುತ್ತದೆ. ಅರ್ಧದಷ್ಟು ಸಿನಿಮಾ ಅಲ್ಲಿಯೇ ಚಿತ್ರೀಕರಣಗೊಂಡಿದೆ. ಉದ್ದೇಶಪೂರ್ವಕವಾಗಿಯೇ ಟ್ರೇಲರ್ ಅನ್ನು ಡಾಕ್ಯುಮೆಂಟರಿ ರೀತಿಯಲ್ಲಿ ತೋರಿಸಿದ್ದೇವೆ. ಬೇರೆಯದೇ ಭಾವನೆ ಮೂಡಿಸುವ ಚಿತ್ರವಿದು.

- **‘ಗಾಳಿಪಟ’ದಿಂದ ‘ಗಾಳಿಪಟ-2’ವರೆಗಿನ ಸಿನಿ ಪಯಣ ಹೇಗನ್ನಿಸಿದೆ?**

ಯಶಸ್ಸಿದೆ, ಸೋಲುಗಳಿವೆ. ನನ್ನಂತಹ ಮಿಡಲ್‌ಕ್ಲಾಸ್ ವ್ಯಕ್ತಿಗೆ ಚಿತ್ರರಂಗ ಎಲ್ಲವನ್ನೂ ಕೊಟ್ಟಿದೆ. ನಾನು ವೈಯಕ್ತಿಕವಾಗಿ ನಕಾರಾತ್ಮಕ ಅಂಶಗಳನ್ನು ಬಿಟ್ಟು ಸಕಾರಾತ್ಮಕ ಅಂಶಗಳನ್ನು ಮಾತ್ರ ಜೊತೆಗಿಟ್ಟುಕೊಂಡು ಹೋಗುವ ವ್ಯಕ್ತಿ. ಇಷ್ಟಪಟ್ಟು ಒಳ್ಳೊಳ್ಳೆ ಸಿನಿಮಾಗಳನ್ನು ಮಾಡಿರುವೆ. ಕೆಲವು ಸೂಪರ್ ಹಿಟ್ ಆಗಿವೆ. ಕೆಲವು ಬಿದ್ದಿವೆ. ಹಾಗಂತ ಅದಕ್ಕೆ ನಾಯಕನೋ, ನಿರ್ದೇಶಕನೋ ಮಾತ್ರ ಕಾರಣವಲ್ಲ. ಬೇರೆಯದೇ ಕಾರಣಗಳಿರುತ್ತವೆ. ಗಣೇಶ್‌ಗೆ ತುಂಬ ಫ್ಯಾಮಿಲಿ ಆಡಿಯನ್ಸ್ ಇದ್ದಾರೆ ಎಂಬ ಮಾತಿದೆ. ಅವರನ್ನು ನಿರಾಸೆಗೊಳಿಸಬಾರದು. ಹೊಸತಾಗಿರುವುದನ್ನು ಮಾಡಬೇಕು. ಜೊತೆಗೆ ಪ್ರೇಕ್ಷಕರನ್ನು ಖುಷಿಪಡಿಸಬೇಕೆಂಬ ಜವಾಬ್ದಾರಿ ಇದೆ.

- **ನೀವು ಇಲ್ಲಿಯವರೆಗೆ ಮಾಡಬೇಕೆಂದುಕೊಂಡು ಮಾಡಲಾಗದ ಪಾತ್ರ ಯಾವುದು?**

ಆ ರೀತಿ ಏನಿಲ್ಲ. ಸಣ್ಣ ಪಾತ್ರಗಳಿಂದ ಹಿಡಿದು ಇನ್‌ಸ್ಪೆಕ್ಟರ್, ಶ್ರೀಮಂತನ ಮಗ, ಬಡವ... ಎಲ್ಲ ರೀತಿಯ ಪಾತ್ರ ಮಾಡಿರುವೆ. ಮಾಡಿರುವ ಪಾತ್ರಕ್ಕೆ ಜೀವ ತುಂಬಬೇಕು. ಗಣೇಶ್ ಬಿಟ್ಟು ಬೇರೆಯವರು ಈ ಪಾತ್ರಕ್ಕೆ ಸೂಕ್ತವಾಗುತ್ತಿರಲಿಲ್ಲ ಎನ್ನುವಂತೆ ನಟಿಸಬೇಕು. ಪಾತ್ರ ಕೇಳಿದ ತಕ್ಷಣ ಸ್ಟ್ರೈಕ್ ಆಗಿ, ಇದನ್ನು ಮಾಡಲೇಬೇಕು ಅನ್ನಿಸಬೇಕು. ಆ ರೀತಿ ಪಾತ್ರವನ್ನು ಯಾರು ತೆಗೆದುಕೊಂಡು ಬಂದರೂ ಮಾಡುತ್ತೀನಿ. ನಟನೆ ವಿಷಯದಲ್ಲಿ ನೀರಿನ ರೀತಿ ಇರಲು ಇಷ್ಟಪಡುವೆ.

- **ನಿಮ್ಮ ಮುಂದಿನ ಸಿನಿಮಾಗಳ ಕುರಿತು ಮಾಹಿತಿ ಸಿಗಬಹುದಾ?**

‘ಕೃಷ್ಣಂ ಪ್ರಣಯ ಸಖಿ’ ಚಿತ್ರೀಕರಣದ ಹಂತದಲ್ಲಿದೆ. ನನ್ನ ವೃತ್ತಿಯಲ್ಲಿಯೇ ಇದು ದೊಡ್ಡ ಬಜೆಟ್ ಸಿನಿಮಾ. ‘ಬಾನದಾರಿಯಲ್ಲಿ’ ಒಂದು ಭಾವದ ಸಿನಿಮಾವಾದರೆ, ‘ಕೃಷ್ಣಂ..’ ಬೇರೆಯದೇ ಭಾವದ ಸಿನಿಮಾ. ರಮೇಶ್ ಅರವಿಂದ್ ಜೊತೆಗಿನ, ವಿಖ್ಯಾತ್ ನಿರ್ದೇಶನದ ಚಿತ್ರದ ಅಂತಿಮ ಸ್ಕ್ರಿಪ್ಟ್ ಅಕ್ಟೋಬರ್‌ನಲ್ಲಿ ಕೇಳಲಿಕ್ಕಿದೆ. ಎರಡು ಸ್ಕ್ರಿಪ್ಟ್‌ಗಳನ್ನು ಓಕೆ ಮಾಡಿರುವೆ. ಮೂರ್ನಾಲ್ಕು ಒನ್‌ಲೈನ್‌ಗಳ ಚರ್ಚೆ ನಡೆದಿದೆ. ಪ್ರೀತಂ ಗುಬ್ಬಿ ಜೊತೆ ಇನ್ನೊಂದು ಸಿನಿಮಾ, ‘ಗಾಳಿಪಟ-2’ ನಿರ್ಮಾಪಕರು, ಯೋಗರಾಜ್ ಭಟ್ಟರ ಜೊತೆಗಿನ ಸಿನಿಮಾಗಳು ಚರ್ಚೆಯ ಹಂತದಲ್ಲಿವೆ.



- **ಯಾವ ರೀತಿಯ ಸಿನಿಮಾಗಳನ್ನು ಎದುರು ನೋಡುತ್ತಿರುವಿರಿ?**

ಮೊದಲೇ ಹೇಳಿದಂತೆ ಚಿತ್ರದಲ್ಲಿ ನಮ್ಮತನವಿರಬೇಕು. ಹೊಸತನ ಬೇಕು. ಜೊತೆಗೆ ಪ್ರೇಕ್ಷಕರನ್ನು ನಿರಾಸೆಗೊಳಿಸಬಾರದೆಂಬ ಜವಾಬ್ದಾರಿಯೂ ಇದೆ. ಎಐ ಬರಲಿ, ಗ್ರಾಫಿಕ್ಸ್ ಇರಲಿ, ಅದ್ದೂರಿ ಮೇಕಿಂಗ್ ಇರಲಿ...ಇವ್ಯಾವುದೂ ವಿಷಯವಲ್ಲ. ಜನ ಕಥೆಯೊಂದಿಗೆ, ಪಾತ್ರದೊಂದಿಗೆ ಕನೆಕ್ಟ್ ಆಗಬೇಕು. ಜನರನ್ನು ಸೆಳೆದಿಡಬಲ್ಲಂತಹ ಅಂಶಗಳು ಇರಬೇಕು. ❖

ಇದು ‘ಗರುಡ ಪುರಾಣ’


ದಿಶಾ ಶೆಟ್ಟಿ

ಹಲವು ಸಿನಿಮಾಗಳಿಗೆ ಆನ್‌ಲೈನ್ ಎಡಿಟರ್ ಆಗಿ ಕೆಲಸ ಮಾಡಿರುವ ಮಂಜುನಾಥ್ ನಾಗಬಾ ನಟಿಸಿ, ನಿರ್ದೇಶಿಸಿರುವ ‘ಗರುಡ ಪುರಾಣ’ ಚಿತ್ರದ ಟೀಸರ್ ಅನ್ನು ಇತ್ತೀಚೆಗಷ್ಟೇ ಅಶ್ವಿನಿ ಪುನೀತ್ ರಾಜ್‌ಕುಮಾರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

27 ಫ್ರೇಮ್ ಕ್ರಿಯೇಷನ್ಸ್ ಲಾಂಛನದಲ್ಲಿ ಸಿಂಧು ಕೆ.ಎಂ ಮತ್ತು ಬಿ.ಎಲ್ ಯೋಗೇಶ್ ಕುಮಾರ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

‘ಕಾಂತಾರ’ ಸೇರಿದಂತೆ ಹದಿನೆಂಟು ಚಿತ್ರಗಳಿಗೆ ಆನ್‌ಲೈನ್ ಎಡಿಟರ್ ಆಗಿ ಕಾರ್ಯ ನಿರ್ವಹಿಸಿದ್ದೇನೆ. ಸಿನಿಮಾ ಬಹಳ ವರ್ಷದ ಕನಸು. ‘ಗರುಡ ಪುರಾಣ’ ಸಸ್ಪೆನ್ಸ್ ಥ್ರಿಲ್ಲರ್ ಚಿತ್ರ. ತಪ್ಪು ಮಾಡಿದವರು ಶಿಕ್ಷೆ ಅನುಭವಿಸಲೇ ಬೇಕು ಎಂಬ ಅಂಶ ನಮ್ಮ ಸಿನಿಮಾದಲ್ಲಿರುವುದರಿಂದ ಈ ಹೆಸರಿಟ್ಟಿದ್ದೇವೆ. ಮೂರು ಆಯಾಮಗಳಲ್ಲಿ ಚಿತ್ರದ ಕಥೆ ಸಾಗುತ್ತದೆ. ಚಿತ್ರೀಕರಣ ಮುಕ್ತಾಯವಾಗಿ, ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ’ ಎಂದರು ನಿರ್ದೇಶಕರು.

ಚಿತ್ರದ ನಾಯಕಿಯಾಗಿ ದಿಶಾ ಶೆಟ್ಟಿ ಕಾಣಿಸಿಕೊಂಡಿದ್ದಾರೆ. ರಾಕೇಶ್ ಆಚಾರ್ಯ ಸಂಗೀತ, ಸುನೀಲ್ ನರಸಿಂಹಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ❖

‘ಬರ್ಮ’ದಲ್ಲಿ ‘ಗಟ್ಟಿಮೇಳ’ ರಕ್ಷ್



ಚೇತನ್ ಕುಮಾರ್, ರಕ್ಷ್ ರಾಮ್, ಅಶ್ವಿನಿ ಪುನೀತ್ ರಾಜ್‌ಕುಮಾರ್

‘ಬಹದ್ದೂರ್’, ‘ಭರ್ಜರಿ’ ಮೊದಲಾದ ಚಿತ್ರಗಳ ನಿರ್ದೇಶಕ ಚೇತನ್ ಕುಮಾರ್ ನಿರ್ದೇಶನದಲ್ಲಿ ‘ಗಟ್ಟಿಮೇಳ’ ಧಾರಾವಾಹಿ ಖ್ಯಾತಿಯ ರಕ್ಷ್ ರಾಮ್ ನಾಯಕನಾಗಿ ನಟಿಸುತ್ತಿರುವ ‘ಬರ್ಮ’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಅಶ್ವಿನಿ ಪುನೀತ್ ರಾಜಕುಮಾರ್, ರಾಘವೇಂದ್ರ ರಾಜಕುಮಾರ್, ನಟ ಧ್ರುವ ಸರ್ಜಾ ಈ ಸಂದರ್ಭದಲ್ಲಿ ಹಾಜರಿದ್ದು, ತಂಡಕ್ಕೆ ಶುಭ ಕೋರಿದರು.

‘ಇದು ನನ್ನ ನಿರ್ದೇಶನದ ಐದನೇ ಚಿತ್ರ. ‘ಬರ್ಮ’ ಎಂದರೆ ಬ್ರಹ್ಮ ವಾಸಿಸುವ ಜಾಗ ಹಾಗೂ ಒಂದು ದೇಶದ ಹೆಸರು. ಈ ಹೆಸರು ಚಿತ್ರದ ಕಥೆಗೆ ಪೂರಕವಾಗಿದೆ. ಚಿತ್ರದ ನಾಯಕ ರಕ್ಷ್ ಈಗಾಗಲೇ ಜನಪ್ರಿಯ ಧಾರಾವಾಹಿಗಳ ಮೂಲಕ ಮನೆಮಾತಾಗಿದ್ದಾರೆ. ಅವರೇ ಈ ಚಿತ್ರದ ನಿರ್ಮಾಪಕರು ಕೂಡ. ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಈ ಚಿತ್ರ ಬರಲಿದೆ’ ಎಂದರು ನಿರ್ದೇಶಕ ಚೇತನ್ ಕುಮಾರ್.

ವಿ.ಹರಿಕೃಷ್ಣ ಈ ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ. ಸಂಕೇತ್ ಛಾಯಾಗ್ರಹಣ, ಮಹೇಶ್ ರೆಡ್ಡಿ ಸಂಕಲನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನವಿದೆ.


‘ಮಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ನಡೆಯಲಿದೆ. ಆದಿತ್ಯ ಮೆನನ್ ಅವರು ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಬೇರೆ ಭಾಷೆಗಳ ಹೆಸರಾಂತ ಕಲಾವಿದರು ನಮ್ಮ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ನಾಯಕಿ ಸೇರಿದಂತೆ ಉಳಿದ ಕಲಾವಿದರ ಬಗ್ಗೆ ಮುಂದಿನ ದಿನಗಳಲ್ಲಿ ತಿಳಿಸಲಾಗುವುದು’ ಎಂದರು ನಾಯಕ ಮತ್ತು ನಿರ್ಮಾಪಕ ರಕ್ಷ್ ರಾಮ್. ❖

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

‘ರಾಜ್ಯ ಪ್ರಶಸ್ತಿ; ಸಬ್ಸಿಡಿ ಬಿಡುಗಡೆಗೆ ಆದ್ಯತೆ’

ಅಭಿಲಾಷ ಪಿ.ಎಸ್.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ(ಕೆಎಫ್‌ಸಿಸಿ) ಅಧ್ಯಕ್ಷರಾಗಿ ನಿರ್ಮಾಪಕ, ವಿತರಕ ಎನ್‌.ಎಂ.ಸುರೇಶ್ ಆಯ್ಕೆಯಾಗಿದ್ದಾರೆ. ‘ಎಕ್ಸ್‌ಕ್ಯೂಸ್ ಮಿ’ ಸಿನಿಮಾ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ಸುರೇಶ್ ಅವರು ಅಧಿಕಾರ ಸ್ವೀಕರಿಸಿದ ಬಳಿಕ ತಮ್ಮ ಯೋಚನೆಗಳು, ಯೋಜನೆಗಳ ಬಗ್ಗೆ ‘ಸಿನಿಮಾ ಪುರವಣಿ’ ಜೊತೆ ಮಾತನಾಡಿದ್ದಾರೆ.


ಎನ್‌ಎಂ ಸುರೇಶ್

- **ಅಧಿಕಾರ ಸ್ವೀಕಾರದ ದಿನವೇ ನಟಿ ಜಯಮಾಲಾ ಅವರು ರಾಜ್ಯ ಪ್ರಶಸ್ತಿ ಹಾಗೂ ಸಬ್ಸಿಡಿ ಬಿಡುಗಡೆ ವಿಚಾರ ಪ್ರಸ್ತಾಪಿಸಿದರು. ಈ ಬಗ್ಗೆ ನಿಮ್ಮ ನಿಲುವು ಏನು?**

ಈ ವಿಚಾರದ ಕುರಿತು ಈಗಾಗಲೇ ವಾರ್ತಾ ಇಲಾಖೆಯ ಜಂಟಿ ಕಾರ್ಯದರ್ಶಿ ಜೊತೆ ಮಾತುಕತೆ ನಡೆಸಿದ್ದೇನೆ. ಕಾರ್ಯದರ್ಶಿ ಜೊತೆಗೂ ಚರ್ಚೆ ನಡೆಸಲಿದ್ದೇನೆ. ನನ್ನ ಅಧ್ಯಕ್ಷ ಅವಧಿ ಕೇವಲ ಒಂದು ವರ್ಷ. ಹೀಗಾಗಿ ತಕ್ಷಣದಲ್ಲೇ ರಾಜ್ಯ ಪ್ರಶಸ್ತಿ ಘೋಷಣೆ ಹಾಗೂ ಸಬ್ಸಿಡಿ ಬಿಡುಗಡೆಗೆ ಕ್ರಮ ತೆಗೆದುಕೊಳ್ಳುವಂತೆ ಒತ್ತಡ ಹೇರುತ್ತಿದ್ದೇನೆ. ಒಂದು ವಾರದೊಳಗೆ ಈ ಕುರಿತು ಸರ್ಕಾರದ ಪ್ರತಿಕ್ರಿಯೆಯನ್ನು ಪಡೆಯಲು ಪ್ರಯತ್ನಿಸುತ್ತೇನೆ. ಸದ್ಯ ಕಾವೇರಿ ವಿಷಯ ಬಂದಿದ್ದು, ಕಳೆದೆರಡು ದಿನದಿಂದ ಈ ಕುರಿತ ಸಭೆಗಳೇ ಆಗಿವೆ. ಪ್ರಶಸ್ತಿ ವಿಚಾರದಲ್ಲಿ ಇರುವ ಆಂತರಿಕ ಅಡಚಣೆಗಳ ಕುರಿತು ಮಾಹಿತಿ ಕಲೆ ಹಾಕಿಕೊಂಡು, ನೇರವಾಗಿ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಚರ್ಚಿಸುತ್ತೇನೆ.

- **ಹಲವು ಸವಾಲುಗಳು ನಿಮ್ಮ ಮುಂದಿವೆ ಅಲ್ಲವೆ?**

ಹೌದು...ಸಿನಿಮಾಗಳನ್ನು ಯುಎಫ್‌ಒ, ಕ್ಯೂಬ್ ಮುಂತಾದವುಗಳಿಗೆ ಅಪ್‌ಲೋಡ್ ಮಾಡಲು ಬೇರೆ ರಾಜ್ಯಗಳಿಗೆ ಹೋಗುವ ಸ್ಥಿತಿ ಇದೆ. ಇದಕ್ಕೆ ಮೊದಲು ಪರಿಹಾರ ಕಂಡುಕೊಳ್ಳಬೇಕಾಗಿದೆ. ಚಿತ್ರನಗರಿ ಬಗ್ಗೆ ಒಂದು ಸ್ಪಷ್ಟ ನಿರ್ಧಾರ ಆಗಬೇಕಿದೆ. ಅದೆಲ್ಲಕ್ಕಿಂತಲೂ ಏಕಪರದೆಯ ಚಿತ್ರಮಂದಿರಗಳ ಉಳಿವು ಮುಖ್ಯ. ಮಲ್ಟಿಪ್ಲೆಕ್ಸ್‌ಗಳ ಸ್ಪರ್ಧೆಯಿಂದ ಏಕಪರದೆ ಚಿತ್ರಮಂದಿರಗಳು ಅವನತಿಯತ್ತ ಸಾಗಿವೆ. ಇವುಗಳಿಗೆ ಸಿನಿಮಾಗಳ ಫೀಡಿಂಗ್ ಕಮ್ಮಿ ಆಗಿದೆ. ಏಕಪರದೆ ಚಿತ್ರಮಂದಿರಗಳನ್ನು ಉಳಿಸುವ ಗುರಿ ಹೊತ್ತಿದ್ದೇನೆ.

- **ನಿಮ್ಮ ಹೊಸ ಯೋಚನೆ, ಯೋಜನೆಗಳು...**

ಸರ್ಕಾರದಿಂದ ಹಲವು ಸವಲತ್ತುಗಳು ಲಭ್ಯವಿವೆ. ಆದರೆ ಇವುಗಳ ಸಮರ್ಪಕ ಮಾಹಿತಿ ಯಾರಿಗೂ ಇಲ್ಲ. ಇದರ ಬಗ್ಗೆ ಮೊದಲು ಜಾಗೃತಿ ಮೂಡಿಸುತ್ತೇನೆ. ಈ ಸವಲತ್ತುಗಳನ್ನು ಕೆದಕಿ ಹೊರತೆಗೆಯಬೇಕು. ಚಿತ್ರರಂಗದಲ್ಲಿರುವ ಅರ್ಹರಿಗೆ ಇವುಗಳನ್ನು ಕೊಡಿಸುವ ಜವಾಬ್ದಾರಿ ನನ್ನದು. ನನ್ನ ಗಮನದಲ್ಲಿ ಇರುವಂತೆ ಚಿತ್ರರಂಗದಲ್ಲಿ ದುಡಿದ 60 ವರ್ಷ ದಾಟಿದ ಹಲವರಿಗೆ ಅಗತ್ಯ ಮೂಲಸೌಲಭ್ಯಗಳೇ ಇಲ್ಲ. ಅವರಿಗೆ ಸಹಾಯ ಮಾಡುವ ಪ್ರಯತ್ನ ಮಾಡುತ್ತೇನೆ. ಇದಕ್ಕಾಗಿ ಆರೋಗ್ಯ ವಿಮೆ ಜಾರಿಗೆ ತರುವ ಚಿಂತನೆ ಇದೆ. ಜೊತೆಗೆ ಈಗಾಗಲೇ ಇರುವ ಕ್ಷೇಮಾಭಿವೃದ್ಧಿ ನಿಧಿಯನ್ನು ಹೆಚ್ಚಿಸುವ ಯೋಚನೆಯೂ ಇದೆ.

ಬೆಂಗಳೂರು ನಗರದಲ್ಲೇ ಒಂದು ಸರ್ಕಾರಿ ಜಾಗದಲ್ಲಿ ಸ್ಟುಡಿಯೊ ನಿರ್ಮಾಣದ ಯೋಜನೆ ಇದೆ. ಅದಕ್ಕೆ ಬಹಳ ಪ್ರಯತ್ನಪಡಬೇಕು, ಕಷ್ಟಸಾಧ್ಯ ಎಂದು ತಿಳಿದಿದೆ. ಸಾ.ರಾ.ಗೋವಿಂದ್ ಅವರ ಸಹಕಾರ ಪಡೆದು ಇದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡುತ್ತೇನೆ.

- **ಮಲ್ಟಿಪ್ಲೆಕ್ಸ್‌ಗಳಲ್ಲಿ ಏಕರೂಪ ಟಿಕೆಟ್ ದರ ಸಾಧ್ಯವೇ?**

ಸರ್ಕಾರ ಮನಸ್ಸು ಮಾಡಿದರೆ ಖಂಡಿತ ಸಾಧ್ಯವಿದೆ. ಹಿಂದೊಮ್ಮೆ ಈ ಬಗ್ಗೆ ಆದೇಶ ಆಗುವವರೆಗೂ ನಿರ್ಧಾರ ಆಗಿತ್ತು. ಆದರೆ ಆಗಲಿಲ್ಲ. ಹೆಚ್ಚಿನ ಟಿಕೆಟ್ ದರದಿಂದಾಗಿ ಪ್ರಸ್ತುತ ಕರ್ನಾಟಕದ ದುಡ್ಡು ಪರಭಾಷಿಗರಿಗೆ ಹೋಗುತ್ತಿದೆ. ತಮಿಳುನಾಡಿನಲ್ಲಿ ಏಕರೂಪ ಟಿಕೆಟ್ ದರ ಜಾರಿಯಲ್ಲಿದೆ. ❖

ಈ ವಾರ ತೆರೆಗೆ

ತೋತಾಪುರಿ -2

ಜಗ್ಗೇಶ್, ಡಾಲಿ ಧನಂಜಯ, ಅದಿತಿ ಪ್ರಭುದೇವ ಅಭಿನಯದ ‘ತೋತಾಪುರಿ -2’ ಚಿತ್ರ ಗುರುವಾರ (ಸೆ.28) ತೆರೆಕಂಡಿದೆ.

ಕಳೆದ ವರ್ಷ ತೆರೆಕಂಡಿದ್ದ ನವರಸನಾಯಕ ಜಗ್ಗೇಶ್-ಅದಿತಿ ಪ್ರಭುದೇವ ಅಭಿನಯದ ‘ತೋತಾಪುರಿ’ ಚಿತ್ರದ ಮುಂದಿನ ಭಾಗ ಇದಾಗಿದ್ದು, ವಿಜಯಪ್ರಸಾದ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ. ಈ ಚಿತ್ರವನ್ನು ಸುರೇಶ್ ಆರ್ಟ್ಸ್, ಮೋನ್ ಫ್ಲಿಕ್ಸ್ ಸ್ಟುಡಿಯೋಸ್ ಲಾಂಛನದಲ್ಲಿ ಕೆ.ಎ. ಸುರೇಶ್ ಅವರು ಅದ್ದೂರಿಯಾಗಿ ನಿರ್ಮಿಸಿದ್ದಾರೆ. ನಿರಂಜನ ಬಾಬು ಅವರ ಛಾಯಾಗ್ರಹಣ, ಅರುಣ್ ಆಂಡ್ರ್ಯೂ ಅವರ ಸಂಗೀತ ಸಂಯೋಜನೆಯಿದೆ. ದತ್ತಣ್ಣ, ಸುಮನ ರಂಗನಾಥ್, ವೀಣಾ ಸುಂದರ್, ಹೇಮಾದತ್ ಹೀಗೆ ಮೊದಲ ಭಾಗದಲ್ಲಿದ್ದ ಬಹುತೇಕ ಪಾತ್ರಗಳು ಮುಂದುವರಿದಿವೆ.


ಅದಿತಿ ಪ್ರಭುದೇವ

‘ಮನ್ಮಥ’ನ ಟ್ರೇಲರ್

ಕಿರುತೆರೆ ನಟ ಸುಬ್ರಮಣಿ ಅವರು ನಟಿಸಿ, ನಿರ್ದೇಶಿಸಿರುವ ‘ಮಿಸ್ಟರ್ ಆ್ಯಂಡ್ ಮಿಸ್ ಮನ್ಮಥ’ ಚಿತ್ರದ ಹಾಡು ಮತ್ತು ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ಮೂರು ದಶಕಗಳಿಂದ ಧಾರಾವಾಹಿ, ಸಿನಿಮಾ, ರಂಗಭೂಮಿಯಲ್ಲಿ ಸಕ್ರಿಯನಾಗಿರುವೆ. ಸಾಕಷ್ಟು ಸಿನಿಮಾಗಳಲ್ಲಿ ಪೋಷಕ ನಟನಾಗಿ ಕಾಣಿಸಿಕೊಂಡಿದ್ದೇನೆ. 1994ರಿಂದಲೂ ನಾಯಕನಾಗಬೇಕೆಂಬ ಬಯಕೆ ಇತ್ತು. ಆದರೆ ನಿರ್ಮಾಪಕರು ಸಿಗಲಿಲ್ಲ. ಈಗ ಕಾಲ ಕೂಡಿ ಬಂದಿದೆ. ನನ್ನದೇ ನಿರ್ಮಾಣದಲ್ಲಿ ಹಾಸ್ಯಮಯ ಕಥೆ ಹೊಂದಿರುವ ಚಿತ್ರ ಮಾಡಿದ್ದೇನೆ’ ಎಂದರು ಸುಬ್ರಮಣಿ.


ಚಂದನಾ

ಹೊಸಬರಾದ ಶಕುಂತಲಾ, ಚಂದನಾ ಹಾಗೂ ವೈಶಾಲಿ ಚಿತ್ರದ ನಾಯಕಿಯರು. ‘ಶ್ರೀಮಂತನನ್ನು ಬುಟ್ಟಿಗೆ ಹಾಕಿಕೊಳ್ಳಬೇಕೆಂದು ಮೂವರು ಹುಡುಗಿಯರು ಯತ್ನಿಸುವ ಕಥೆ. ರಮ್ಯಾ ಎಂಬ ಯುವತಿಯ ಪಾತ್ರವನ್ನು ಮಾಡಿದ್ದೇನೆ’ ಎಂದರು ನಟಿ ಚಂದನಾ.

ಕೆವಿನ್ ಎಂ. ಸಂಗೀತ ನಿರ್ದೇಶನ, ರವಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ❖

‘ಯಾವ್ರೋ ಇವೆಲ್ಲಾ’ ಎಂದ ಹೊಸಬರು!


ಹರೀಶ್ ಸಾ.ರಾ, ಶಿಲ್ಪಾ ನಾಯಕ್

ರೆಬಲ್ ಸ್ಟಾರ್ ಅಂಬರೀಷ್ ಹೆಚ್ಚಾಗಿ ಬಳಸುತ್ತಿದ್ದ ‘ಯಾವ್ರೋ ಇವೆಲ್ಲಾ’ ಎಂಬ ಮಾತನ್ನೇ ಶೀರ್ಷಿಕೆಯಾಗಿಸಿಕೊಂಡ ಚಿತ್ರವೊಂದು ತೆರೆಗೆ ಬರಲು ಸಜ್ಜಾಗಿದೆ. ಶಿವಮೊಗ್ಗದ ಹರೀಶ್ ಸಾ.ರಾ. ಈ ಸಿನಿಮಾದಲ್ಲಿ ನಾಯಕನಾಗಿ ನಟಿಸಿ, ನಿರ್ದೇಶಿಸಿದ್ದಾರೆ. ರಾಶ್ರೀ ಆರ್ಟ್ಸ್ ಅಡಿಯಲ್ಲಿ ಸುಜಾತ ಎಸ್. ಬಂಡವಾಳ ಹೂಡಿದ್ದಾರೆ.

‘ಮದುವೆಗೆ ಸಂಬಂಧಿಸಿದ ಕಥೆ ಇದೆ. ಪೋಷಕರು ತಮ್ಮ ಮಕ್ಕಳು ಚಿಕ್ಕವರಿರುವಾಗ ಸಂಬಂಧಿಕರಿಗೆ ಕೊಟ್ಟು ಮದುವೆ ಮಾಡಬೇಕೆಂದುಕೊಂಡಿರುತ್ತಾರೆ. ಮದುವೆ ವಯಸ್ಸಿಗೆ ಬಂದಾಗ ಶ್ರೀಮಂತರ ಮನೆಯಿಂದ ಪ್ರಸ್ತಾಪ ಬಂದರೆ ಹಿಂದಿನ ಮಾತನ್ನು ಮರೆಯುತ್ತಾರೆ. ದೂರದ ಬೆಟ್ಟ ನುಣ್ಣಗೆ ಎಂಬಂತೆ ಹತ್ತಿರದ ಸಂಬಂಧಗಳಿಗೆ ಮೊದಲ ಆದ್ಯತೆ ಕೊಡಿ ಎಂಬ ಸಂದೇಶ ಈ ಸಿನಿಮಾದಲ್ಲಿದೆ’ ಎಂದರು ನಿರ್ದೇಶಕರು.

ಶಿಲ್ಪಾ ನಾಯಕ್ ಚಿತ್ರದ ನಾಯಕಿ. ಹರ್ಷ ಕಾಗೋಡ್ ಸಂಗೀತ, ಗಿರೀಶ್ ಶಿರಗನಹಳ್ಳಿ ಛಾಯಾಗ್ರಹಣ, ಸುನಯ್ ಎಸ್. ಜೈನ್ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಹೆಸರಘಟ್ಟ, ಕನಕಪುರ ಮೊದಲಾದೆಡೆ ಚಿತ್ರೀಕರಣಗೊಂಡಿದೆ. ❖



ಬೆಂಗಳೂರು ರೇಣುಕಾಚಾರ್ಯ ಮಹಾವಿದ್ಯಾಲಯದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಗರ ಜಿಲ್ಲಾ ಘಟಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರಿಗೆ 'ಹಾನಗಲ್ ಕುಮಾರೇಶ್ವರ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿ ಜಿ.ಎಸ್. ಮೃತ್ಯುಂಜಯ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ್ ಪಿ.ಹಿರೇಮಠ್, ಮೂಲೆಗದ್ದೆಮಠದ ಚನ್ನಬಸವ ಸ್ವಾಮೀಜಿ, ವಿಚಕ್ಷಣದಳ ಎಸ್‌ಪಿ ಜಿ.ಎಸ್. ಯತೀಶ್‌ಚಂದ್ರ, ಮಾಜಿ ಉಪ ಮೇಯರ್ ಬಿ.ಎಸ್. ಪುಟ್ಟರಾಜು ಮತ್ತು ಮಾಜಿ ಮೇಯರ್ ಗಂಗಾಂಬಿಕಾ ಮಲ್ಲಿಕಾರ್ಜುನ್ ಇದ್ದಾರೆ ಪ್ರಜಾವಾಣಿ ಚಿತ್ರ

ಮತಪತ್ರ ಕಸಿದ ಪ್ರಕರಣ: ಎರಡು ತಂಡ ರಚನೆ

ಮಾಗಡಿ: ತಾಲ್ಲೂಕಿನ ತಿಪ್ಪಸಂದ್ರ ಹೋಬಳಿ ಹುಳ್ಳೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ ನಡೆಸಲು ತೆರಳುತ್ತಿದ್ದ ಚುನಾವಣೆ ಅಧಿಕಾರಿಗಳಿಗೆ ಮಾರಕಾಸ್ತ್ರ ತೋರಿಸಿ ಮತಪತ್ರ ಕಿತ್ತುಕೊಂಡು ಪರಾರಿಯಾದ ದುಷ್ಕರ್ಮಿಗಳ ಪತ್ತೆಗೆ ಗುರುವಾರ ಪೊಲೀಸರ ಎರಡು ಪ್ರತ್ಯೇಕ ತಂಡ ರಚಿಸಲಾಗಿದೆ.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್ ಅವರು ಬುಧವಾರ ರಾತ್ರಿ ಹುಳ್ಳೇನಹಳ್ಳಿಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಮತಪತ್ರ ಕಿತ್ತು ಪರಾರಿಯಾದ ಆರೋಪಿಗಳ ಪೋಷಕರನ್ನು ಪೊಲೀಸರು ವಿಚಾರಣೆ ನಡೆಸಿದರು. ಅನುಮಾನಾಸ್ಪದವಾಗಿ ಕಂಡುಬಂದ ಯುವಕರನ್ನು ಠಾಣೆಗೆ ಕರೆದು ವಿಚಾರಣೆ ನಡೆಸಿದರು.

ಕೆಲ ಆರೋಪಿಗಳ ಪೋಷಕರು ತಮ್ಮ ಮಕ್ಕಳನ್ನು ಕರೆಸುವುದಾಗಿ ಭರವಸೆ ನೀಡಿದ್ದರು. ಗುರುವಾರ ಸಂಜೆವರೆಗೆ ಯಾರೂ ಠಾಣೆಗೆ ಹಾಜರಾಗಲಿಲ್ಲ.

ಫೇಸ್‌ಬುಕ್‌ನಲ್ಲಿ ಹೆಸರು ಬದಲಿಸಿ ಸಲುಗೆ • ಯುವತಿಗೆ ಕಿರುಕುಳ ಆರೋಪ

ಠಾಣೆ ಮೆಟ್ಟಿಲೇರಿದ ಯುವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೇಸ್‌ಬುಕ್ ಮೂಲಕ ಯುವತಿಯನ್ನು ಪರಿಚಯ ಮಾಡಿಕೊಂಡು ಸಲುಗೆ ಬೆಳೆಸಿ ಲೈಂಗಿಕ ಕಿರುಕುಳ ನೀಡಿದ್ದು, ಈ ಸಂಬಂಧ ಗಿರಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸ್ಥಳೀಯ ನಿವಾಸಿಯಾಗಿರುವ 25 ವರ್ಷದ ಯುವತಿ ದೂರು ನೀಡಿದ್ದಾರೆ. ಆರೋಪಿ ರಫೀಕ್ ಬಾದ್‌ಶಾ ಅಲಿಯಾಸ್ ಗುರುಪ್ರಸಾದ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಯುವತಿ, ಸಾಮಾಜಿಕ ಮಾಧ್ಯಮ ಫೇಸ್‌ಬುಕ್‌ನಲ್ಲಿ ಖಾತೆ ತೆರೆದಿದ್ದರು. ಗುರುಪ್ರಸಾದ್ ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿಸಿದ್ದ ಆರೋಪಿ, ಯುವತಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದ. ಅದನ್ನು ಯುವತಿ ಸ್ವೀಕರಿಸಿದ್ದರು.'

'ತನ್ನ ಹೆಸರು ಗುರುಪ್ರಸಾದ್ ಎಂಬುದಾಗಿ ಹೇಳಿಕೊಂಡಿದ್ದ ಆರೋಪಿ, ಯುವತಿಯನ್ನು ಭೇಟಿಯಾಗಿದ್ದ. ನಂತರ, ಇಬ್ಬರ ನಡುವೆ ಸ್ನೇಹ ಬೆಳೆದಿತ್ತು. ಕೆಲ ತಿಂಗಳ ನಂತರ ಸಲುಗೆಯೂ ಏರ್ಪಟ್ಟಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಐದು ವರ್ಷ ಸಹಜೀವನ: 'ಕಾಲೇಜು ವ್ಯಾಸಂಗ ಮುಗಿಯುತ್ತಿದ್ದಂತೆ ಯುವತಿ, ಆರೋಪಿ ಜೊತೆ ಒಂದೇ ಮನೆಯಲ್ಲಿ ವಾಸವಿದ್ದರು. ಐದು ವರ್ಷ ಇಬ್ಬರೂ ಸಹಜೀವನ ನಡೆಸಿದ್ದರು. ಆದರೆ, ಇತ್ತೀಚೆಗೆ ಆರೋಪಿಯ ಅಸಲಿ ಹೆಸರು ರಫೀಕ್ ಬಾದ್‌ಶಾ ಎಂಬುದು ಯುವತಿಗೆ ಗೊತ್ತಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸುಳ್ಳು ಹೆಸರು ಹೇಳಿದ್ದನ್ನು ಯುವತಿ ಪ್ರಶ್ನಿಸಿದ್ದರು. ಇದರಿಂದಾಗಿ ಆರೋಪಿ, ಯುವತಿಗೆ ಕಿರುಕುಳ ನೀಡಲಾರಂಭಿಸಿದ್ದ. ಹಲ್ಲೆ ಸಹ ಮಾಡಿದ್ದ. ಎರಡು ವರ್ಷಗಳ ಹಿಂದೆ ಯುವಕನಿಂದ ದೂರವಾಗಿದ್ದ ಯುವತಿ, ತಂದೆ ಮನೆಗೆ ಬಂದು ಉಳಿದುಕೊಂಡಿದ್ದರು. ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದರು'.

ಹಿಂಬಾಲಿಸಿ ಹಲ್ಲೆ: 'ಯುವತಿಯ ತಂದೆ ಮನೆ ಬಳಿ ಬಂದು ಆರೋಪಿ ಗಲಾಟೆ ಮಾಡಿದ್ದ. ತನ್ನೊಂದಿಗೆ ಬರುವಂತೆ ಒತ್ತಾಯಿಸಿದ್ದ. ಆದರೆ, ಯುವತಿ ನಿರಾಕರಿಸಿದ್ದರು' ಎಂದು ಮೂಲಗಳು ಹೇಳಿವೆ.

'ಯುವತಿ ಕೆಲಸಕ್ಕೆ ಹೋಗುವಾಗ, ಬರುವಾಗ ಹಾಗೂ ಇತರೆಡೆ ಓಡಾಡುವಾಗ ಆರೋಪಿ ಹಿಂಬಾಲಿಸಲಾರಂಭಿಸಿದ್ದ. ಹೊಸಕೆರೆಹಳ್ಳಿ ವೆಂಕಟಪ್ಪ ಬಡಾವಣೆ ಬಳಿ ಯುವತಿಯನ್ನು ಇತ್ತೀಚೆಗೆ ಅಡ್ಡಗಟ್ಟಿದ್ದ ಆರೋಪಿ, ಕಪಾಳಕ್ಕೆ ಹೊಡೆದಿದ್ದ. ಕೊಲೆ ಬೆದರಿಕೆಯೊಡ್ಡಿದ್ದ. ಈ ವಿಷಯವನ್ನು ತಂದೆಗೆ ತಿಳಿಸಿದ್ದ ಯುವತಿ, ಠಾಣೆಗೆ ಬಂದು ದೂರು ನೀಡಿದ್ದಾರೆ. ಆರೋಪಿಗೆ ನೋಟಿಸ್ ನೀಡಲಾಗಿದ್ದು, ವಿಚಾರಣೆ ನಡೆಸಬೇಕಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

ಚಪ್ಪಲಿ ಬಾಕ್ಸ್‌ನಲ್ಲಿಟ್ಟಿದ್ದ ಕೀ ಬಳಸಿ ಕಳ್ಳತನ

ಅಪರಾಧ ಸುದ್ದಿ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪಿ ರತ್ನಾ (30) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಕೊಟ್ಟಿಗೆಪಾಳ್ಯ ಒಂದನೇ ಮುಖ್ಯರಸ್ತೆ ನಿವಾಸಿ ರತ್ನಾ, ಸ್ಥಳೀಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದರು. ಮನೆ ಮಾಲೀಕ ನೀಡಿದ್ದ ದೂರು ಆಧರಿಸಿ, ರತ್ನಾ ಅವರನ್ನು ಬಂಧಿಸಲಾಗಿದೆ. ₹ 1.60 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹50 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಿವಾಸಿಯೊಬ್ಬರು ತಮ್ಮ ಮನೆಗೆ ಬೀಗ ಹಾಕಿ, ಅದರ ಕೀಯನ್ನು ಚಪ್ಪಲಿ ಬಾಕ್ಸ್‌ನಲ್ಲಿಟ್ಟು ಸೆ. 10ರಂದು ಬೇರೆ ಊರಿಗೆ ಹೋಗಿದ್ದರು. ಸೆ. 22ರಂದು ಮನೆಗೆ ವಾಪಸು ಬಂದಿದ್ದಾಗ, ಕಳ್ಳತನ ಆಗಿರುವುದು ಗಮನಕ್ಕೆ ಬಂದಿತ್ತು. ಸ್ಥಳೀಯರೇ ಕೃತ್ಯ ಎಸಗಿರುವ ಬಗ್ಗೆ ದೂರುದಾರರು ಅನುಮಾನಪಟ್ಟಿದ್ದರು' ಎಂದರು.

'ಕಳ್ಳತನ ಸಂಬಂಧ ಕೆಲ ಪುರಾವೆಗಳು ಲಭ್ಯವಾಗಿದ್ದವು. ರತ್ನಾ ಅವರನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು. ಚಪ್ಪಲಿ ಬಾಕ್ಸ್‌ನಲ್ಲಿ ಕೀ ಇರಿಸಿದ್ದನ್ನು ರತ್ನಾ ನೋಡಿದ್ದರು. ದೂರುದಾರರು ಬೇರೆ ಊರಿಗೆ ಹೋಗಿರುವುದನ್ನು ತಿಳಿದುಕೊಂಡಿದ್ದ ಆರೋಪಿ, ಅದೇ ಕೀ ಬಳಸಿ ಮನೆ ಬಾಗಿಲು ತೆರೆದು ಕಳ್ಳತನ ಮಾಡಿದ್ದರು. ಈ ಬಗ್ಗೆ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ' ಎಂದರು.

ಹೋಟೆಲ್‌ಗೆ ನುಗ್ಗಿ ಗಲಾಟೆ: ಇಬ್ಬರ ಬಂಧನ

ಬೆಂಗಳೂರು: ಬೆಂಗಳೂರು ಬಂದ್ ವೇಳೆ ಸೆ.26ರಂದು ಹೋಟೆಲ್‌ಗೆ ನುಗ್ಗಿ ಗಲಾಟೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಯೋಗೀಶ್ ಹಾಗೂ ಸೋಮಶೇಖರ್ ರೆಡ್ಡಿ ಬಂಧಿತರು. ಇವರಿಬ್ಬರು ಸ್ಥಳೀಯ ಬಿಜೆಪಿ ಮುಖಂಡರ ಜೊತೆ ಗುರುತಿಸಿಕೊಂಡಿರುವುದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜಯನಗರ ಹಾಗೂ ಸುತ್ತಮುತ್ತ ಬೈಕ್‌ನಲ್ಲಿ ಸುತ್ತಾಡಿದ್ದ ಆರೋಪಿಗಳು, ಅಂಗಡಿಗಳನ್ನು ಒತ್ತಾಯದಿಂದ ಮುಚ್ಚಿಸಿದ್ದರು. 'ಉಡುಪಿ ಹಬ್' ಹೋಟೆಲ್ ಎಂದಿನಂತೆ ತೆರೆದಿತ್ತು. ಹೋಟೆಲ್‌ಗೆ ನುಗ್ಗಿದ್ದ ಆರೋಪಿಗಳು, ಗಾಜಿನ ಟೇಬಲ್‌ಗೆ ಕಲ್ಲಿನಿಂದ ಹೊಡೆದು ಪುಡಿ ಪುಡಿ ಮಾಡಿ ಗಲಾಟೆ ಮಾಡಿದ್ದರು. ಕೃತ್ಯದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.'

'ಹೋಟೆಲ್ ಮಾಲೀಕ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಪ್ರತ್ಯೇಕ ಘಟನೆಯಲ್ಲಿ ಎರಡು ಹೋಟೆಲ್‌ಗಳಲ್ಲೂ ಗಲಾಟೆ ಆಗಿದೆ. ಈ ಬಗ್ಗೆ ಸದ್ಯಕ್ಕೆ ದೂರು ದಾಖಲಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

ಅಪಘಾತ: ಟೆಕಿ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ನಾಮದ ಚಿಲುಮೆ ಬಳಿ ಬುಧವಾರ ರಾತ್ರಿ ಬೈಕ್ ಮತ್ತು ಕಾರ್ ಮಧ್ಯೆ ನಡೆದ ಅಪಘಾತದಲ್ಲಿ ಬೈಕ್ ಸವಾರ ಗೌತಮ್ (32) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗೌತಮ್ ಬೆಂಗಳೂರಿನ ಬಾಣಸವಾಡಿ ನಿವಾಸಿ. ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ತುಮಕೂರಿನಿಂದ ದೇವರಾಯನದುರ್ಗದ ಕಡೆಗೆ ಹೋಗುತ್ತಿದ್ದ ಬೈಕ್ ಮತ್ತು ಊರ್ಡಿಗೆರೆಯಿಂದ ನಗರದತ್ತ ಬರುತ್ತಿದ್ದ ಕಾರು ಮುಖಾಮುಖಿಯಾಗಿ ಅಪಘಾತ ಸಂಭವಿಸಿದೆ.



ಫೆಡರೇಶನ್ ಆಫ್ ಕರ್ನಾಟಕ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ (ಎಫ್‌ಕೆಸಿಸಿಐ) ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಪೀಣ್ಯ ದಾಸರಹಳ್ಳಿ ಸೌಂದರ್ಯ ಶಿಕ್ಷಣ ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಿ ಎಂ. ಕೀರ್ತನ್ ಕುಮಾರ್ ಹಾಗೂ ಅವರ ತಂಡದ ಬಿ.ಎ. ಅಭಿಷೇಕ್, ವಿ. ಸುರೇಶ್ ಬಾಬು, ಸುಶೀಮ ವಿದ್ಯಾರತ್ನ ರಾಜ್, ಸಿ. ಪೆರುಮಾಳ್ ಮತ್ತು ಎಂ. ಕೀರ್ತನ್ ಕುಮಾರ್ ಗೆಲುವು ಸಾಧಿಸಿದರು.

ಬೋನಿಗೆ ಬಿದ್ದ ಕರಡಿ: ನಿಟ್ಟುಸಿರು ಬಿಟ್ಟ ಜನ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಬುಗಡಿಹಳ್ಳಿ ಸುತ್ತಮುತ್ತ ಗ್ರಾಮಗಳಲ್ಲಿ ಓಡಾಡುತ್ತಾ ಜನರಲ್ಲಿ ಭಯ ಮೂಡಿಸಿದ್ದ ಕರಡಿಯೊಂದು ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬುಧವಾರ ರಾತ್ರಿ ಬಿದ್ದಿದೆ.

ಎರಡು ತಿಂಗಳಿಂದ ನರಸೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚನ್ನೋಹಳ್ಳಿ, ಜಾಜೂರು, ಲಕ್ಷ್ಮೀಪುರ, ಬುಗಡಿಹಳ್ಳಿ, ಗೊಲ್ಲರಹಟ್ಟಿ, ಸುತ್ತಮುತ್ತಲ ಗ್ರಾಮಗಳಲ್ಲಿ ರಾತ್ರಿ ತಿರುಗಾಡುತ್ತಿತ್ತು. ಇದರಿಂದ ಜನರು ಮನೆಯಿಂದ ಹೊರಬರಲು ಹೆದರುತ್ತಿದ್ದರು. ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ದೂರು ನೀಡಿದ್ದರು. ಅರಣ್ಯಾಧಿಕಾರಿಗಳು ಕರಡಿಯನ್ನು ಹಿಡಿಯಲು ಬುಗಡಿಹಳ್ಳಿಯ ವಸಂತ್ ಎಂಬುವವರ ಸೀಬೆ ತೋಟದಲ್ಲಿ ಬೋನು ಇಟ್ಟಿದ್ದರು.

ಹಣ್ಣನ್ನು ತಿನ್ನಲು ಬಂದ ಕರಡಿ ಬೋನಿಗೆ ಬಿದ್ದಿದೆ. ಜನರು ತಂಡೋಪತಂಡವಾಗಿ ಬಂದು ಕರಡಿಯನ್ನು ಕುತೂಹಲದಿಂದ ವೀಕ್ಷಿಸಿದರು.



ಬೋನಿಗೆ ಬಿದ್ದಿರುವ ಕರಡಿ

ಬೋನಿಗೆ ಬಿದ್ದ ಕರಡಿಯನ್ನು ಹೊಸಪೇಟೆಗೆ ತೆಗೆದುಕೊಂಡು ಹೋಗಿ ಬಿಟ್ಟು ಬರಲಾಗಿದೆ ಎಂದು ಅರಣ್ಯಾಧಿಕಾರಿ ಶ್ರೀಧರ್ ತಿಳಿಸಿದ್ದಾರೆ.

ಗಲಾಟೆ ಮಾಡಿದ್ದಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯಲ್ಲಿ ಗಣೇಶ್ (43) ಅವರನ್ನು ರಾಡ್‌ನಿಂದ ಹೊಡೆದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ನಾರಾಯಣ್ ನಾಯಕ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಜೆ.ಪಿ. ನಗರದ ನಿವಾಸಿ ಗಣೇಶ್, ಸಾರ್ವಭೌಮನಗರದಲ್ಲಿರುವ ಸ್ನೇಹಿತ ಮಲ್ಲೇಶ್ ನಾಯಕ್ ಮನೆಯಲ್ಲಿ ಉಳಿದುಕೊಂಡಿದ್ದರು. ಮಲ್ಲೇಶ್ ಅವರ ತಮ್ಮನಾದ ನಾರಾಯಣ, ಗಣೇಶ್ ಜೊತೆ ಜಗಳ ತೆಗೆದು ಕೊಲೆ ಮಾಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೋಮ್ ಕೇರ್ ಕೇಂದ್ರದಲ್ಲಿ ಗಣೇಶ್ ಕೆಲಸ ಮಾಡುತ್ತಿದ್ದರು. ಪತ್ನಿ ಹಾಗೂ ಮಕ್ಕಳ ಜೊತೆ ವಾಸವಿದ್ದರು. ಬೀದಿ ಬದಿ ತಿಂಡಿ–ತಿನಿಸು ಮಾರುವ ಮಲ್ಲೇಶ್ ಜೊತೆ ಸ್ನೇಹ ಏರ್ಪಟಿತ್ತು. ಮಲ್ಲೇಶ್ ಅವರು ತಮ್ಮ ನಾರಾಯಣ ಜೊತೆ ವಾಸವಿದ್ದರು. ಇತ್ತೀಚೆಗೆ ಕೆಲಸ ತೊರೆದಿದ್ದ ಗಣೇಶ್, ತಮ್ಮ ಮನೆಗೆ ಹೋಗುವುದನ್ನು ಕಡಿಮೆ ಮಾಡಿದ್ದರು. ಸ್ನೇಹಿತ ಮಲ್ಲೇಶ್ ಅವರ ಮನೆಯಲ್ಲೇ ಉಳಿದುಕೊಂಡಿದ್ದರು. ಗಣೇಶ್, ಮದ್ಯ ವ್ಯಸನಿಯಾಗಿದ್ದರೆಂದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

'ಗಣೇಶ್ ಹಾಗೂ ಮಲ್ಲೇಶ್, ಭಾನುವಾರ ಮನೆಯಲ್ಲಿದ್ದರು. ಇಬ್ಬರು ಸೇರಿ ಮದ್ಯದ ಪಾರ್ಟಿ ಮಾಡಿದ್ದರು. ರಾತ್ರಿ 8 ಗಂಟೆ ಸುಮಾರಿಗೆ ಮಲ್ಲೇಶ್, ಮನೆಯಿಂದ ಹೊರಗೆ ಹೋಗಿದ್ದರು. ಗಣೇಶ್ ಮನೆಯಲ್ಲೇ ಉಳಿದುಕೊಂಡಿದ್ದರು.'

'ತಡರಾತ್ರಿ ಮನೆಗೆ ಬಂದಿದ್ದ ನಾರಾಯಣ್, 'ನನ್ನ ಅಣ್ಣನಿಗೂ ಮದ್ಯ ಕುಡಿಸಿ ಹಾಳು ಮಾಡುತ್ತಿದಿಯಾ? ನೀನು ಸಹ ನಿತ್ಯವೂ ಕುಡಿದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದಿಯಾ. ಇದರಿಂದ ನೆಮ್ಮದಿ ಇಲ್ಲದಂತಾಗಿದೆ. ನೀನು ಮನೆ ಬಿಟ್ಟು ಹೋಗು' ಎಂದು ಗಣೇಶ್ ಜೊತೆ ಜಗಳ ಮಾಡಿದ್ದ. ಮಾತಿಗೆ ಮಾತು ಬೆಳೆದಿತ್ತು. ಇದೇ ಸಂದರ್ಭದಲ್ಲಿ ನಾರಾಯಣ್, ರಾಡ್‌ನಿಂದ ಗಣೇಶ್ ಅವರ ತಲೆಗೆ ಹೊಡೆದಿದ್ದ. ತೀವ್ರ ಗಾಯಗೊಂಡು ಗಣೇಶ್ ಮೃತಪಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

ಈದ್ ಮಿಲಾದ್ ಹಬ್ಬ, ಕರ್ನಾಟಕ ಬಂದ್ ಕರೆ ಹಿನ್ನೆಲೆಯಲ್ಲಿ ದಟ್ಟಣೆ

ಸಾಲುಗಟ್ಟಿದ ವಾಹನ, ಜನ ಸುಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈದ್ ಮಿಲಾದ್ ಹಬ್ಬ ಹಾಗೂ ಕರ್ನಾಟಕ ಬಂದ್ ಕರೆ ಹಿನ್ನೆಲೆಯಲ್ಲಿ ನಗರದ ಬಹುತೇಕ ರಸ್ತೆಗಳಲ್ಲಿ ಗುರುವಾರ ವಿಪರೀತ ದಟ್ಟಣೆ ಉಂಟಾಯಿತು.

ಈದ್ ಮಿಲಾದ್ ಹಬ್ಬದ ಅಂಗವಾಗಿ ನಗರದ ಚಾಮರಾಜಪೇಟೆ, ಶಿವಾಜಿನಗರ, ಕೆ.ಜಿ.ಹಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮೆರವಣಿಗೆ ನಡೆಯಿತು. ಹೆಚ್ಚಿನ ಸಂಖ್ಯೆಯ ಜನರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮೆರವಣಿಗೆ ಹೊರಟಿದ್ದ ರಸ್ತೆಯಲ್ಲಿ ಕೆಲ ಗಂಟೆ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು.

ರಿಚ್ಮಂಡ್ ವೃತ್ತ, ಕಾರ್ಪೊರೇಷನ್ ವೃತ್ತ, ರೆಸಿಡೆನ್ಸಿ ರಸ್ತೆ, ಮೆಜೆಸ್ಟಿಕ್, ಕೆ.ಆರ್. ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಿಪರೀತ ದಟ್ಟಣೆ ಕಂಡುಬಂತು. ವಾಹನಗಳು ಸಾಲುಗಟ್ಟಿ ನಿಂತಿದ್ದವು. ದಟ್ಟಣೆಯಲ್ಲಿ ಸಿಲುಕಿ ಜನರು ಸುಸ್ತಾದರು.

ಬಸ್‌ಗಳಲ್ಲಿ ಹೊರಟಿದ್ದ ಕೆಲ ಪ್ರಯಾಣಿಕರು, ಅರ್ಧದಲ್ಲೇ ಇಳಿದು ನಿಗದಿತ ಸ್ಥಳದತ್ತ ನಡೆದುಕೊಂಡು ಹೋದರು.

ಹೆಬ್ಬಾಳ, ನಾಗವಾರ, ಹೆಣ್ಣೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಹಬ್ಬದ ಅಂಗವಾಗಿ ಮೆರವಣಿಗೆಗಳು ನಡೆದವು. ಹೊರವರ್ತುಲ ರಸ್ತೆ ಹಾಗೂ ಒಳ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತು, ದಟ್ಟಣೆ ಕಂಡುಬಂತು.


ರಿಚ್ಮಂಡ್ ವೃತ್ತದಲ್ಲಿ ಗುರುವಾರ ಉಂಟಾಗಿದ್ದ ದಟ್ಟಣೆಯಲ್ಲಿ ಸಿಲುಕಿದ್ದ ವಾಹನಗಳು – ಪ್ರಜಾವಾಣಿ ಚಿತ್ರ

ಶುಕ್ರವಾರ ಬಂದ್ ಇದ್ದು, ಶನಿವಾರ ಹಾಗೂ ಭಾನುವಾರ ರಜೆ ಇದೆ. ಹೀಗಾಗಿ, ನಗರದ ಹಲವರು, ಶುಕ್ರವಾರ ಸಂಜೆಯಿಂದಲೇ ತಮ್ಮೂರಿನತ್ತ ಹೊರಟರು. ಇದು ಸಹ ದಟ್ಟಣೆಗೆ ಕಾರಣವಾಯಿತು.

ಕೇಂದ್ರ ವಾಣಿಜ್ಯ ಪ್ರದೇಶದ (ಸಿಬಿಡಿ) ರಸ್ತೆಗಳಲ್ಲಿ ಗುರುವಾರ ಸಂಜೆಯಿಂದ ರಾತ್ರಿಯವರೆಗೂ ದಟ್ಟಣೆ ಇತ್ತು. ಕಸ್ತೂರ್ ಬಾ ರಸ್ತೆ, ರಾಜಭವನ ರಸ್ತೆ, ಕ್ವೀನ್ಸ್ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನಗಳು ನಿಧಾನವಾಗಿ ಸಂಚರಿಸಿದವು. ಜೊತೆಗೆ, ಶಾಂತಿನಗರ, ಲಾಲ್‌ಬಾಗ್ ರಸ್ತೆ, ವಿಲ್ಸನ್ ಗಾರ್ಡನ್, ನಿಮ್ಹಾನ್ಸ್ ಹಾಗೂ ಡೇರಿ ವೃತ್ತದಲ್ಲೂ ದಟ್ಟಣೆ ಇತ್ತು. ನಗರದ ಬಹುತೇಕ ಕಡೆ ಬುಧವಾರವೂ ದಟ್ಟಣೆ ಉಂಟಾಗಿತ್ತು.


ದಟ್ಟಣೆಯಲ್ಲಿ ಕುಳಿತು ಆಹಾರ ಬುಕ್ಕಿಂಗ್: ಹೊರವರ್ತುಲ ರಸ್ತೆಯಲ್ಲಿ ಉಂಟಾಗಿದ್ದ ದಟ್ಟಣೆಯಲ್ಲಿ ಸಿಲುಕಿದ್ದ ಕಾರು ಚಾಲಕರೊಬ್ಬರು ಡೊನ್ಜು ಮೂಲಕ ಆಹಾರ ಬುಕ್ಕಿಂಗ್ ಮಾಡಿದ್ದರು. ದಟ್ಟಣೆಯಲ್ಲಿ ಸಿಲುಕಿದ್ದ ಕಾರಿನ ಬಳಿ ಬಂದಿದ್ದ ಡೆಲಿವರಿ ಬಾಯ್, ಆಹಾರ ನೀಡಿ ಹೋದರು. ದಟ್ಟಣೆಯಲ್ಲಿ ಆಹಾರ ತಂದುಕೊಟ್ಟಿದ್ದ ಡೆಲಿವರಿ ಬಾಯ್ ವಿಡಿಯೊವನ್ನು ಚಿತ್ರೀಕರಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಲಾಗಿದೆ.

'ಬೆಂಗಳೂರಿನ ಪರಿಸ್ಥಿತಿ ಇದು. ರಸ್ತೆಯಲ್ಲಿ ದಟ್ಟಣೆ ಉಂಟಾದರೆ, ಊಟ ತರಿಸಿ ತಿನ್ನುವಷ್ಟು ಸಮಯವಿರುತ್ತದೆ' ಎಂದು ಹಲವರು ಸಾಮಾಜಿಕ ಜಾಲ ತಾಣಗಳಲ್ಲಿ ಪ್ರತಿಕ್ರಿಯಿಸಿದ್ದಾರೆ.

ಇಂದಿನಿಂದ ವಿಶ್ವ ಸಾಂಸ್ಕೃತಿಕ ಉತ್ಸವ

ಅಮೆರಿಕದ ವಾಷಿಂಗ್ಟನ್ ಡಿ ಸಿಯಲ್ಲಿ ಆರ್ಟ್ ಆಫ್ ಲಿವಿಂಗ್ ಆಯೋಜನೆ

ಪ್ರಜಾವಾಣಿ ವಾರ್ತೆ


ಶ್ರೀ ಶ್ರೀ ರವಿಶಂಕರ್ ಗುರೂಜಿ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು ಇದೇ 29ರಿಂದ ಅ.1ರವರೆಗೆ 'ವಿಶ್ವ ಸಾಂಸ್ಕೃತಿಕ ಉತ್ಸವ'ವನ್ನು ಅಮೆರಿಕದ ವಾಷಿಂಗ್ಟನ್ ಡಿ ಸಿಯ ನ್ಯಾಷನಲ್ ಮಾಲ್‌ನಲ್ಲಿ ಹಮ್ಮಿಕೊಂಡಿದೆ.

ಸಂಸ್ಥೆಯ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ ನೇತೃತ್ವದಲ್ಲಿ ಈ ಉತ್ಸವ ನಡೆಯಲಿದೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಡಾ. ವಿವೇಕ್ ಮೂರ್ತಿ, ಅಮೆರಿಕದ ಸಂಸದರಾದ ರಿಕ್ ಸ್ಕಾಟ್, ನ್ಯಾನ್ಸಿ ಪೆಲೋಸಿ ಮುಖ್ಯಭಾಷಣಕಾರರಾಗಿ ಭಾಗವಹಿಸಲಿದ್ದಾರೆ. 17 ಸಾವಿರ ಕಲಾವಿದರು, 100ಕ್ಕೂ ಹೆಚ್ಚು ದೇಶಗಳ ಚಿಂತಕರು ಹಾಗೂ 2 ಲಕ್ಷಕ್ಕೂ ಅಧಿಕ ಜನ ಪಾಲ್ಗೊಳ್ಳುವ ನಿರೀಕ್ಷೆಯನ್ನು ಸಂಸ್ಥೆ ಹೊಂದಿದೆ.

'ಜಗತ್ತಿನ ಎಲ್ಲಾ ಜನರ ಸಂಸ್ಕೃತಿಯನ್ನು ಒಗ್ಗೂಡಿಸುವ ವೇದಿಕೆ ಇದಾಗಿದೆ. ನಮ್ಮ ನಡುವಿನ ತಡೆಗೋಡೆಗಳನ್ನು ಇಲ್ಲವಾಗಿಸಿ, ಜಾತಿ, ಧರ್ಮಗಳ ಗಡಿಯನ್ನು ಮೀರುವಂತೆ ಮಾಡುವ ಚೇತೋಹಾರಿಯಾದ ಸಂಗೀತ, ನೃತ್ಯ ಮತ್ತು ವಿವಿಧ ಕಲೆಗಳಲ್ಲಿ ಮಿಂದೇಳುವ ಅವಕಾಶ ಇರಲಿದೆ. ವಿಶ್ವದ ಎಲ್ಲಾ ನಾಯಕರು ಐಕ್ಯತೆ, ಸಾಮರಸ್ಯ, ಸಹಕಾರ ಮತ್ತು ಸಂಸ್ಕೃತಿಯ ಸಂರಕ್ಷಣೆಯ ಕುರಿತು ತಮ್ಮ ಉದ್ದೇಶಗಳನ್ನು ಹಂಚಿಕೊಳ್ಳುತ್ತಾರೆ' ಎಂದು ಆಯೋಜಕರು ತಿಳಿಸಿದ್ದಾರೆ.

2006ರಲ್ಲಿ ಪ್ರಾರಂಭ: ವಿಶ್ವ ಸಾಂಸ್ಕೃತಿ ಉತ್ಸವವನ್ನು 2006ರಲ್ಲಿ ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. 2011ರಲ್ಲಿ ಜರ್ಮನಿಯ ಬರ್ಲಿನ್ ನಗರದಲ್ಲಿ ನಡೆಸಲಾಗಿತ್ತು. ಆಗ ಈ ಉತ್ಸವದಲ್ಲಿ 151 ದೇಶಗಳು ಪಾಲ್ಗೊಂಡು, ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ಧ್ಯಾನ ಮಾಡಲಾಗಿತ್ತು. 2016ರಲ್ಲಿ ದೆಹಲಿಯಲ್ಲಿ ಮೂರನೇ ಉತ್ಸವ ನಡೆದಿತ್ತು ಎಂದು ಸಂಸ್ಥೆ ಹೇಳಿದೆ.

'ವಿಭಿನ್ನ ಗುಣವಿಶೇಷಗಳಿಂದ ಕೂಡಿ, ಖಿನ್ನತೆಗೆ ಒಳಗಾಗಿರುವ ಹಾಗೂ ವಿವಿಧ ವರ್ಗಗಳ ಜನರಿಂದ ಕೂಡಿರುವ ಈ ಪ್ರಪಂಚದಲ್ಲಿ ಎಲ್ಲರೂ ಒಂದಾಗಿ ಸೇರಿ, ಈ ಭೂಗ್ರಹದ ಸಂಪದ್ಭರಿತ ವೈವಿಧ್ಯವನ್ನು ಸಂಭ್ರಮಿಸುವ ಸಮಯ ಒದಗಿ ಬಂದಿದೆ. 'ವಸುದೈವ ಕುಟುಂಬಕಂ' ಎಂಬ ಹೇಳಿಕೆಗೆ ಅನುಸಾರವಾಗಿ ಜೀವಿಸುವ ಸಮಯವು ಇದಾಗಿದೆ' ಎಂದು ಶ್ರೀ ಶ್ರೀ ರವಿಶಂಕರ್ ಗುರೂಜಿ ಹೇಳಿದ್ದಾರೆ.

'ಪ್ರಶಾಂತತೆ ಮತ್ತು ಐಕ್ಯತೆಯನ್ನು ಉದ್ದೀಪಿಸುವ ಸಾಮೂಹಿಕ ಧ್ಯಾನ ಮತ್ತು ವಿವಿಧ ಧಾರ್ಮಿಕ ಶ್ರದ್ಧೆ ಹಾಗೂ ಪ್ರಾರ್ಥನೆಗಳ ಮೂಲಕ ಒಂದು ವಿಶಿಷ್ಟ ಅನುಭವವನ್ನು ಪಡೆದುಕೊಳ್ಳಬಹುದು' ಎಂದು ತಿಳಿಸಿದ್ದಾರೆ.

ಎಸ್‌ಜೆಎಂ ವಿದ್ಯಾಪೀಠಕ್ಕೆ ಸಮರ್ಥ ಅಧ್ಯಕ್ಷ ನೇಮಕವಾಗಲಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ (ಎಸ್‌ಜೆಎಂ) ವಿದ್ಯಾಪೀಠಕ್ಕೆ ಹೊಸ ಅಧ್ಯಕ್ಷರನ್ನು ನೇಮಕ ಮಾಡುವ ತನಕ, ಸದ್ಯ ಮೇಲುಸ್ತುವಾರಿ ಸಮಿತಿಯ ಜವಾಬ್ದಾರಿ ಹೊತ್ತಿರುವ ಬಸವಪ್ರಭು ಸ್ವಾಮೀಜಿಯ ಆಡಳಿತ ಮತ್ತು ನಿರ್ವಹಣೆಯೇ ಮುಂದುವರಿಯಲಿದ್ದು, ಇದು ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರ ನಿಗಾದಲ್ಲೇ ಇರಬೇಕು' ಎಂದು ಹೈಕೋರ್ಟ್ ತೀರ್ಪು ನೀಡಿದೆ.

ಈ ಸಂಬಂಧ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಏಳು ಮೇಲ್ಮನವಿಗಳ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಎಂ.ಜಿ. ಎಸ್.ಕಮಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಕಾಯ್ದಿರಿಸಿದ್ದ ತನ್ನ ತೀರ್ಪನ್ನು ಬುಧವಾರ (ಸೆ.27) ಪ್ರಕಟಿಸಿದೆ. 'ವಿದ್ಯಾಪೀಠದ ಆಡಳಿತದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಂತಹ ಹೊಸ ಅಧ್ಯಕ್ಷರನ್ನು ನೇಮಕ ಮಾಡಬೇಕು. ಹೊಸ ಅಧ್ಯಕ್ಷರನ್ನು ನೇಮಕ ಮಾಡಿದ ಕ್ಷಣದಿಂದಲೇ ಪಿಡಿಜೆ ಪಾತ್ರ ಕೊನೆಗೊಳ್ಳುತ್ತದೆ' ಎಂದು ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

'ಎಸ್‌ಜೆಎಂ ವಿದ್ಯಾಪೀಠವು ನೋಂದಾಯಿತ ಸೊಸೈಟಿಯಾಗಿದ್ದು, ಇದರ ಅಧ್ಯಕ್ಷರು ಮಾತ್ರವೇ ನಿರ್ಧಾರಗಳನ್ನು ತೆಗೆದುಕೊಳ್ಳಬಹುದಾಗಿದೆ. ಆದರೆ, ಈ ವಿದ್ಯಾಪೀಠದ ಅಧ್ಯಕ್ಷ ಎನಿಸಿರುವ ಮಠಾಧಿಪತಿ ಶಿವಮೂರ್ತಿ ಶರಣರು ಸದ್ಯ ಜೈಲಿನಲ್ಲಿರುವ ಕಾರಣ ನೂತನ ಅಧ್ಯಕ್ಷರ ನೇಮಕವಾಗಬೇಕಿದೆ. ಈ ನೇಮಕಾತಿ ಆಗುವ ತನಕ, ಹಂಗಾಮಿ ಆಡಳಿತಾಧಿಕಾರಿಯಾಗಿ ಜಿಲ್ಲಾ ನ್ಯಾಯಾಧೀಶರು ವಿದ್ಯಾಪೀಠದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಾರೆ' ಎಂದು ನಿರ್ದೇಶಿಸುವ ಮೂಲಕ ಎಲ್ಲ ಮೇಲ್ಮನವಿಗಳನ್ನು ವಿಲೇವಾರಿ ಮಾಡಿದೆ.

ಚಿತ್ರಾವಳಿ


ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ಆರ್ಯ ಈಡಿಗ ಸಮಾಜದ ಯೋಗೇಂದ್ರ ಸ್ವಾಮೀಜಿ ನೇತೃತ್ವದ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಗುರುವಾರ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿತು. ಆರ್ಯ ಈಡಿಗ ಕೇಂದ್ರ ಸಂಘದ ಅಧ್ಯಕ್ಷ ತಿಮ್ಮೇಗೌಡರು, ಖಜಾಂಚಿ ವಾಸು, ಶಿರಸಿ ಶಾಸಕ ಭೀಮಣ್ಣನಾಯಕ್, ಬಿಲ್ಲವ ಸಂಘದ ಮುಖಂಡರಾದ ವೇದಕುಮಾರ್ ಇದ್ದರು


ವಿದ್ಯಾಪೋಷಕರ ಸಂಘದಿಂದ ಯಲಹಂಕದ ಶೇಷಾದ್ರಿಪುರ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮವನ್ನು ಶಿಕ್ಷಣತಜ್ಞ ವೂಡೇ ಪಿ. ಕೃಷ್ಣ ಉದ್ಘಾಟಿಸಿದರು. ಎನ್. ಸೊಣ್ಣಪ್ಪ, ರೊನಾಲ್ಡೊ ಕೊಲಾಸೊ, ಕೆ. ಎ. ಮುನೀಂದ್ರ ಕುಮಾರ್, ಎನ್.ಎಸ್. ಶ್ರೀಧರಮೂರ್ತಿ ಇದ್ದಾರೆ

ಸಂಕ್ಷಿಪ್ತ ಸುದ್ದಿ

ಬನ್ನೇರುಘಟ್ಟ ಉದ್ಯಾನಕ್ಕೆ ಇಂದು ರಜೆ

ಆನೇಕಲ್ : ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಶುಕ್ರವಾರ ರಜೆ ಘೋಷಿಸಲಾಗಿದೆ.

ಸಾಮಾನ್ಯವಾಗಿ ಪ್ರತಿವಾರ ಮಂಗಳವಾರ ಉದ್ಯಾನಕ್ಕೆ ರಜೆಯ ದಿನವಾಗಿದ್ದರೂ ಮುಂದಿನ ವಾರ ಮಾತ್ರ ಅಂದು (ಅಕ್ಟೋಬರ್ 3ರಂದು ಮಂಗಳವಾರ) ಪ್ರವಾಸಿಗರಿಗೆ ಉದ್ಯಾನ ತೆರೆದಿರುತ್ತದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವನ್ಯಜೀವಿ ಸಪ್ತಾಹ : ಅಕ್ಟೋಬರ್ 2, 7 ಮತ್ತು 8ರಂದು ಬೆಳಗ್ಗೆ 6.30 ರಿಂದ 9ರವರೆಗೆ ಉದ್ಯಾನದಲ್ಲಿ ಸ್ಥಳೀಯ ಜೀವ ವೈವಿಧ್ಯತೆಯ ದಾಖಲಾತಿ ಮತ್ತು ಛಾಯಗ್ರಹಣಕ್ಕಾಗಿ ಉಚಿತ ಪ್ರಕೃತಿ ನಡಿಗೆ ಆಯೋಜಿಸಲಾಗಿದೆ.

10ವರ್ಷಕ್ಕಿಂತ ಮೇಲ್ಪಟ್ಟವರು ಭಾಗವಹಿಸಬಹುದಾಗಿದೆ. 18ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕಡ್ಡಾಯವಾಗಿ ತಮ್ಮ ಪೋಷಕರೊಂದಿಗೆ ಭಾಗವಹಿಸಬೇಕು. ಒಂದು ತಂಡದಲ್ಲಿ 40 ಮಂದಿಗೆ ಅವಕಾಶವಿರುತ್ತದೆ. ಆಸಕ್ತರು ಸೆಪ್ಟೆಂಬರ್ 30ರ ಸಂಜೆ 5ರೊಳಗಡೆ ಮೊಬೈಲ್ ಸಂಖ್ಯೆ 9035092797 ಹೆಸರು ನೋಂದಾಯಿಸಿಕೊಳ್ಳಬೇಕು.

ಅ. 28ರಿಂದ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಬಸವ ಧರ್ಮ ಪೀಠದ ವತಿಯಿಂದ ಬೀದರ ಜಿಲ್ಲೆ ಬಸವ ಕಲ್ಯಾಣದಲ್ಲಿ ಅ. 28 ರಿಂದ 30ರವರೆಗೆ ಮೂರು ದಿನಗಳ ಕಾಲ 22ನೇ ಕಲ್ಯಾಣ ಪರ್ವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಕೂಡಲಸಂಗಮ ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'28 ರಂದು ಉದ್ಘಾಟನೆ, ಸಮುದಾಯ ಪ್ರಾರ್ಥನೆ, 29ರಂದು ಶರಣ ವಂದನೆ ಮತ್ತು 30ರಂದು ಪೀಠಾರೋಹಣ ಸಮಾರಂಭ ನಡೆಯಲಿದೆ. ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ ರಾಜ್ಯಗಳಿಂದ ಒಂದು ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇದೆ' ಎಂದಿದ್ದಾರೆ.

ಆರೋಗ್ಯ ವಿ.ವಿ: ರಾಜಕೀಯ ಪ್ರತಿಷ್ಠೆ, ಇಚ್ಛಾಶಕ್ತಿ ಕೊರತೆ: ಒಂದೂವರೆ ದಶಕವಾದರೂ ಮೇಲಕ್ಕೇಳದ ಕಟ್ಟಡ

16 ವರ್ಷದಲ್ಲಿ ಐದು ಸಲ ಭೂಮಿಪೂಜೆ

• ಓದೇಶ ಸಕಲೇಶಪುರ

ರಾಮನಗರ: ಇಲ್ಲಿಗೆ ಸಮೀಪದ ಅರ್ಚಕರಹಳ್ಳಿಯಲ್ಲಿ ಉದ್ದೇಶಿತ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಸಂಕೀರ್ಣ ನಿರ್ಮಾಣಕ್ಕೆ ಒಂದೂವರೆ ದಶಕದಲ್ಲಿ ಐದು ಸಲ ಭೂಮಿಪೂಜೆ ನಡೆದಿದೆ.

ಇಬ್ಬರು ಮುಖ್ಯಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಈಗಾಗಲೇ ಶಂಕುಸ್ಥಾಪನೆ ಮಾಡಿದ್ದ ವಿ.ವಿ ಸಂಕೀರ್ಣಕ್ಕೆ ಸ್ಥಳೀಯ ಶಾಸಕರು ಗುರುವಾರ ಐದನೇ ಸಲ ಭೂಮಿಪೂಜೆ ನೆರವೇರಿಸಿದ್ದಾರೆ. ಸರ್ಕಾರ ಶಂಕುಸ್ಥಾಪನೆಗೆ ತೋರಿದ ಉತ್ಸಾಹವನ್ನು ಯೋಜನೆ ಕಾರ್ಯಗತಗೊಳಿಸುವಲ್ಲಿ ತೋರದ ಕಾರಣ ಹದಿನಾರು ವರ್ಷವಾದರೂ ಅರ್ಚಕರಹಳ್ಳಿಯಲ್ಲಿ ಇನ್ನೂ ವಿಶ್ವವಿದ್ಯಾಲಯದ ಸಂಕೀರ್ಣ ತಲೆ ಎತ್ತಿಲ್ಲ. ಬರೀ ಭೂಮಿಪೂಜೆ ನಡೆಯುತ್ತಿದ್ದು, ಯೋಜನಾ ವೆಚ್ಚ ದುಪ್ಪಟ್ಟಾಗಿದೆ.

ಘಟನಾನುಘಟಿ ರಾಜಕೀಯ ನಾಯಕರಿದ್ದರೂ ಜಿಲ್ಲೆಯ ಅಭಿವೃದ್ಧಿಗೆ ಮುನ್ನುಡಿ ಬರೆಯಬೇಕಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ರಾಜಕೀಯ ಮೇಲಾಟ ಮತ್ತು ಇಚ್ಛಾಶಕ್ತಿ ಕೊರತೆಯಿಂದಾಗಿ ನನೆಗುದಿಗೆ ಬೀಳುತ್ತಲೇ ಬಂದಿದೆ.

2007ರಲ್ಲಿ ಮಂಜೂರು: ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್‌.ಡಿ. ಕುಮಾರಸ್ವಾಮಿ ಅವರು ಜಿಲ್ಲೆಗೆ ವಿ.ವಿ ಸಂಕೀರ್ಣ ಮಂಜೂರು ಮಾಡಿದ್ದರು. ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಭೂಮಿಪೂಜೆ ನೆರವೇರಿಸಿದ್ದರು. ಅದಾದ ಬಳಿಕ ಸರ್ಕಾರ ಪತನಗೊಂಡಿದ್ದರಿಂದ ಕಾಮಗಾರಿ ಆರಂಭವಾಗಲಿಲ್ಲ. 2008ರಲ್ಲಿ ಅಸ್ತಿತ್ವಕ್ಕೆ ಬಂದ ಬಿಜೆಪಿ ಸರ್ಕಾರದ ವೈದ್ಯಕೀಯ ಶಿಕ್ಷಣ ಸಚಿವ ರಾಮಚಂದ್ರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಬಿ.ಎನ್. ಬಚ್ಚೇಗೌಡ ಎರಡನೇ ಬಾರಿ ಹಾಗೂ ಅದಾದ ನಂತರ ಜಿಲ್ಲಾ ಉಸ್ತುವಾರಿಯಾದ ಬಿ. ಶ್ರೀರಾಮುಲು ಮತ್ತೊಮ್ಮೆ ಶಂಕುಸ್ಥಾಪನೆ ನೆರವೇರಿಸಿದ್ದರು.

2017ರ ಕಾಂಗ್ರೆಸ್ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದ ಶರಣಪ್ರಕಾಶ ಪಾಟೀಲ ಮತ್ತು ಸಚಿವ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ವಿ.ವಿ ಆಡಳಿತ ಕಚೇರಿಯನ್ನು ನಗರದ ಹಳೆಯ ಕಂದಾಯ ಭವನಕ್ಕೆ ಸ್ಥಳಾಂತರಿಸಲು ಚಾಲನೆ ನೀಡಿದ್ದರು. ಆದರೆ, ಕಚೇರಿ ಆರಂಭವಾಗಲಿಲ್ಲ.

ತೀರಾ ಈಚೆಗೆ (ಮಾರ್ಚ್ 27) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ ಯೋಜನೆಗೆ ನಾಲ್ಕನೇ ಬಾರಿ ಭೂಮಿಪೂಜೆ ಮಾಡಿದರೂ, ಕೆಲಸ ಆರಂಭವಾಗಿರಲಿಲ್ಲ. ಇದೀಗ ರಾಮನಗರ ಶಾಸಕ ಎಚ್‌.ಎ. ಇಕ್ಬಾಲ್ ಹುಸೇನ್ ನೇತೃತ್ವದಲ್ಲಿ ಐದನೇ ಬಾರಿ ಭೂಮಿಪೂಜೆ ನಡೆದಿದೆ.

ಅಂಕಿ-ಅಂಶಗಳು

2007 ಆರೋಗ್ಯ ವಿ.ವಿ ಸಂಕೀರ್ಣ ಮಂಜೂರಾದ ವರ್ಷ


₹330 ಕೋಟಿ ಆರಂಭಿಕ ಯೋಜನಾ ಮೊತ್ತ

₹600 ಕೋಟಿ ಈಗಿನ ಯೋಜನಾ ಮೊತ್ತ

216 ಎಕರೆ ಸದ್ಯ ವಿ.ವಿ ಸಂಕೀರ್ಣ ನಿರ್ಮಾಣವಾಗುತ್ತಿರುವ ಜಾಗ



ಹೀಗಿರಲಿದೆ ರಾಮನಗರದಲ್ಲಿ ನಿರ್ಮಾಣವಾಗಲಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ



ನಾಲ್ಕು ಸಲ ಭೂಮಿಪೂಜೆ ಮಾಡಿದವರು ಕಾಮಗಾರಿ ನಡೆಸಲಿಲ್ಲ. ನಾನೀಗ ಕಾಲೇಜು, ವಿ.ವಿ ಸಂಕೀರ್ಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದು, ಕೆಲಸ ಶುರು ಮಾಡಿಸುತ್ತೇನೆ

ಎಚ್‌.ಎ. ಇಕ್ಬಾಲ್ ಹುಸೇನ್, ಶಾಸಕ



ರಾಜೀವ್ ಗಾಂಧಿ ಆರೋಗ್ಯ ವಿ.ವಿ ನನ್ನ ಕನಸು. ವಿ.ವಿ, ವೈದ್ಯಕೀಯ ಕಾಲೇಜು ಒಂದೆಡೆ ಇರಬೇಕು. ಕನಕಪುರಕ್ಕೆ ಸ್ಥಳಾಂತರಿಸಲು ಬಿಡುವುದಿಲ್ಲ

ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ವೈದ್ಯಕೀಯ ಕಾಲೇಜು ಸ್ಥಳಾಂತರ

ವಿ.ವಿ ಸಂಕೀರ್ಣ ನಿರ್ಮಾಣ ವಿಳಂಬವಾದ ಬೆನ್ನಲ್ಲೇ ಸರ್ಕಾರ ವಿ.ವಿ.ಯ ವೈದ್ಯಕೀಯ ಕಾಲೇಜನ್ನು ಕನಕಪುರಕ್ಕೆ ಸ್ಥಳಾಂತರಿಸಿದೆ. ಇದನ್ನು ವೈದ್ಯಕೀಯ ಶಿಕ್ಷಣ ಸಚಿವರು ಸಹ ಸ್ಪಷ್ಟಪಡಿಸಿದ್ದಾರೆ. ಡಿಸಿಎಂ ಡಿ.ಕೆ. ಶಿವಕುಮಾರ್ ಕೂಡ ರಾಮನಗರ ಕ್ಷೇತ್ರಕ್ಕೆ ಸಮೀಪದ ಮರಳವಾಡಿಯಲ್ಲಿ ಕಾಲೇಜು ನಿರ್ಮಾಣವಾಗಲಿದೆ ಎಂದಿದ್ದಾರೆ. ಸ್ಥಳಾಂತರಕ್ಕೆ ಭಾರಿ ವಿರೋಧ ವ್ಯಕ್ತವಾಗಿದೆ. ಕೆಂಗಲ್ ಹನುಮಂತಯ್ಯ ವೈದ್ಯಕೀಯ ಕಾಲೇಜು ಹೋರಾಟ ಸಮಿತಿ ಹೆಸರಿನಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು, ಸಂಘಟನೆಗಳು 8ರಂದು ರಾಮನಗರ ಬಂದ್ ಮಾಡಿ ಆಕ್ರೋಶ ವ್ಯಕ್ತಪಡಿಸಿವೆ. ಲೋಕಸಭಾ ಚುನಾವಣೆಯಲ್ಲಿ ಡಿ.ಕೆ ಸಹೋದರರ ವಿರುದ್ಧ ಈ ವಿಷಯವನ್ನು ಅಸ್ತ್ರವಾಗಿಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ.

ಹೈಕೋರ್ಟ್‌ನಲ್ಲಿ ಪಿಐಎಲ್

ಕಾಲೇಜು ಸ್ಥಳಾಂತರ ವಿರುದ್ಧ ಸಮಿತಿಯು ರೈತರೊಂದಿಗೆ ಕಾನೂನು ಹೋರಾಟಕ್ಕೂ ಮುಂದಾಗಿದ್ದು ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದೆ. 'ವಿ.ವಿ ಜೊತೆಗೆ ವೈದ್ಯಕೀಯ ಕಾಲೇಜು ಸಹ ನಿರ್ಮಿಸಬೇಕು. ಕನಕಪುರಕ್ಕೆ ಸ್ಥಳಾಂತರ ಮಾಡುವುದಾದರೆ, ನಮ್ಮ ಭೂಮಿ ವಾಪಸ್ ಕೊಡಬೇಕು ಎಂದು ಒತ್ತಾಯಿಸಿದ್ದೇವೆ' ಎಂದು ಸಮಿತಿ ಅಧ್ಯಕ್ಷ ಸಬ್ಕೆರೆ ಶಿವಲಿಂಗಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಯೋಜನಾ ವೆಚ್ಚ ಹೆಚ್ಚಳ

ವಿ.ವಿ ನಿರ್ಮಾಣ ವಿಳಂಬವಾದಂತೆ ಯೋಜನಾ ವೆಚ್ಚ ಏರಿತು. 2007ರಲ್ಲಿ ₹330 ಕೋಟಿ ಇದ್ದ ವೆಚ್ಚ, 2017ರಲ್ಲಿ ₹580 ಕೋಟಿಗೆ ಜಿಗಿಯಿತು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಮೊತ್ತ ₹600 ಕೋಟಿಗೆ ಬಂದು ನಿಂತಿತು. ನಿರ್ಮಾಣದ ಗುತ್ತಿಗೆ ಪಡೆದಿರುವ ಸ್ಟಾರ್ ಇನ್‌ಫ್ರಾ ಟೆಕ್ ಕಂಪನಿಗೆ ಈಗಾಗಲೇ ₹300 ಕೋಟಿ ಪಾವತಿಯಾಗಿದ್ದು, ಕಾಮಗಾರಿ ಶುರುವಾಗಬೇಕಿದೆ.

ಕೋರ್ಟ್‌ನಲ್ಲಿ ಪರಿಹಾರ ವ್ಯಾಜ್ಯ

ವಿ.ವಿ ಸಂಕೀರ್ಣಕ್ಕಾಗಿ ಜಮೀನು ಕೊಟ್ಟವರ ಪೈಕಿ ಕೆಲವರು ಆರಂಭದಿಂದಲೇ ಹೆಚ್ಚಿನ ಪರಿಹಾರಕ್ಕಾಗಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಆ ಭೂಮಿ ಹೊರತುಪಡಿಸಿ 216 ಎಕರೆ ಜಾಗದಲ್ಲಿ ಕಾಮಗಾರಿ ಆರಂಭಿಸಲು ಸಿದ್ಧತೆ ನಡೆದಿದೆ. ಆರೋಗ್ಯ ವಿ.ವಿ ಕಾಯ್ದೆ ಪ್ರಕಾರ ಸಂಕೀರ್ಣದಲ್ಲಿ ವಿ.ವಿ ಆಡಳಿತ ಕಚೇರಿ, ವೈದ್ಯಕೀಯ ಕಾಲೇಜು, ಹಾಸ್ಟೆಲ್ ಸೇರಿ ಇತರ ಕಟ್ಟಡಗಳು ಸ್ಥಳದಲ್ಲಿ ನಿರ್ಮಾಣವಾಗಬೇಕಿದೆ.

ಡಿಕೆಶಿ ಭೇಟಿಯಾದ ಬಿಕೆಎಚ್, ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್, ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಗುರುವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿ ಬಿ.ಕೆ. ಹರಿಪ್ರಸಾದ್ ಚರ್ಚೆಗೆ ಕಾರಣರಾಗಿದ್ದರು. ಹರಿಪ್ರಸಾದ್‌ಗೆ ಹೈಕಮಾಂಡ್, ನೋಟಿಸ್ ನೀಡಿತ್ತು. ಅವರು ಉತ್ತರವನ್ನೂ ನೀಡಿದ್ದರು.

ಹರಿಪ್ರಸಾದ್ ಮತ್ತು ಮುನಿಯಪ್ಪ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಲೋಕಸಭೆ ಚುನಾವಣೆಯ ವಿಚಾರವಾಗಿ ಚರ್ಚಿಸಲು ಅವರು ಬಂದಿದ್ದರು. ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನು ಆದಷ್ಟು ಬೇಗ ನೇಮಕ ಮಾಡುವಂತೆ ಮುನಿಯಪ್ಪ ಸಲಹೆ ನೀಡಿದರು' ಎಂದರು.

ಮುನಿಯಪ್ಪ ಮಾತನಾಡಿ, 'ಹರಿಪ್ರಸಾದ್ ನನಗಿಂತ ಮೊದಲೇ ಬಂದು ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದರು. ಹರಿಪ್ರಸಾದ್ ಸ್ಥಾನಮಾನ ವಿಚಾರದಲ್ಲಿ ಹೈಕಮಾಂಡ್ ನಿರ್ಧರಿಸಲಿದೆ. ನಿಗಮ–ಮಂಡಳಿಗಳಿಗೆ ಶೀಘ್ರ ನೇಮಕ ಮಾಡಬೇಕು. ಕಾರ್ಯಕರ್ತರಿಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದ್ದೇವೆ. ಈ ಬಗ್ಗೆ ಪರಿಶೀಲಿಸುವುದಾಗಿ ಡಿಕೆಶಿ ಭರವಸೆ ನೀಡಿದ್ದಾರೆ' ಎಂದರು.

ಪರಿಷತ್ ಚುನಾವಣೆಗೆ ತಯಾರಿ: 'ವಿಧಾನ ಪರಿಷತ್ ಚುನಾವಣೆ ಬಗ್ಗೆ ಈಶ್ವರ ಖಂಡ್ರೆ, ರಾಮಲಿಂಗಾ ರೆಡ್ಡಿ, ಪ್ರಿಯಾಂಕ್ ಖರ್ಗೆ ಸೇರಿ ಎಲ್ಲ ಭಾಗದ ನಾಯಕರ ಜತೆ ಚರ್ಚೆ ನಡೆಸಲಾಗುತ್ತಿದೆ. ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಶೀಘ್ರ ಆಯ್ಕೆ ಮಾಡಲು ಸಲಹೆ ಪಡೆಯಲಾಗುತ್ತಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಜಗದೀಶ ಶೆಟ್ಟರ್ ನೇತೃತ್ವದಲ್ಲಿ ಮಾಜಿ ಶಾಸಕರು ಭೇಟಿಯಾದ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಬಿಜೆಪಿ– ಜೆಡಿಎಸ್ ಮೈತ್ರಿ ವಿಚಾರವಾಗಿ ಬಹಳಷ್ಟು ಜನರಿಗೆ ಸಿಟ್ಟಿದೆ. ಸಿಎಂ ಮತ್ತು ನಾನು ಈ ವಿಚಾರವಾಗಿ ಶುಕ್ರವಾರ ಮಾತನಾಡುತ್ತೇವೆ' ಎಂದರು.

ಸಾಕ್ಷ್ಯಚಿತ್ರದಲ್ಲಿ ದೇವದಾಸಿ ಬದುಕಿನ ಒಳನೋಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಪುತ್ತೂರಿನ ಮಹಿಳಾ ಪದವಿ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕಿ ಪೂರ್ಣಿಮಾ ರವಿ ಉತ್ತರ ಕರ್ನಾಟಕದ ಹಲವಾರು ಗ್ರಾಮಗಳಿಗೆ ಭೇಟಿ ನೀಡಿ ದೇವದಾಸಿಯರ ಕುರಿತ ಸಾಕ್ಷ್ಯಚಿತ್ರ ನಿರ್ಮಿಸಿದ್ದಾರೆ.

ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಪ್ರಾಧ್ಯಾಪಕಿ ನಯನಾ ಕಶ್ಯಪ್ ಮಾರ್ಗದರ್ಶನದಲ್ಲಿ ಮಂಗಳೂರು ವಿ.ವಿ.ಯಲ್ಲಿ ಪಿಎಚ್‌.ಡಿ ಮಾಡುತ್ತಿದ್ದು, 'ರೆಪ್ರಸೆಂಟೇಷನ್ಸ್ ಆಫ್ ದಿ ದೇವದಾಸಿ ಟ್ರೆಡಿಷನ್ ಇನ್ ಸೆಲೆಕ್ಟ್ ಇಂಡಿಯನ್ ಇಂಗ್ಲಿಷ್ ನರೇಟಿವ್ಸ್' ಅವರ ಸಂಶೋಧನೆಯ ವಿಷಯವಾಗಿದೆ.

ಅಧ್ಯಯನದ ವೇಳೆ ಅವರು ದೇವದಾಸಿಯರ ಬದುಕನ್ನು ಸಮೀಪದಿಂದ ಗಮನಿಸಿದ್ದಾರೆ. 'ಒಡಲ ವೇದನೆ'ಯನ್ನು ಅರಗಿಸಿಕೊಂಡು, ಸಮಾಜದಲ್ಲಿ ಎಲ್ಲರೊಡನೆ ಜೀವನ ನಡೆಸುತ್ತಿರುವ ಅವರಿಗೆ ಸರ್ಕಾರ ನೆರವಾಗಬೇಕೆಂಬ ಹಂಬಲದಿಂದ ಸಾಕ್ಷಚಿತ್ರ ನಿರ್ಮಿಸಿದ್ದಾರೆ.

'ಲೇಖಕಿ ಸುಧಾಮೂರ್ತಿ ಅವರ 'ಥ್ರೀ ಥೌಸಂಡ್ ಸ್ಟಿಚಸ್' ಕೃತಿಯಲ್ಲಿ ದೇವದಾಸಿಯರ ಬಗೆಗಿನ ಒಂದು ಅಧ್ಯಾಯ ಇತ್ತು. ಇದೇ ವಿಷಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದೆ. ಅಧ್ಯಯನ ಮಾಡುವಾಗ ವಿಜಯಪುರ, ಕೊಪ್ಪಳ, ದಾವಣಗೆರೆಯಲ್ಲಿ ದೇವ ದಾಸಿಯರ ಸಂಖ್ಯೆ ಹೆಚ್ಚಿರುವುದು ಗೊತ್ತಾಯಿತು. ದೇವದಾಸಿ ವಿಮೋಚನಾ ಸಂಘದವರ ನೆರವಿನೊಂದಿಗೆ 40 ದೇವ ದಾಸಿಯರನ್ನು ಮಾತನಾಡಿಸಿ, ಸಾಕ್ಷ್ಯ ಚಿತ್ರ ತಯಾರಿಸಿದೆ' ಎನ್ನುತ್ತಾರೆ ಪೂರ್ಣಿಮಾ.



ದೇವದಾಸಿಯರು ವಾಸಿಸುವ ಪ್ರದೇಶದ ಮೂಲ ಸೌಕರ್ಯ ಅಭಿವೃದ್ಧಿ, ಅವರಿಗೆ ನೆಲೆ ಒದಗಿಸಲು ಸ್ವಯಂಸೇವಾ ಸಂಸ್ಥೆಗಳು ಮುಂದೆ ಬರಬೇಕು

ಪೂರ್ಣಿಮಾ ರವಿ

ಸಾಕ್ಷ್ಯಚಿತ್ರ ನಿರ್ಮಾಪಕಿ

'ಗಾಡ್ಸ್ ವೈವ್ಸ್ ಮೆನ್ಸ್ ಸ್ಲೇವ್ಸ್ ತಲೆಬರಹದ ಸಾಕ್ಷ್ಯಚಿತ್ರದಲ್ಲಿ ದೇವದಾಸಿಯರಾಗಿರುವ 100ಕ್ಕೂ ಹೆಚ್ಚು ಮಹಿಳೆಯರು ಇದ್ದಾರೆ. ಅವರಲ್ಲಿ 40 ಮಂದಿ ಮಾತನಾಡಲು ಮುಂದೆ ಬಂದಿದ್ದಾರೆ. ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ಅವುಗಳ ಎಡಿಟಿಂಗ್ ಮಾಡಿದೆವು. 78 ನಿಮಿಷದ ಸಾಕ್ಷ್ಯಚಿತ್ರ ಇದಾಗಿದೆ. ಅಕ್ಟೋಬರ್‌ನಲ್ಲಿ ಬಿಡುಗಡೆ ಮಾಡುವ ಉದ್ದೇಶವಿದೆ' ಎಂದು ಅವರು ವಿವರಿಸಿದರು.

'ದೇವದಾಸಿ ವಿಮೋಚನಾ ಸಂಘದ ಲೆಕ್ಕಾಚಾರದ ಪ್ರಕಾರ 80 ಸಾವಿರದಷ್ಟು ದೇವದಾಸಿಯರು ರಾಜ್ಯದಲ್ಲಿದ್ದಾರೆ. 2008ರಲ್ಲಿ ನಡೆದ ಸಮೀಕ್ಷೆಯಂತೆ ರಾಜ್ಯದಲ್ಲಿ ಇರುವುದು 45 ಸಾವಿರ ದೇವದಾಸಿಯರು ಮಾತ್ರ. ಈ ಸಮೀಕ್ಷೆ ಆಧರಿಸಿ 35 ವರ್ಷ ಮೇಲ್ಪಟ್ಟವರಿಗೆ ಮಾತ್ರ ಮಾಸಿಕ ಪಿಂಚಣಿ ಸಿಗುತ್ತಿದೆ. ಈಗಲೂ ಅನೇಕರು ಪಿಂಚಣಿಯಿಂದ ವಂಚಿತರಾಗಿದ್ದಾರೆ' ಎಂದು ಪೂರ್ಣಿಮಾ ಪ್ರತಿಕ್ರಿಯಿಸಿದರು.

ಬೀದರ್‌ನಲ್ಲಿ ಭಾರಿ ಮಳೆ; ಹೊಳೆಯಂತೆ ಹರಿದ ನೀರು

ಗೋಡೆ ಕುಸಿದು ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಬೀದರ್: ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಬಾಜೋಳಗಾ ಗ್ರಾಮದಲ್ಲಿ ಗುರುವಾರ ಸಂಜೆ ಸುರಿದ ಭಾರಿ ಮಳೆಗೆ ಮನೆಯ ಗೋಡೆ ಕುಸಿದು ಎಂಟು ವರ್ಷದ ಬಾಲಕಿ ಮೃತಪಟ್ಟಿದ್ದಾಳೆ.

ಸಂಧ್ಯಾರಾಣಿ ಸಂಜುಕುಮಾರ ಕಾಂಬಳೆ ಮೃತ ಬಾಲಕಿ.

ಈ ಬಾಲಕಿಯ ಮನೆ ಮುಂಭಾಗದಲ್ಲಿದ್ದ ಮನೆ ಕಲ್ಲಪ್ಪ ಶಂಕರ ಜಿಳ್ಳೆ ಎಂಬುವರಿಗೆ ಸೇರಿದೆ. ಶಿಥಿಲಾವಸ್ಥೆಯಲ್ಲಿದ್ದ ತಗಡಿನ ಒಂದು ಕೋಣೆಯ ಈ ಮನೆಯಲ್ಲಿ ಯಾರೂ ಇರುತ್ತಿರಲಿಲ್ಲ. ಕೆಲ ದಿನಗಳಿಂದ ಸುರಿಯುತ್ತಿದ್ದ ಜಿಟಿಜಿಟಿ ಮಳೆಗೆ ಮನೆಗೋಡೆ ಮತ್ತಷ್ಟು ನೆನೆದಿದ್ದವು. ಈ ಮನೆ ಪಕ್ಕದಲ್ಲಿ ಬಾಲಕಿ ಆಟವಾಡುವಾಗ ಗೋಡೆ ಕುಸಿದು ತಲೆ ಹಿಂಭಾಗ, ತಲೆ ಸೇರಿದಂತೆ ಇತರೆಡೆ ಗಂಭೀರ ಗಾಯವಾಗಿ ತೀವ್ರ ರಕ್ತಸ್ರಾವವಾಗಿತ್ತು. ಚಿಕಿತ್ಸೆಗಾಗಿ ಹುಡುಗಿಯನ್ನು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ತರುವಷ್ಟರಲ್ಲಿ ಕೊನೆಯುಸಿರು ಎಳೆದಿದ್ದಾಳೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಹೊಳೆಯಂತೆ ಹರಿದ ನೀರು: ಗುರುವಾರ ಸಂಜೆ ಒಂದು ಗಂಟೆಗೂ ಹೆಚ್ಚು ಕಾಲ ಬಿರುಗಾಳಿ ಸಮೇತ ಸುರಿದ ಭಾರಿ ಮಳೆಗೆ ನಗರದಲ್ಲಿ ರಸ್ತೆಯ ಮೇಲೆ ನೀರು ಹೊಳೆಯಂತೆ ಹರಿಯಿತು. ಇದರಿಂದ ವಾಹನ ಸವಾರರು, ಪಾದಚಾರಿಗಳು ಸಂಚರಿಸಲು ಕಷ್ಟಪಟ್ಟರು. ಮನ್ನಳ್ಳಿ ರಸ್ತೆಯಲ್ಲಿ ಎರಡು ಮರಗಳು ನೆಲಕ್ಕುರುಳಿ ಬಿದ್ದದ್ದರಿಂದ ವಾಹನ ಸಂಚಾರಕ್ಕೆ ತೊಡಕಾಯಿತು.

ನಗರದ ಹಾರೂರಗೇರಿ, ಮನ್ನಳ್ಳಿ ರಸ್ತೆ, ಕೋರ್ಟ್, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ಚೌಬಾರ ಬಳಿ ಅಪಾರ ಪ್ರಮಾಣದ ನೀರು ರಸ್ತೆಯಲ್ಲಿ ಸಂಗ್ರಹಗೊಂಡಿದ್ದರಿಂದ ಜನ ತೀವ್ರ ಸಮಸ್ಯೆ ಎದುರಿಸಿದರು. ಮೂರು ದಿನಗಳಿಂದ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಮಳೆಯಾಗುತ್ತಿದೆ.



ಬೀದರ್‌ನಲ್ಲಿ ಗುರುವಾರ ಸಂಜೆ ಸುರಿದ ಭಾರಿ ಮಳೆಗೆ ಜಿಲ್ಲಾ ನ್ಯಾಯಲಯದ ಎದುರಿನ ಮುಖ್ಯರಸ್ತೆಯಲ್ಲಿ ನೀರು ಹೊಳೆಯಂತೆ ಹರಿದಿದ್ದರಿಂದ ವಾಹನ ಸಂಚಾರಕ್ಕೆ ತೊಡಕಾಯಿತು

ಮಡಿಕೇರಿಯಲ್ಲಿ ನಿರಂತರ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಮಡಿಕೇರಿ ನಗರದಲ್ಲಿ ಗುರುವಾರ ಮಳೆ ಬಿರುಸು ಪಡೆದಿದೆ. ಬೆಳಿಗ್ಗೆಯಿಂದ ನಿರಂತರವಾಗಿ ಮಳೆ ಬೀಳುತ್ತಿದ್ದು, ಚಳಿಯ ವಾತಾವರಣ ಮೂಡಿದೆ. ಮೈಸೂರಿನಲ್ಲೂ ಬೆಳಿಗ್ಗೆಯಿಂದ ಚಳಿಗಾಳಿ ಬೀಸಿತ್ತು.

ಇಂದು ಮೂರು ಜಿಲ್ಲೆಗಳಿಗೆ 'ಆರೆಂಜ್', 'ಎಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಕೆಲವೆಡೆ ಶುಕ್ರವಾರ ಭಾರಿ ಮಳೆಯಾಗುವ ಸಾಧ್ಯತೆ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ತಲಾ ಮೂರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡಕ್ಕೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಬೆಳಗಾವಿ, ಧಾರವಾಡ ಹಾಗೂ ಚಾಮರಾಜನಗರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಕರಾವಳಿಯ ಎಲ್ಲಾ ಜಿಲ್ಲೆಗಳಲ್ಲಿ, ಉತ್ತರ ಒಳನಾಡಿನ ಧಾರವಾಡ, ಬೆಳಗಾವಿ ಹಾಗೂ ದಕ್ಷಿಣ ಒಳನಾಡಿನ ಚಾಮರಾಜನಗರ ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆಯಾಗಲಿದೆ. ಕರಾವಳಿಯಲ್ಲಿ ಬಿರುಗಾಳಿಯು ಗಂಟೆಗೆ 45 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು. ಬೆಂಗಳೂರು ನಗರದಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರುತ್ತದೆ. ಸಂಜೆ ಅಥವಾ ರಾತ್ರಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ 24 ಗಂಟೆಗಳಲ್ಲಿ ಪಣಂಬೂರು, ಉಡುಪಿಯ ಕಾರ್ಕಳ, ಕೋಟ ಹಾಗೂ ಗದಗದ ನರಗುಂದದಲ್ಲಿ ಗರಿಷ್ಠ (ತಲಾ 5 ಸೆಂ.ಮೀ) ಮಳೆಯಾಗಿದೆ ಎಂದು ಇಲಾಖೆ ತಿಳಿಸಿದೆ.

ಕುಣಿಗಲ್ ಕುದುರೆ ಫಾರಂ ಗುತ್ತಿಗೆ, ಮಾರಾಟ ಇಲ್ಲ

ಪ್ರಜಾವಾಣಿ ವಾರ್ತೆ

ಕುಣಿಗಲ್: ಕುಣಿಗಲ್ ಕುದುರೆ ಸಾಕಾಣಿಕಾ ಕೇಂದ್ರವನ್ನು (ಸ್ಟಡ್ ಫಾರಂ) 30 ವರ್ಷ ಗುತ್ತಿಗೆ ನೀಡಲು ಅಥವಾ ಮಾರಾಟ ಮಾಡಲು ಕಾಂಗ್ರೆಸ್ ಸರ್ಕಾರ ಅವಕಾಶ ನೀಡುವುದಿಲ್ಲ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ.ಸುರೇಶ್ ಹೇಳಿದ್ದಾರೆ.

30 ವರ್ಷದ ಅವಧಿಗೆ ಈ ಸ್ಟಡ್ ಫಾರಂ ಗುತ್ತಿಗೆ ನೀಡಲು ಬಿಜೆಪಿ ಸರ್ಕಾರ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿತ್ತು. ಆದರೆ, ಹಿಂದಿನ ಸರ್ಕಾರದ ನಿರ್ಧಾರ ಕೈಬಿಡಲು ನಿರ್ಧರಿಸಲಾಗಿದೆ ಎಂದು ಗುರುವಾರ ಸ್ಟಡ್ ಫಾರಂಗೆ ಭೇಟಿ ನೀಡಿದ ವೇಳೆ ಸುದ್ದಿಗಾರರಿಗೆ ತಿಳಿಸಿದರು.

'ಈಗ ಸರ್ಕಾರ ಬದಲಾಗಿದೆ. ಸರ್ಕಾರದ ಆಸ್ತಿಯನ್ನು ಯಾರಿಗೂ ಗುತ್ತಿಗೆ ಅಥವಾ ಮಾರಾಟ ಮಾಡಲು ನಾವು ಅವಕಾಶ ನೀಡುವುದಿಲ್ಲ. ಸರ್ಕಾರವೇ ಈ ಆಸ್ತಿಯನ್ನು ಉಳಿಸಿಕೊಂಡು, ಅಭಿವೃದ್ಧಿ ಪಡಿಸಲಿದೆ. ಇದರಿಂದ ಹಲವರಿಗೆ ಉದ್ಯೋಗ ಮತ್ತು ಜೀವನಕ್ಕೆ ದಾರಿಯಾಗಲಿದೆ' ಎಂದು ಅವರು ಸ್ಪಷ್ಟಪಡಿಸಿದರು.

ಈ ವಿಷಯವನ್ನು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ. ಸರ್ಕಾರವೇ ಸ್ಟಡ್ ಫಾರಂ ಉಳಿಸಿಕೊಳ್ಳುವ ಬಗ್ಗೆ ಅವರೂ ಸಮ್ಮತಿ ಸೂಚಿಸಿದ್ದಾರೆ. ಸ್ಟಡ್ ಫಾರಂ ಜತೆ ಕಾರ್ಮಿಕರ ಕಲ್ಯಾಣಕ್ಕೂ ಆದ್ಯತೆ ನೀಡಲಾಗುವುದು ಎಂದು ಅವರು ತಿಳಿಸಿದರು.

ಶಾಸಕ ಡಾ.ರಂಗನಾಥ್, ಸ್ಟಡ್ ಫಾರಂ ವ್ಯವಸ್ಥಾಪಕ ಡಾ.ದಿನೇಶ್ ಜೊತೆಗಿದ್ದರು.

ಇಳಂತಿಲದ ಕಾರ್ಮಿಕನಿಗೆ ಒಲಿದ ₹50 ಲಕ್ಷ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಇಲ್ಲಿಗೆ ಸಮೀಪದ ಇಳಂತಿಲ ಗ್ರಾಮದ ಕಾರ್ಮಿಕ, ಎನ್ಮಾಡಿಯ ಚಂದ್ರಯ್ಯ ಕುಂಬಾರ ಅವರಿಗೆ ಲಾಟರಿಯಲ್ಲಿ ₹50 ಲಕ್ಷ ಬಹುಮಾನ ಬಂದಿದೆ.

ಮೇಸ್ತ್ರಿಯಾಗಿರುವ ಚಂದ್ರಯ್ಯ ಅವರು ಕಾನತ್ತೂರು ದೈವಸ್ಥಾನಕ್ಕೆ ಹೋದಾಗ ಅಲ್ಲಿನ ಬೊಳ್ವು ಲಾಟರಿ ಏಜೆನ್ಸಿಯಿಂದ ₹500 ನೀಡಿ ಕೇರಳ ರಾಜ್ಯದ 'ಓಣಂ ಬಂಪರ್ ಲಾಟರಿ' ಟಿಕೆಟ್ ಖರೀದಿಸಿದ್ದರು. ಅದರ ಬಂಪರ್ ಬಹುಮಾನ ₹25 ಕೋಟಿ ಆಗಿದ್ದು, ಚಂದ್ರಯ್ಯ ಅವರು 3ನೇ ಬಹುಮಾನ ಗೆದ್ದಿದ್ದಾರೆ.

ಕಷ್ಟವನ್ನು ದೇವರು ಅರಿತಿರಬೇಕು: ಮಾಧ್ಯಮಗಳ ಜತೆ ಸಂತಸ ಹಂಚಿಕೊಂಡ ಚಂದ್ರಯ್ಯ ಅವರು, 'ನಾನು ಜನತಾ ಕಾಲೊನಿಯಲ್ಲಿ 5 ಸೆಂಟ್ಸ್ ಜಾಗದಲ್ಲಿ ನೆಲೆಸಿದ್ದೇನೆ. ಪತ್ನಿ ಹಾಗೂ ನಾಲ್ವರು ಹೆಣ್ಣು ಮಕ್ಕಳಿದ್ದು, ಇಬ್ಬರು ಪುತ್ರಿಯರಿಗೆ ಮದುವೆ ಮಾಡಿಸಿದ್ದೇನೆ. ಒಬ್ಬಾಕೆ ಪದವಿ, ಮತ್ತೊಬ್ಬಳು ಅರೆ ವೈದ್ಯಕೀಯ ಕೋರ್ಸ್ ಓದುತ್ತಿದ್ದಾಳೆ. ನಾನೊಬ್ಬನೇ ದುಡಿದು ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದೇನೆ. ಲಾಟರಿಯಲ್ಲಿ ಬಹುಮಾನ ಬಂದದ್ದು ಖುಷಿ ಕೊಟ್ಟಿದೆ. ಮಕ್ಕಳ ಮದುವೆ, ಶಿಕ್ಷಣ ಎಂದು ₹10 ಲಕ್ಷ ಸಾಲ ಮಾಡಿದ್ದೇನೆ. ಅದನ್ನು ತೀರಿಸಲು ಆದ್ಯತೆ ನೀಡುತ್ತೇನೆ. ನನಗೆ ಲಾಟರಿ ಟಿಕೆಟ್ ಖರೀದಿಸುವ ಚಟ ಇಲ್ಲ. ಅಪರೂಪಕ್ಕೆ ಈ ಹಿಂದೆಯೂ ಟಿಕೆಟ್ ಖರೀದಿಸಿದ್ದೇನೆ. ಈ ಬಾರಿ ಬಹುಮಾನ ಬಂದಿದೆ. ನನ್ನ ಕಷ್ಟವನ್ನು ದೇವರು ಅರಿತಿರಬೇಕು' ಎಂದರು.

‘ಈದ್ ಮಿಲಾದ್’ ಆಚರಣೆ ನಡುವೆಯೂ ಹೋರಾಟಕ್ಕೆ ಮುಸ್ಲಿಮರ ಬೆಂಬಲ

ಕಾವೇರಿ ನದಿಗೆ ಮಿನರಲ್ ನೀರು, ಕಣ್ಣೀರು

ಪ್ರಜಾವಾಣಿ ವಾರ್ತೆ


ಮಂಡ್ಯ ರಕ್ಷಣಾ ವೇದಿಕೆ ಸದಸ್ಯರು ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ ಮೇಲಿಂದ ಕಾವೇರಿ ನದಿಗೆ ಮಿನರಲ್ ನೀರು ಸುರಿದು ಪ್ರತಿಭಟನೆ ನಡೆಸಿದರು

ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು ಗುರುವಾರ ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ ಮೇಲಿಂದ ನದಿಗೆ ಮಿನರಲ್ ವಾಟರ್ ಸುರಿದು ಪ್ರತಿಭಟಿಸಿದರು.

ಸುಮಾರು 200 ಲೀಟರ್‌ಗೂ ಹೆಚ್ಚು ನೀರಿನ ಕ್ಯಾನ್‌ಗಳನ್ನು ತಂದು ನದಿಗೆ ಸುರಿದು ತಮಿಳುನಾಡು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ‘ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಸಂಗ್ರಹವಿಲ್ಲ, ಆದರೂ ನೀರು ಹರಿಸುವಂತೆ ಒತ್ತಾಯ ಮಾಡಲಾಗುತ್ತಿದೆ. ಹಣ ಕೊಟ್ಟು ಮಿನರಲ್ ವಾಟರ್ ತಂದು ನದಿಗೆ ಸುರಿದು ತಮಿಳುನಾಡಿನ ದಾಹ ತೀರಿಸುತ್ತಿದ್ದೇವೆ’ ಎಂದರು.

ವೇದಿಕೆಯ ಅಧ್ಯಕ್ಷ ಬಿ. ಶಂಕರಬಾಬು ಹಾಗೂ ಕಾರ್ಯಕರ್ತರು ಸೇತುವೆ ಮೇಲೆ ನಿಂತು ಅತ್ತು ನದಿಗೆ ಕಣ್ಣೀರನ್ನೂ ಸುರಿಸಿದರು. ‘ನಮ್ಮ ಬಳಿ ನೀರಿಲ್ಲ, ಉಳಿದಿರುವುದು ಕಣ್ಣೀರಷ್ಟೇ ಅದನ್ನೂ ತೆಗೆದುಕೊಳ್ಳಿ’ ಎನ್ನುತ್ತಾ ಕಣ್ಣೀರು ಹಾಕಿದರು.

ಕೆ.ಪಿ.ನಂಜುಂಡಿ ಬೆಂಬಲ: ವಿಶ್ವಕರ್ಮ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಕೆ.ಪಿ.ನಂಜುಂಡಿ ಹೋರಾಟಕ್ಕೆ ಬೆಂಬಲ ನೀಡಿದರು. ನಗರದ ಜೆ.ಸಿ.ವೃತ್ತದಿಂದ ಮೆರವಣಿಗೆಯಲ್ಲಿ ಬಂದ ಅವರು ‘ರೈತ ಉಳಿದರೆ ಮಾತ್ರ ದೇಶ ಉಳಿಯುತ್ತದೆ. ನಮ್ಮೆಲ್ಲರ ಪ್ರಾಣವಾದ ಕಾವೇರಿ ನೀರನ್ನು ಉಳಿಸಿಕೊಳ್ಳಲು ಎಲ್ಲರೂ ಹೋರಾಟದಲ್ಲಿ ಕೈ ಜೋಡಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಸಮಸ್ಯೆ ಬಗೆಹರಿಸುವ ಸಂಬಂಧ ಮಾತುಕತೆ ನಡೆಸಬೇಕು’ ಎಂದು ಒತ್ತಾಯಿಸಿದರು.

ಚಿಂತಕರು ಭಾಗಿ: ಹೋರಾಟಕ್ಕೆ ಪ್ರಗತಿಪರ ಚಿಂತಕರು, ಸಂಶೋಧಕರು ಬೆಂಬಲ ನೀಡಿದರು. ಇತಿಹಾಸ ಸಂಶೋಧಕ ತಲಕಾಡು ಚಿಕ್ಕರಂಗೇಗೌಡ ಮಾತನಾಡಿ ‘ಸಂಕಷ್ಟ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ಒಂದು ಹನಿ ನೀರನ್ನೂ ಬಿಡಬಾರದು. ನ್ಯಾಯಾಂಗ ನಿಂದನೆಯಾದರೂ ಸರಿ, ಜೈಲಿಗೆ ಹೋದರೂ ಸರಿ, ಸರ್ಕಾರ ರೈತ ಪರವಾದ ನಿರ್ಧಾರ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

‘ರಾಜ್ಯದ ಪರವಾಗಿ ವಾದ ಮಾಡಲು ಕರ್ನಾಟಕಕ್ಕೆ ಸಮರ್ಥವಾದ ವಕೀಲರ ಕೊರತೆ ಇದೆ. ಸಮರ್ಥ ವಾದದ ಕೊರತೆಯಿಂದ ಹಲವು ಬಾರಿ ರಾಜ್ಯಕ್ಕೆ ಅನ್ಯಾಯವಾಗಿದೆ. ಸರ್ಕಾರಗಳು ನೀರಿನ ವಿಚಾರವಾಗಿ ರಾಜಕೀಯ ಮಾಡಬಾರದು. ಕೆರೆ, ಕಟ್ಟೆ ತುಂಬಿಸಲು, ಕೆರೆಗಳಲ್ಲಿ ತುಂಬಿರುವ ಹೂಳೆತ್ತಿಸಲು ಯೋಜನೆಗಳನ್ನು ರೂಪಿಸಬೇಕು’ ಎಂದರು.

ಚೆನ್ನೈನಲ್ಲಿ ಗುರುವಾರ ನಿಧನರಾದ ಹಸಿರು ಕ್ರಾಂತಿಯ ಹರಿಕಾರ ಎಂ.ಎಸ್. ಸ್ವಾಮಿನಾಥ್ ಅವರ ನಿಧನಕ್ಕೆ ಸಂಘಟನೆಗಳ ಮುಖಂಡರು ಶ್ರದ್ಧಾಂಜಲಿ ಕೋರಿದರು.

ಗ್ರಾಮಸ್ಥರ ಮೆರವಣಿಗೆ: ತಾಲ್ಲೂಕಿನ ಇಂಡುವಾಳು ಮತ್ತು ಸಿದ್ದಯ್ಯನಕೊಪ್ಪಲು ಗ್ರಾಮದ ರೈತರು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಟ್ರ್ಯಾಕ್ಟರ್ ರ‍್ಯಾಲಿ ನಡೆಸಿ ಪ್ರತಿಭಟಿಸಿದರು. ನಂತರ ಸರ್ ಎಂ.ವಿ ಪ್ರತಿಮೆ ಎದುರು ಧರಣಿಯಲ್ಲಿ ಪಾಲ್ಗೊಂಡರು.

ಎಸ್‌ಡಿಪಿಐ ಮುಖಂಡರು ಮೆರವಣಿಗೆಯಲ್ಲಿ ಬಂದು ಹೋರಾಟದಲ್ಲಿ ಭಾಗಿಯಾದರು. ಮುಖಂಡರಾದ ಮುಫ್ತಾರ್ ಅಹಮದ್, ಸಾದಿಕ್ ಪಾಷ, ಮುಬಾರಕ್ ಅಹಮದ್ ‘ಈದ್ ಮಿಲಾದ್ ಆಚರಣೆ ಇದ್ದರೂ ನಾವು ಕಾವೇರಿ ಹೋರಾಟಕ್ಕೆ ಬಂದಿದ್ದೇವೆ. ಕುಡಿಯುವ ನೀರಿದ್ದರೆ ಜೀವನ ನಡೆಯುತ್ತದೆ, ನೀರಿಗಾಗಿ ಯಾವುದೇ ಹೋರಾಟಕ್ಕೂ ಸಿದ್ಧ. ರೈತರ ಹೋರಾಟಕ್ಕೆ ಸದಾ ಬೆಂಬಲ ನೀಡುತ್ತೇವೆ’ ಎಂದರು.

ಶ್ರೀರಂಗಪಟ್ಟಣದಲ್ಲಿ ಭೂಮಿತಾಯಿ ರೈತ ಹೋರಾಟ ಸಮಿತಿ ಸದಸ್ಯರು ನಗುವ ಚಳವಳಿ ನಡೆಸಿದರು. ನಗುನಗುತ್ತಾ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ನಡೆಸಿದರು.

‘ಯಾವ ಸಿಎಂ ಎಷ್ಟು ನೀರು ಬಿಟ್ಟಿದ್ದಾರೆ ಲೆಕ್ಕ ತೆಗೆಯಿರಿ: ಸತೀಶ ಜಾರಕಿಹೊಳಿ



ಬೆಳಗಾವಿ: ‘ನಾವಷ್ಟೇ ಅಲ್ಲ, ಹಿಂದಿನ ಸರ್ಕಾರಗಳು ಸಾಕಷ್ಟು ಬಾರಿ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿವೆ. ರಾಜ್ಯದಲ್ಲಿ ಈವರೆಗಿನ ಯಾವ ಮುಖ್ಯಮಂತ್ರಿಯೂ ಇದನ್ನು ತಡೆದಿಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸಮರ್ಥಿಸಿಕೊಂಡರು.

‘ನೀರು ಹರಿಸಬೇಕು ಎಂಬ ಆದೇಶವನ್ನು ಬಿಜೆಪಿ, ಜೆಡಿಎಸ್ ಸರ್ಕಾರ ಪಾಲಿಸಿವೆ. ಇದು 10 ಸಲ ನಡೆದಿದೆ. ಯಾರೆಲ್ಲ ಮುಖ್ಯಮಂತ್ರಿ ಇದ್ದಾಗ, ಎಷ್ಟು ನೀರು ಬಿಡಲಾಗಿದೆ? ಲೆಕ್ಕ ತೆಗೆಯಲಿ’ ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

‘ತಮಿಳುನಾಡಿನವರು ಹಿಂದಿನಿಂದಲೂ ಕೇಂದ್ರದ ಮೇಲೆ ಪ್ರಭಾವ ಬೀರಿ, ನೀರು ಬಿಡಲು ಒತ್ತಾಯಿಸುತ್ತಾರೆ. ನೀರು ಹರಿಸಲು ಯಾರು ಆದೇಶ ಮಾಡಿದ್ದಾರೋ ಅವರ ವಿರುದ್ಧ ಪ್ರತಿಭಟನೆ ಮಾಡಬೇಕೆ ಹೊರತು ನಮ್ಮ ಸರ್ಕಾರದ ವಿರುದ್ಧವಲ್ಲ’ ಎಂದು ಅವರು ಹೇಳಿದರು.


‘ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಕೇಂದ್ರ ಸರ್ಕಾರದ ಅಧೀನದಲ್ಲಿದೆ. ರಾಜ್ಯದ ಬಿಜೆಪಿಯ ಸಂಸದರು ಪ್ರಾಧಿಕಾರದ ಮುಂದೆ ಈ ವಿಷಯ ತಿಳಿಸಬೇಕಿತ್ತು. ಕೇಂದ್ರ ಜಲಸಂಪನ್ಮೂಲ ಸಚಿವರಿಗೆ ಇಲ್ಲಿನ ಪರಿಸ್ಥಿತಿ ಮನವರಿಕೆ ಮಾಡಿಕೊಡಬೇಕಿತ್ತು. ಇನ್ನಾದರೂ ಪ್ರಧಾನಿ, ಕೇಂದ್ರದ ಸಚಿವರು ಮಧ್ಯಸ್ಥಿಕೆ ವಹಿಸಿ, ನಮ್ಮ ಮತ್ತು ತಮಿಳುನಾಡಿನವರ ಹಿತ ಕಾಪಾಡಬೇಕು’ ಎಂದೂ ಅವರು ಆಗ್ರಹಿಸಿದರು.

ಯಾರು ಬಾಹುಬಲಿ?: ‘ಈ ಹಿಂದೆ, ಜೆಡಿಎಸ್ ಜತೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಾಗ ನಮಗೆ ನಷ್ಟವಾಗಿತ್ತು. ಆದರೆ, ಜೆಡಿಎಸ್–ಬಿಜೆಪಿ ಮೈತ್ರಿಯ ಪರಿಣಾಮಗಳ ಬಗ್ಗೆ ಈಗಲೇ ಹೇಳಲಾಗದು. ಲೋಕಸಭೆ ಚುನಾವಣೆ ವೇಳೆ ಜನರ ಮನಸ್ಥಿತಿ ಹೇಗಿರುತ್ತದೆಯೋ ಏನೋ? ಈ ಚುನಾವಣೆಯಲ್ಲಿ ಯಾರು ಬಾಹುಬಲಿ ಆಗುತ್ತಾರೆ ಎಂಬುದನ್ನು ಕಾದುನೋಡಬೇಕು’ ಎಂದರು.

‘ಗ್ಯಾರಂಟಿ ಯೋಜನೆಗಳಿಂದ ಸರ್ಕಾರಿ ನೌಕರರ ವೇತನ ನೀಡಲು ಸಮಸ್ಯೆ ಆಗಿದೆ ಎಂಬುದು ಸುಳ್ಳು. ತಾಂತ್ರಿಕ ಕಾರಣದಿಂದ ಒಂದಷ್ಟು ಮಂದಿ ಸಂಬಳ ವಿಳಂಬವಾಗಿರಬಹುದು. 3 ಲಕ್ಷಕ್ಕೂ ಅಧಿಕ ಸರ್ಕಾರಿ ನೌಕರರಿದ್ದಾರೆ. ಅವರೆಲ್ಲರಿಗೆ ವೇತನ ಕೊಟ್ಟಿರದಿದ್ದರೆ, ಇಷ್ಟೊತ್ತಿಗೆ ಹಾಹಾಕಾರ ಸೃಷ್ಟಿಯಾಗುತ್ತಿತ್ತು’ ಎಂದರು.

‘ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಸಲು ಯತ್ನಿಸಲಾಗುವುದು’ ಎಂದರು.

ತಜ್ಞರ ಸಭೆ ಇಂದು




ಹುಬ್ಬಳ್ಳಿ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕಾವೇರಿ ನದಿ ನೀರು ಹಂಚಿಕೆ ಕುರಿತು ಶುಕ್ರವಾರ ತಜ್ಞರ ಸಭೆಯಲ್ಲಿ ಚರ್ಚಿಸಿ, ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು’ ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು

‘ಸುಪ್ರೀಂ ಕೋರ್ಟ್, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು, ವಕೀಲರು, ಜಲತಜ್ಞರೊಂದಿಗೆ ಸಮಾಲೋಚಿಸಲಾಗುವುದು. ಕಾವೇರಿ ನದಿ ನೀರು ಕಡಿಮೆಯಾಗುತ್ತಿದ್ದು, ಇನ್ನಷ್ಟು ಸಮಸ್ಯೆ ತಲೆದೋರಬಹುದು. ನಾವು ಕಾನೂನಾತ್ಮಕವಾಗಿ ಜಾಗ್ರತೆ ವಹಿಸಿ, ರಾಜ್ಯದ ಹಿತದೃಷ್ಟಿಯಿಂದ ಎಲ್ಲಾ ರೀತಿಯ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಈಗಿನ ಬರ ಪರಿಸ್ಥಿತಿಯಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ಸಂಕಷ್ಟದ ಸೂತ್ರ ಪರಿಹಾರಕ್ಕೆ ನಾವು ಒತ್ತಾಯ ಮಾಡುತ್ತಲೇ ಇದ್ದೇವೆ’ ಎಂದರು.

‘ಇಂಡಿಯಾ ಒಕ್ಕೂಟ ಬಲಗೊಳಿಸಲು ಕಾಂಗ್ರೆಸ್ ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿದೆ’ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವ ಪಾಟೀಲ, ‘ಕ್ಷುಲ್ಲಕ ರಾಜಕಾರಣ ಮಾಡುವುದನ್ನು ಬಿಜೆಪಿ ಬಿಡಬೇಕು. ಪ್ರಧಾನಿ ಮೋದಿ ಅವರು ಎರಡೂ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸಮಸ್ಯೆ ಪರಿಹರಿಸಬೇಕು’ ಎಂದರು.

‘ಹೋರಾಟಕ್ಕೆ ಬಿಜೆಪಿ ಬೆಂಬಲ’



ಹುಬ್ಬಳ್ಳಿ: ‘ಕಾವೇರಿ ನದಿ ನೀರಿಗಾಗಿ ಹೋರಾಟ ನಡೆಯುವವರೆಗೆ ಬಿಜೆಪಿಯ ಬೆಂಬಲ ಇರುತ್ತದೆ. ರಾಜ್ಯ ಸರ್ಕಾರಕ್ಕೆ ತಡವಾಗಿಯಾದರೂ ಬುದ್ಧಿ ಬಂದಿದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ತಮಿಳುನಾಡಿಗೆ ಈಗ 3 ಸಾವಿರ ಕ್ಯೂಸೆಕ್ ನೀರು ಹರಿಸಲು ಆದೇಶವಿದೆ. 10 ಸಾವಿರ ಕ್ಯೂಸೆಕ್ ಆದೇಶ ಬಂದಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಬೇಕಿತ್ತು. ಇಷ್ಟು ದೊಡ್ಡ ಪ್ರಮಾಣದ ನೀರು ಬಿಡುವ ಪ್ರಮೇಯ ಬರುತ್ತಿರಲಿಲ್ಲ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯದಲ್ಲಿ ಬರ ಪರಿಸ್ಥಿತಿ ಇದ್ದರೂ ರಾಜ್ಯ ಸರ್ಕಾರವು ಬರ ಪರಿಹಾರ ನೀಡುವ ಕೆಲಸ ಮಾಡುತ್ತಿಲ್ಲ’ ಎಂದರು.

‘ಸಭೆಗೆ ಖುದ್ದು ಹಾಜರಿಗೆ ಸೂಚನೆ’

ಬೆಂಗಳೂರು: ‘ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯುಎಂಎ) ಸಭೆ ಶುಕ್ರವಾರ ನಡೆಯಲಿದ್ದು, ಈ ಸಭೆಯಲ್ಲಿ ಆನ್‌ಲೈನ್ ಬದಲು ಖುದ್ದು ಭಾಗವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ’ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಿತ್ಯ 12,500 ಕ್ಯೂಸೆಕ್ ನೀರು ಬಿಡುಗಡೆ ಮಾಡುವಂತೆ ತಮಿಳುನಾಡಿನವರು ಬೇಡಿಕೆ ಇಟ್ಟಿದ್ದು, ರಾಜ್ಯದ ಅಧಿಕಾರಿಗಳು ಸಮರ್ಥವಾಗಿ ವಾದ ಮಂಡಿಸಲಿದ್ದಾರೆ. ರಾಜ್ಯದ ಬರ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಲಿದ್ದಾರೆ. ಈಗ 2 ಸಾವಿರ ಕ್ಯೂಸೆಕ್ ನೀರು ಸಹಜವಾಗಿ ಹೋಗುತ್ತಿರಬಹುದು’ ಎಂದರು.

‘ಕಾವೇರಿ ನೀರು ನಿಯಂತ್ರಣ ಸಮಿತಿ 3 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡುವಂತೆ ಶಿಫಾರಸು ಮಾಡಿದೆ. ಪ್ರಾಧಿಕಾರ ಏನು ಸೂಚನೆ ನೀಡಲಿದೆ ಎಂಬುದನ್ನು ಕಾದು ನೋಡಬೇಕು’ ಎಂದರು.

ಸುದ್ದಿ 2 ನಿಮಿಷ

‘ಇಂಡಿಯಾ’ ಒಕ್ಕೂಟಕ್ಕೆ ಕರ್ನಾಟಕ ಅಡಮಾನ: ರೇವಣ್ಣ ಟೀಕೆ

ಕಲಬುರಗಿ: ‘ರಾಜ್ಯದ ಸರ್ಕಾರವು ‘ಇಂಡಿಯಾ’ ಒಕ್ಕೂಟವನ್ನು ಉಳಿಸಿಕೊಳ್ಳಲು ಕರ್ನಾಟಕವನ್ನೇ ಅಡಮಾನ ಇರಿಸಿದೆ’ ಎಂದು ಶಾಸಕ ಎಚ್‌.ಡಿ.ರೇವಣ್ಣ ಹರಿಹಾಯ್ದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ತಮಿಳುನಾಡಿನಲ್ಲಿನ 39 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲಲು ಕರ್ನಾಟಕ ಹಾಗೂ ಕಾವೇರಿ ಕಣಿವೆಯ ರೈತರನ್ನು ‘ಇಂಡಿಯಾ’ ಒಕ್ಕೂಟಕ್ಕೆ ಒತ್ತೆಯಿಟ್ಟು ಕಾವೇರಿ ನೀರು ಹರಿಸಿದ್ದಾರೆ’ ಎಂದು ಟೀಕಿಸಿದರು.

‘ನಮಗೆ ‘ಎ’ ಟೀಮ್, ‘ಬಿ’ ಟೀಮ್ ಎನ್ನುತ್ತಿದ್ದರು. ಈಗ ಕರ್ನಾಟಕ ‘ಎ’ ಟೀಮ್, ತಮಿಳುನಾಡು ‘ಬಿ’ ಟೀಮ್ ಆಗಿದೆ. 135 ಸೀಟ್‌ಗಳನ್ನು ಗೆದ್ದ ಕಾಗ್ರೆಸ್‌ಗೆ ಆಪರೇಷನ್ ಹಸ್ತ ಮಾಡುವ ಪರಿಸ್ಥಿತಿ ಬಂದಿದೆ. ಆಪರೇಷನ್ ಹಸ್ತಕ್ಕೆ ಹೆದರುವುದಿಲ್ಲ. ಎಲ್ಲ ಪಕ್ಷಗಳ ಬಂಡವಾಳ ಗೊತ್ತಿದ್ದು, ಕಾಂಗ್ರೆಸ್ ಪರಿಸ್ಥಿತಿ ಏನಾಗುತ್ತೆ ಅಂಥ ಸ್ವಲ್ಪ ದಿನಗಳಲ್ಲಿ ನೋಡಿ’ ಎಂದರು.

‘ಬಿಜೆಪಿ–ಜೆಡಿಎಸ್ ಮೈತ್ರಿಗೆ ನಮ್ಮಲ್ಲಿ ಅಸಮಾಧಾನ ಇಲ್ಲ. ಎಚ್‌.ಡಿ.ದೇವೇಗೌಡ ಮತ್ತು ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದೇ ಅಂತಿಮ. ಸಿಎಂ ಇಬ್ರಾಹಿಂ ಸೇರಿದಂತೆ ಯಾರೂ ಜೆಡಿಎಸ್ ಬಿಟ್ಟು ಹೋಗುವುದಿಲ್ಲ. ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲ ಇದೆ’ ಎಂದು ತಿಳಿಸಿದರು.

ತಮಿಳು ನಟನ ಪತ್ರಿಕಾಗೋಷ್ಠಿಗೆ ಅಡ್ಡಿ



ಬೆಂಗಳೂರು: ತಮ್ಮ ‘ಚಿಕ್ಕು’ ಸಿನಿಮಾದ ಪ್ರಚಾರಕ್ಕಾಗಿ ನಗರಕ್ಕೆ ಬಂದಿದ್ದ ತಮಿಳು ನಟ ಸಿದ್ಧಾರ್ಥ್ ಅವರಿಗೆ ಕಾವೇರಿ ಹೋರಾಟದ ಬಿಸಿ ತಟ್ಟಿತು. ಸಿನಿಮಾ ಪ್ರಚಾರ ನಡೆಸದಂತೆ ಕನ್ನಡ ಪರ ಸ್ವಾಭಿಮಾನಿ ಸೇನೆ ಕಾರ್ಯಕರ್ತರು ಗುರುವಾರ ಅವರನ್ನು ತಡೆದರು.

ಸಿದ್ಧಾರ್ಥ್ ನಟನೆಯ ‘ಚಿಕ್ಕು’ ಸಿನಿಮಾ ತಮಿಳು, ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಗುರುವಾರ ಬಿಡುಗಡೆಗೊಂಡಿದೆ. ಇದರ ಕನ್ನಡ ಅವತರಣಿಕೆಯ ಮಾಧ್ಯಮ ಪ್ರದರ್ಶನ ಮತ್ತು ಪತ್ರಿಕಾಗೋಷ್ಠಿಯನ್ನು ಮಲ್ಲೇಶ್ವರದ ಎಸ್ ಆರ್‌ವಿಯಲ್ಲಿ ಸಿನಿಮಾ ತಂಡ ಹಮ್ಮಿಕೊಂಡಿತ್ತು. ಸುದ್ದಿಗೋಷ್ಠಿ ವೇಳೆ ಏಕಾಏಕಿ ನುಗ್ಗಿದ ಕನ್ನಡಪರ ಸಂಘಟನೆ ಕಾರ್ಯಕರ್ತರು ಸಿನಿಮಾವನ್ನು ರಾಜ್ಯದಲ್ಲಿ ಬಿಡುಗಡೆ ಮಾಡದಂತೆ ಆಕ್ರೋಶ ವ್ಯಕ್ತಪಡಿಸಿದರು. ಜೊತೆಗೆ ನಟನ ಪತ್ರಿಕಾಗೋಷ್ಠಿಗೂ ಅಡ್ಡಿಪಡಿಸಿದರು.

ವೇದಿಕೆ ಮೇಲೆ ನಟ ಸಿದ್ಧಾರ್ಥ್ ಮಾತನಾಡುತ್ತಿರುವ ಸಂದರ್ಭದಲ್ಲಿ ನುಗ್ಗಿದ ಕಾರ್ಯಕರ್ತರು, ‘ಕಾವೇರಿ ವಿವಾದ ಕಾವೇರಿರುವ ಸಂದರ್ಭದಲ್ಲಿ ತಮಿಳು ಸಿನಿಮಾದ ಪ್ರಚಾರ ಮಾಡುವುದು ಸರಿಯಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಟ ಸಿದ್ಧಾರ್ಥ್, ಕನ್ನಡದಲ್ಲಿಯೇ ಸಿನಿಮಾದ ಕುರಿತು ಮಾತನಾಡಲು ಪ್ರಯತ್ನಿಸಿದರು. ಆದರೆ ಕರವೇ ಕಾರ್ಯಕರ್ತರು ಅದಕ್ಕೆ ಅವಕಾಶ ನೀಡಲಿಲ್ಲ.

‘ಕನ್ನಡ ಶಾಲೆ ಕೊಲ್ಲುವ ಯತ್ನ’

ಪ್ರಜಾವಾಣಿ ವಾರ್ತೆ


ರೋಹಿತ್ ಚಕ್ರತೀರ್ಥ

ಶಿರಸಿ: ‘ಅಸಾಂವಿಧಾನಿಕವಾಗಿ ಪಠ್ಯಪುಸ್ತಕ ಪರಿಷ್ಕರಿಸಿ, ಸರ್ವಾಧಿಕಾರಿ ಧೋರಣೆ ತೋರಿರುವ ರಾಜ್ಯ ಸರ್ಕಾರವು ಸರ್ಕಾರಿ ಕನ್ನಡ ಶಾಲೆಗಳನ್ನು ಕೊಲ್ಲುವ ಯತ್ನ ಮಾಡುತ್ತಿದೆ’ ಎಂದು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ನಿಕಟಪೂರ್ವ ಅಧ್ಯಕ್ಷ ರೋಹಿತ್ ಚಕ್ರತೀರ್ಥ ವಾಗ್ದಾಳಿ ನಡೆಸಿದರು.

ಶಿರಸಿಯ ಸೋದೆ ವಾದಿರಾಜ ಮಠದಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ತರಾತುರಿಯಲ್ಲಿ ಪಠ್ಯಪುಸ್ತಕ ಪರಿಷ್ಕರಿಸಿ, ಈಗಿರುವ ಪಾಠಗಳನ್ನು ತೆಗೆದು ಯಾವ ಪಾಠಗಳನ್ನು ಸೇರಿಸುತ್ತಾರೆ ಎಂಬುದನ್ನು ತಿಳಿಸಿಲ್ಲ. ಬಿಜೆಪಿ ಸರ್ಕಾರ ಮಾಡಿದ ಪರಿಷ್ಕರಣೆ ಎಂಬ ಅಜೆಂಡಾ ಮುಂದಿಟ್ಟು, ಆಗಿನ ಪಠ್ಯಗಳನ್ನು ತೆಗೆಯಲಾಗಿದೆ’ ಎಂದರು.

‘ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿ, 16 ಪಾಠಗಳನ್ನು ಏಕಾಏಕಿ ತೆಗೆಯಲಾಗಿದೆ. ಅದಕ್ಕೆ ಶಿಕ್ಷಣ ಇಲಾಖೆಯಲ್ಲಿ ಆಸ್ಪದವಿಲ್ಲ. ಸಮಿತಿ ರಚಿಸಿ, ಯಾವ ಪಾಠ ತೆಗೆಯಲಾಗುತ್ತದೆ ಎಂಬ ಮಾಹಿತಿಯನ್ನು ಸರ್ಕಾರಕ್ಕೆ ನೀಡಿ, ಅನುಮತಿ ಪಡೆದು ಪರಿಷ್ಕರಿಸಬೇಕು. ಇವೆಲ್ಲವನ್ನೂ ಕಾಂಗ್ರೆಸ್ ಸರ್ಕಾರ ಗಾಳಿಗೆ ತೂರಿದೆ’ ಎಂದರು.

‘ನಿರಂತರ ಮತ್ತು ಅವೈಜ್ಞಾನಿಕ ಪಠ್ಯಪುಸ್ತಕ ಪರಿಷ್ಕರಣೆಯಿಂದ ಗೊಂದಲ ಸೃಷ್ಟಿಯಾಗಿ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸಲು ಹಿಂದೇಟು ಹಾಕುತ್ತಾರೆ. ಪರಿಷ್ಕರಣೆ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಸಾಯಿಸುವ ವ್ಯವಸ್ಥಿತ ಸಂಚು ನಡೆದಿದೆ. ಇದರಿಂದ ಸರ್ಕಾರಿ ಕನ್ನಡ ಶಾಲೆಗಳು ಮುಚ್ಚುವ ಹಂತ ತಲುಪುತ್ತವೆ’ ಎಂದರು.

‘ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೆ. ಕನಿಷ್ಠ ಸೌಜನ್ಯಕ್ಕೂ ನನ್ನ ಬಳಿ ಚರ್ಚಿಸಿಲ್ಲ. ಏಕಪಕ್ಷೀಯವಾಗಿ ನಿರ್ಣಯ ಕೈಗೊಂಡಿರುವುದು ತಪ್ಪು. ಇದು ಮಕ್ಕಳ ಮೇಲೆ ನೇರ ಪರಿಣಾಮ ಬೀರಲಿದೆ’ ಎಂದರು.

12,668 ಅರ್ಜಿಗಳ ಇತ್ಯರ್ಥಕ್ಕೆ ಸೂಚನೆ

ಬೆಂಗಳೂರು: ರಾಜ್ಯದ 29 ಜಿಲ್ಲೆಗಳಲ್ಲಿ ಸೆ.23ರಂದು ನಡೆದಿದ್ದ ಜನತಾ ದರ್ಶನದಲ್ಲಿ ಸಲ್ಲಿಕೆಯಾಗಿರುವ 12,668 ಅರ್ಜಿಗಳನ್ನು ಆಯಾ ಇಲಾಖೆಗಳು ತ್ವರಿತವಾಗಿ ಇತ್ಯರ್ಥ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಇ–ವಿಭಾಗ ಸೂಚಿಸಿದೆ.

‘ಗದಗ ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಲ್ಲೂ ಜನತಾ ದರ್ಶನ ನಡೆಸಲಾಗಿತ್ತು. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ 5,855, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 1,574 ಹಾಗೂ ನಗರಾಭಿವೃದ್ಧಿ ಇಲಾಖೆಗೆ 1,192 ಅಹವಾಲುಗಳು ಸಲ್ಲಿಕೆಯಾಗಿದ್ದವು. ಜಿಲ್ಲಾವಾರು ಅಹವಾಲುಗಳಲ್ಲಿ ಹಾವೇರಿ ಜಿಲ್ಲೆಯ ಅರ್ಜಿಗಳು (1,937) ಅಧಿಕ ಸಂಖ್ಯೆಯಲ್ಲಿ ಸಲ್ಲಿಕೆಯಾಗಿದ್ದವು.


ಜೇವರ್ಗಿ ತಾಲ್ಲೂಕಿನ ಮಂದೇವಾಲ ಗ್ರಾಮದಲ್ಲಿ ಗುರುವಾರ ಭಗತ್ ಸಿಂಗ್ ಜನ್ಮದಿನಾಚರಣೆ ಮೆರವಣಿಗೆ ಮುನ್ನ ಗ್ರಾಮದ ಹನುಮಾನ ದೇವಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳೊಂದಿಗೆ ನಾಥೂರಾಮ ಗೋಡ್ಸೆ ಭಾವಚಿತ್ರ ಇಡಲಾಗಿತ್ತು

ಭಗತ್ ಸಿಂಗ್ ಜನ್ಮದಿನ ಗೋಡ್ಸೆ ಭಾವಚಿತ್ರ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಜೇವರ್ಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮಂದೇವಾಲ ಗ್ರಾಮದಲ್ಲಿ ಭಗತ್‌ಸಿಂಗ್ ಜನ್ಮದಿನದ ಅಂಗವಾಗಿ ಗುರುವಾರ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳ ಜೊತೆಗೆ ನಾಥೂರಾಮ ಗೋಡ್ಸೆ ಭಾವಚಿತ್ರವನ್ನೂ ಇಟ್ಟು ಮೆರವಣಿಗೆ ಮಾಡಲಾಗಿದೆ.

ಮಂದೇವಾಲ ಗ್ರಾಮದ ಯುವ ಬಳಗದ ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಭಗತ್ ಸಿಂಗ್, ಕಿತ್ತೂರು ರಾಣಿ ಚನ್ನಮ್ಮ, ಸರ್ದಾರ್ ವಲ್ಲಭಭಾಯಿ ಪಟೇಲ್, ಸಂಗೊಳ್ಳಿ ರಾಯಣ್ಣ, ಸಾವರ್ಕರ್, ಸುಖದೇವ, ರಾಜಗುರು, ಚಂದ್ರಶೇಖರ ಆಜಾದ್, ಸುಭಾಷ್‌ಚಂದ್ರ ಬೋಸ್ ಜತೆಗೆ ನಾಥೂರಾಮ ಗೋಡ್ಸೆ ಭಾವಚಿತ್ರವನ್ನೂ ಇಟ್ಟು ಪೂಜೆ ಸಲ್ಲಿಸಲಾಗಿದೆ. ಬಳಿಕ ಎಲ್ಲ ನಾಯಕರ ಭಾವಚಿತ್ರಗಳೊಂದಿಗೆ ಗೋಡ್ಸೆ ಭಾವಚಿತ್ರವನ್ನೂ ಎತ್ತಿನ ಬಂಡಿ ಮೇಲಿಟ್ಟು ಮೆರವಣಿಗೆ ಮಾಡಲಾಯಿತು.

ಸಂಕ್ಷಿಪ್ತ ಸುದ್ದಿ

ತಾರಾನಾಥರಿಗೆ ಮಲೆಯೂರು ಗುರುಸ್ವಾಮಿ ಪ್ರಶಸ್ತಿ

ನಂಜನಗೂಡು (ಮೈಸೂರು ಜಿಲ್ಲೆ): ‘ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ನೀಡುವ ‘ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ’ಗೆ ನಿವೃತ್ತ ಪ್ರಾಧ್ಯಾಪಕ ಎನ್‌.ಎಸ್‌. ತಾರಾನಾಥ ಭಾಜನರಾಗಿದ್ದಾರೆ’ ಎಂದು ಪ್ರತಿಷ್ಠಾನದ ಸೋಮಶೇಖರ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಹೊಂದಿದೆ. ನಗರದ ನೀಲಕಂಠೇಶ್ವರ ಶಾಲಾ ಆವರಣದಲ್ಲಿ ಅ.1ರಂದು ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕಾರ್ಯಕ್ರಮವನ್ನು ಸಾಹಿತಿ ಸಿ.ಪಿ. ಕೃಷ್ಣಕುಮಾರ್ ಉದ್ಘಾಟಿಸಲಿದ್ದು, ವಿದ್ವಾಂಸ ಪ್ರೊ.ಪ್ರೇಮಶೇಖರ, ಪ್ರೊ. ಮೊರಬದ ಮಲ್ಲಿಕಾರ್ಜುನ, ನಿವೃತ್ತ ಉಪನ್ಯಾಸಕರಾದ ಕೆ.ಎಸ್‌. ಜಯಂತಿ, ಪ್ರೊ.ಡಿ.ಎಸ್‌.ಸದಾಶಿವಮೂರ್ತಿ ಭಾಗವಹಿಸಲಿದ್ದಾರೆ’ ಎಂದರು.

ಚಂದ್ರನಾಥಗೆ ಬಾಲವನ ಪ್ರಶಸ್ತಿ



ಪುತ್ತೂರು (ದಕ್ಷಿಣ ಕನ್ನಡ): ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೋಟ ಶಿವರಾಮ ಕಾರಂತರ ಬಾಲವನ ಸಮಿತಿ, ಪುತ್ತೂರು ಉಪವಿಭಾಗಾಧಿಕಾರಿ ಕಚೇರಿಯಿಂದ ದಿ.ಕುರುಂಜಿ ವೆಂಕಟರಮಣ ಗೌಡ ಅವರ ಶಾಶ್ವತ ಕೊಡುಗೆಯಲ್ಲಿ ನೀಡಲಾಗುವ ‘ಕೋಟ ಶಿವರಾಮ ಕಾರಂತರ ಬಾಲವನ ಪ್ರಶಸ್ತಿ’ಗೆ ಬೆಂಗಳೂರಿನ ವರ್ಣಚಿತ್ರ ಕಲಾವಿದ ಕೆ. ಚಂದ್ರನಾಥ ಆಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಅ.10ರಂದು ಬಾಲವನದಲ್ಲಿ ನಡೆಯುವ ಕಾರಂತ ಜನ್ಮದಿನೋತ್ಸವದಂದು ಪ್ರಶಸ್ತಿ ಪ್ರದಾನ ನಡೆಯಲಿದ್ದು, ಪ್ರಶಸ್ತಿಯು ₹25 ಸಾವಿರ ನಗದು, ಕಾರಂತರ ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರಗಳನ್ನು ಒಳಗೊಂಡಿದೆ.

ಶಾಸಕ ಅಶೋಕ್‌ಕುಮಾರ್ ರೈ ಅಧ್ಯಕ್ಷರಾಗಿರುವ, ಉಪವಿಭಾಗಾಧಿಕಾರಿ ಗಿರೀಶ್ ನಂದನ್ ಎಂ., ಬೆಟ್ಟಂಪಾಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ವರದರಾಜ ಚಂದ್ರಗಿರಿ, ವಕೀಲ ಬೆಟ್ಟ ಈಶ್ವರ ಭಟ್, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಸದಸ್ಯರಾಗಿರುವ ಸಮಿತಿಯು ಈ ಆಯ್ಕೆ ಮಾಡಿದೆ. ಮೂಲತಃ ಪುತ್ತೂರಿನವರಾದ ಕೆ.ಚಂದ್ರನಾಥ ಆಚಾರ್ಯ ಅವರು ‘ಪ್ರಜಾವಾಣಿ’ ಬಳಗದಲ್ಲೂ ಕಾರ್ಯನಿರ್ವಹಿಸಿದ್ದರು.

ಎನ್‌ಎಂಪಿಎ: ಅದಿರು ರಫ್ತು ಶುರು

ಮಂಗಳೂರು: ನವ ಮಂಗಳೂರು ಬಂದರು ಪ್ರಾಧಿಕಾರವು ಕಬ್ಬಿಣದ ಅದಿರು ರಫ್ತನ್ನು ಪುನಃ ಪ್ರಾರಂಭಿಸಿದ್ದು, ಮೊದಲ ರೇಕ್ ಅನ್ನು ಗುರುವಾರ ರೈಲಿನ ಮೂಲಕ ಕಳುಹಿಸಿತು.

ಬಂದರು ಪ್ರಾಧಿಕಾರದ ಅಧ್ಯಕ್ಷ ಎ.ವಿ. ರಮಣ್ ಅವರು ಹಸಿರು ನಿಶಾನೆ ತೋರಿದರು. ಒಂದು ದಶಕದ ನಂತರ ಎನ್‌ಎಂಪಿಎ ಅದಿರು ರಫ್ತನ್ನು ಪುನರಾರಂಭಿಸಿದೆ. ಇದು ಸ್ಥಳೀಯ ವ್ಯಾಪಾರ ಮತ್ತು ಆರ್ಥಿಕತೆ ಅಭಿವೃದ್ಧಿಯಲ್ಲಿ ಮಹತ್ವದ ಮೈಲಿಗಲ್ಲಾಗಲಿದೆ. ಅದಿರು ಸಾಗಣೆಯು ಬಂದರಿನ ಕಾರ್ಯಕ್ಷಮತೆ ಮತ್ತು ಸುಸ್ಥಿರ ನಿರ್ವಹಣೆಯ ಗುಣಮಟ್ಟವನ್ನು ಪ್ರತಿಫಲಿಸುತ್ತದೆ. ದೇಶದ ಬಂದರು ಉದ್ಯಮದಲ್ಲಿ ಎನ್‌ಎಂಪಿಎ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ ಎಂದು ಅವರು ಹೇಳಿದರು.

‘ಸರ್ಕಾರದ ಬೆಂಬಲ, ಗಣಿ ಉದ್ಯಮ, ಪ್ರಾಧಿಕಾರದ ನೌಕರರು ಹೀಗೆ ಎಲ್ಲರ ಸಾಮೂಹಿಕ ಶ್ರಮದಿಂದ ಅದಿರು ಸಾಗಣೆ ಪುನರಾರಂಭಿಸಲು ಸಾಧ್ಯವಾಗಿದೆ. ಸ್ಥಳೀಯವಾಗಿ ಇದು ಉದ್ಯೋಗಾವಕಾಶ ಸೃಷ್ಟಿಸುವ ಜತೆಗೆ, ಆರ್ಥಿಕತೆಯ ಬೆಳವಣಿಗೆಗೆ ಪೂರಕ ವಾಗುತ್ತದೆ. ಅಲ್ಲದೆ, ಗುಣಮಟ್ಟದ ಕಬ್ಬಿಣದ ಅದಿರಿನ ಜಾಗತಿಕ ಪೂರೈಕೆಯಲ್ಲಿ ದೇಶದ ಸ್ಥಾನವನ್ನು ಬಲಪಡಿಸುತ್ತದೆ’ ಎಂದು ಹೇಳಿದರು.

ಎನ್‌ಎಂಪಿಎ ಉಪಾಧ್ಯಕ್ಷ ಕೆ.ಜಿ. ನಾಥ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಇದ್ದರು.

ಮೂರು ದಶಕಗಳ ಕನಸು ನನಸು ಮಾಡಿಕೊಂಡ ರೈತರು

ರೈತರಿಂದ ಬ್ಯಾರಲ್ ಸೇತುವೆ ನಿರ್ಮಾಣ

ಪ್ರಜಾವಾಣಿ ವಾರ್ತೆ


ಜಮಖಂಡಿ ತಾಲ್ಲೂಕಿನ ಕಂಕಣವಾಡಿ ಗ್ರಾಮದಿಂದ ನಡುಗಡ್ಡೆಗೆ ಕೃಷ್ಣಾ ನದಿ ದಾಟಲು ನಿರ್ಮಾಣ ಹಂತದಲ್ಲಿರುವ ಬ್ಯಾರಲ್ ಸೇತುವೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಕೃಷ್ಣಾ ನದಿ ದಾಟಿ ಬರಲು ಸೇತುವೆ ನಿರ್ಮಿಸುವಂತೆ ಹಲವು ವರ್ಷಗಳಿಂದ ಬೇಡಿದರೂ ಸರ್ಕಾರದಿಂದ ಸ್ಪಂದನೆ ಸಿಗದ ಕಾರಣ ಜಮಖಂಡಿ ತಾಲ್ಲೂಕಿನ ಕಂಕಣವಾಡಿ ಗ್ರಾಮದ ರೈತರೇ ವಂತಿಗೆ ಸಂಗ್ರಹಿಸಿ ಸುಮಾರು ₹25 ಲಕ್ಷ ವೆಚ್ಚದಲ್ಲಿ ಬ್ಯಾರಲ್ ಸೇತುವೆ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ.

ಆಲಮಟ್ಟಿಯಲ್ಲಿ ನಮ್ಮ ಮನೆ ಮುಳುಗಿದ್ದು, ನಮ್ಮ ಜಮೀನು ಕಂಕಣವಾಡಿ ನಡುಗಡ್ಡೆಯಲ್ಲಿದೆ. ನದಿಯನ್ನು ಮೊದಲು ಈಜಿ ದಾಟುತ್ತಿದ್ದ ರೈತರು ಈಗ ದೋಣಿಯಲ್ಲಿ ಸಾಗುತ್ತಾರೆ. ಎಂಜಿನಿಯರ್‌ಗಳ ನೆರವಿಲ್ಲದೇ ಶ್ರಮದಾನದ ಮೂಲಕ ಬ್ಯಾರಲ್ ಸೇತುವೆ ನಿರ್ಮಾಣ ಕಾರ್ಯ ನಡೆದಿದೆ.

ಕೃಷ್ಣಾ ನದಿಗೆ ಅಡ್ಡಲಾಗಿ ಎರಡೂ ಕಡೆ 20 ಅಡಿ ಎತ್ತರದ ಮಣ್ಣಿನ ಬದು ಮಾಡಿಕೊಂಡಿದ್ದು, ಅಲ್ಲಿಂದ 600 ಅಡಿ ಉದ್ದ ಮತ್ತು 8 ಅಡಿ ಅಗಲ ಬ್ಯಾರಲ್ ಸೇತುವೆ ನಿರ್ಮಾಣ ನಡೆಯುತ್ತಿದೆ. ಸೇತುವೆ ಪೂರ್ಣವಾದಲ್ಲಿ, 600 ಅಡಿ ಅಗಲದ ನದಿಯನ್ನು 5 ನಿಮಿಷದಲ್ಲಿ ದಾಟಬಹುದು.

‘20 ಅಡಿಯಂತೆ ಒಟ್ಟು 30 ಕಬ್ಬಿಣದ ಆಂಗಲ್‌ಗಳನ್ನು ನಟ್ ಬೋಲ್ಟ್ ಮೂಲಕ ಜೋಡಿಸಿದ್ದೇವೆ. ಎರಡು ಸಾಲಿನಂತೆ ಒಟ್ಟು 300 ಬ್ಯಾರಲ್‌ಗಳನ್ನು ಜೋಡಿಸಿ, ಅದರ ಮೇಲೆ ಹಾದು ಹೋಗಲು ಎರಡೂ ಬದಿಗೆ ಕಟ್ಟಿಗೆಯ ಪಳಿಗಳನ್ನು ಹಾಕಿ ನಡುವೆ ಕಬ್ಬಿಣದ ಪಟ್ಟಿ ಹಾಕಿದ್ದೇವೆ. ಎರಡೂ ಬದಿಗೆ ಕಟಾಂಜಲಿ ನಿರ್ಮಿಸಿ ಒಟ್ಟು 13 ಟನ್ ಕಬ್ಬಿಣದಲ್ಲಿ ತಯಾರಾಗುತ್ತಿದೆ. ಗಾಳಿಗೆ ಹಾಗೂ ನೀರಿನ ರಭಸಕ್ಕೆ ಹರಿದು ಹೋಗದಂತೆ ದಪ್ಪ ಹಗ್ಗವನ್ನು ಹಾಕಿ ಎರಡು ಬದಿಗೆ ಕಟ್ಟಿದ್ದೇವೆ. ಸೇತುವೆ ಅಲ್ಲಾಡದಂತೆ ದಪ್ಪ ಕಲ್ಲುಗಳನ್ನು ನದಿಯಲ್ಲಿ ಬಿಡಲು ಸಿದ್ಧತೆ ನಡೆಸಿದ್ದೇವೆ’ ಎಂದು ರೈತರು ತಿಳಿಸಿದರು.

‘ಮಳೆಗಾಲ ಅಥವಾ ನದಿಯಲ್ಲಿ ಒಳಹರಿವು ಹೆಚ್ಚಳವಾದಾಗ ಸೇತುವೆ ಬಿಚ್ಚಿಡಬಹುದು. ಉಳಿದ ಅವಧಿಯಲ್ಲಿ ಬೈಕ್ ಮೇಲೆ 3 ರಿಂದ 4 ಕ್ವಿಂಟಲ್‌ಗಳವರೆಗೆ ಭಾರ ಒಯ್ಯಬಹುದು’ ಎಂದು ರೈತ ರಾಮಪ್ಪ ಜಗದಾಳ ತಿಳಿಸಿದರು.

‘ನಡುಗಡ್ಡೆಯಲ್ಲಿ 600 ಎಕರೆ ಫಲವತ್ತಾದ ಜಮೀನಿನಲ್ಲಿ ಕಬ್ಬು, ಬಾಳೆ, ಗೋವಿನ ಜೋಳ ಬೆಳೆಯುತ್ತೇವೆ. ಕಾಳು ಕಡಿಗಳನ್ನು ತರಲು ಬೋಟ್ ಒಂದೇ ಆಸರೆ. ಹಾವು ಕಡಿಸಿಕೊಂಡ ಸಂದರ್ಭದಲ್ಲಿ ನಾಲ್ವರು ಸಕಾಲಕ್ಕೆ ನದಿದಾಟಲು ಸಾಧ್ಯವಾಗದೇ ಮತ್ತು ಚಿಕಿತ್ಸೆ ಪಡೆಯಲಾಗದೇ ಮೃತಪಟ್ಟಿದ್ದಾರೆ’ ಎಂದು ರೈತ ಈಶ್ವರ ಕರಬಸಪ್ಪನವರ ಹೇಳಿದರು.

‘200 ಕುಟುಂಬ ಮತ್ತು 250ಕ್ಕೂ ಅಧಿಕ ಜಾನುವಾರುಗಳಿವೆ. ನಿತ್ಯ 1,500 ಲೀಟರ್ ಹಾಲು ಹೊತ್ತು ನದಿ ದಾಟಬೇಕು.. 40ಕ್ಕೂ ಹೆಚ್ಚು ಮಕ್ಕಳಿದ್ದು, ದೋಣಿ ಬಾರದಿದ್ದರೆ ಅವರು ಶಾಲೆಗೆ ಹೋಗಲು ಆಗುವುದಿಲ್ಲ’ ಎಂದು ರೈತ ಮಲ್ಲಪ್ಪ ಸಿದ್ದನ್ನವರ ತಿಳಿಸಿದರು.

ಬ್ಯಾರೇಜ್ ನಿರ್ಮಿಸಿದ್ದರು

ಕಳೆದ ವರ್ಷ ಕಂಕಣವಾಡಿ ಗ್ರಾಮಸ್ಥರು ನಡುಗಡ್ಡೆಯಿಂದ ಎರಡು ದೋಣಿಗಳಿಗೆ ಕಬ್ಬಿಣದ ರಾಡ್‌ಗಳನ್ನು ಜೋಡಿಸಿ ಕಬ್ಬು ತುಂಬಿದ ಟ್ರ್ಯಾಕ್ಟರ್ ಅನ್ನು ಸಾಗಿಸಿದ್ದರು. ಅದು ಸಫಲವಾಯಿತು. ಈ ಯಶಸ್ಸಿನಿಂದ ಉತ್ತೇಜಿತರಾದ ರೈತರು ಸೇತುವೆ ಮಾಡಲು ಮುಂದಾಗಿದ್ದಾರೆ.

ತಾಲ್ಲೂಕಿನ ಚಿಕ್ಕಪಡಸಲಗಿ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ರೈತರು ಶ್ರಮದಾನದ ಮೂಲಕ ವಂತಿಗೆ ಸಂಗ್ರಹಿಸಿ ಬ್ಯಾರೇಜ್ ನಿರ್ಮಿಸಿದ್ದರು.

> **10 ವರ್ಷಗಳಿಂದ ಸ್ಥಳೀಯ ಜನಪ್ರತಿನಿಧಿಗಳಿಂದ ಮುಖ್ಯ ಮಂತ್ರಿಯವರೆಗೆ ಮನವಿ ಸಲ್ಲಿಸಿದರೂ ಪ್ರಯೋಜನ ವಾಗಿಲ್ಲ. ಅನುದಾನವೂ ನೀಡಿಲ್ಲ. ಅದಕ್ಕೆ ಸೇತುವೆ ನಿರ್ಮಿಸುತ್ತಿದ್ದೇವೆ**
> **ರಾಮಪ್ಪ ಜಗದಾಳ,** ರೈತ

> **ಸೇತುವೆ ನಿರ್ಮಾಣಕ್ಕೆ ರೈತರಿಂದ ಪ್ರತಿ ಎಕರೆಗೆ ₹ 1 ಸಾವಿರ ಹಣ ಸಂಗ್ರಹಿಸಲಾಗಿದೆ. ಹೆಚ್ಚು ಜಮೀನುವುಳ್ಳವರು ಸ್ವಲ್ಪ ಹೆಚ್ಚು ಹಣ ನೀಡಿದ್ದಾರೆ. ಒಟ್ಟು ₹25 ಲಕ್ಷ ಅಂದಾಜು ವೆಚ್ಚವಾಗುತ್ತದೆ**
> **ನಿಜಪ್ಪ ಆದೇಪ್ಪನವರ,** ರೈತ

ಬಂದ್‌ಗೆ ಸರ್ಕಾರದ ನಿರ್ಬಂಧ

ಒಂದನೇ ಪುಟದಿಂದ

ನೋಟಿಸ್‌ಗೆ ಆಕ್ರೋಶ ವ್ಯಕ್ತಪಡಿಸಿರುವ ಹೋರಾಟಗಾರರು, ‘ರೈತರು ಹಾಗೂ ಜನರ ಪರವಾಗಿ ನಡೆಸುತ್ತಿರುವ ಬಂದ್ ಹತ್ತಿಕ್ಕಲು ರಾಜ್ಯ ಸರ್ಕಾರ ಮುಂದಾಗಿದೆ. ಪೊಲೀಸರ ಮೂಲಕ ನೋಟಿಸ್ ಕೊಡಿಸಿದೆ’ ಎಂದಿದ್ದಾರೆ.

ಕೆಲ ಜಿಲ್ಲೆಗಳಲ್ಲಿ ಕಟ್ಟೆಚ್ಚರ: ‘ಬಂದ್ ಭದ್ರತೆಗಾಗಿ ರಾಜ್ಯದಾದ್ಯಂತ 70 ಸಾವಿರ ಪೊಲೀಸರನ್ನು ನಿಯೋಜಿಸಲಾಗಿದೆ. ಕಾವೇರಿ ನದಿ ಕೊಳ್ಳದ ಜಿಲ್ಲೆಗಳಲ್ಲಿ ಭದ್ರತೆಗೆ ಒತ್ತು ನೀಡಲಾಗಿದೆ. ಆಯಾ ಜಿಲ್ಲೆಗಳ ಎಸ್ಪಿಗಳಿಗೆ ಭದ್ರತೆ ಜವಾಬ್ದಾರಿ ವಹಿಸಲಾಗಿದೆ’ ಎಂದು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್. ಹಿತೇಂದ್ರ ತಿಳಿಸಿದ್ದಾರೆ.

‘ಆಯಾ ಜಿಲ್ಲೆಗಳಲ್ಲಿ ಪರಿಸ್ಥಿತಿ ನೋಡಿಕೊಂಡು ನಿಷೇಧಾಜ್ಞೆ ಜಾರಿ ಬಗ್ಗೆ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಲಿದ್ದಾರೆ. ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದರೆ ಹಾಗೂ ಸಾರ್ವಜನಿಕರ ಹಕ್ಕುಗಳಿಗೆ ಚ್ಯುತಿ ಉಂಟು ಮಾಡಿದರೆ ಕ್ರಮ ಜರುಗಿಸಲಾಗುವುದು’ ಎಂದಿದ್ದಾರೆ.

ಬೆಂಗಳೂರಿನಲ್ಲಿ ನಿಷೇಧಾಜ್ಞೆ: ರಾಜಧಾನಿ ಬೆಂಗಳೂರಿನಲ್ಲಿ ಸೆ. 28ರ ರಾತ್ರಿಯಿಂದ ಸೆ. 29ರ ರಾತ್ರಿ 12 ಗಂಟೆಯವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ಪೊಲೀಸ್ ಕಮಿಷನರ್ ಬಿ. ದಯಾನಂದ್ ಆದೇಶ ಹೊರಡಿಸಿದ್ದಾರೆ.

ವ್ಯಾಪಾರ–ವಹಿವಾಟು ಸ್ಥಗಿತ: ಬಹುತೇಕ ವ್ಯಾಪಾರಿಗಳು ಹಾಗೂ ಉದ್ಯಮಿಗಳು ಶುಕ್ರವಾರದ ಬಂದ್ ಬೆಂಬಲಿಸಿದ್ದಾರೆ. ಹೀಗಾಗಿ, ಅವರೆಲ್ಲರೂ ವ್ಯಾಪಾರ–ವಹಿವಾಟು ಸ್ಥಗಿತಗೊಳಿಸಲಿದ್ದಾರೆ.

ವಾಹನಗಳ ಓಡಾಟ ಬಂದ್: ಖಾಸಗಿ ವಾಹನಗಳು, ಆಟೊ, ಮ್ಯಾಕ್ಸಿಕ್ಯಾಬ್, ಓಲಾ–ಉಬರ್ ಕ್ಯಾಬ್, ಶಾಲೆ ವಾಹನಗಳ ಚಾಲಕರು ಹಾಗೂ ಮಾಲೀಕರು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಆಟೊ ಹಾಗೂ ಖಾಸಗಿ ವಾಹನಗಳ ಓಡಾಟ ಬಂದ್ ಆಗುವ ಸಂಭವವಿದೆ.

ಭದ್ರತೆ ಇದ್ದರೆ ಹೋಟೆಲ್ ನಿರ್ವಹಣೆ: ‘ವಾರದಲ್ಲಿ ಇದು ಎರಡನೇ ಬಂದ್. ಹೋಟೆಲ್ ನಂಬಿಕೊಂಡವರಿಗೆ ಒಂದನೇ ಬಂದ್‌ನಿಂದ ನಷ್ಟವಾಗಿದೆ. ಎರಡನೇ ಬಂದ್ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಭದ್ರತೆ ನೀಡಿದರೆ ಹೋಟೆಲ್ ತೆರೆಯುತ್ತೇವೆ’ ಎಂದು ರಾಜ್ಯ ಪ್ರದೇಶ ಹೋಟೆಲ್ ಮತ್ತು ಉಪಾಹಾರ ಮಂದಿರಗಳ ಸಂಘದ ಅಧ್ಯಕ್ಷ ಚಂದ್ರಶೇಖರ್ ಹೆಬ್ಬಾರ್ ತಿಳಿಸಿದ್ದಾರೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕರ್ನಾಟಕ ಚಿತ್ರ ಪ್ರದರ್ಶಕರ ಸಂಘ ಬಂದ್‌ಗೆ ಬೆಂಬಲ ನೀಡಿದೆ. ರಾಜ್ಯದ ಸಿನಿಮಂದಿರಗಳಲ್ಲಿ ಸಿನಿಮಾ ಪ್ರದರ್ಶನ ಹಾಗೂ ಸಿನಿಮಾ ಚಿತ್ರೀಕರಣ ಬಂದ್ ಆಗಲಿದೆ. ಕರ್ನಾಟಕ ಬೀದಿಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟ ಸಹ ಬಂದ್‌ಗೆ ಬೆಂಬಲ ನೀಡಿವೆ.

ತಮಿಳುನಾಡು ಗಡಿ ಪ್ರದೇಶವಾದ ಅತ್ತಿಬೆಲೆಯಲ್ಲಿ ಪ್ರತಿಭಟನೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಬೆಳಿಗ್ಗೆ ಅತ್ತಿಬೆಲೆ ಗಡಿಯಲ್ಲಿ ಸೇರಲಿರುವ ಹಲವು ಸಂಘಟನೆಗಳ ಕಾರ್ಯಕರ್ತರು, ರಸ್ತೆ ತಡೆ ನಡೆಸುವ ಸಾಧ್ಯತೆ ಇದೆ.

ಉಜ್ಜಯಿನಿಯಲ್ಲಿ 12 ವರ್ಷದ ಬಾಲಕಿ ಮೇಲೆ ಅತ್ಯಾಚಾರ • ಆಟೊ ಚಾಲಕನ ಬಂಧನ, ಐವರು ಶಂಕಿತರ ವಿಚಾರಣೆ

ಕ್ರೌರ್ಯಕ್ಕೆ ನಲುಗಿದ್ದ ಬಾಲಕಿ ಸ್ಥಿತಿ ಗಂಭೀರ

ಉಜ್ಜಯಿನಿ/ಇಂದೋರ್ (ಪಿಟಿಐ): ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ 12 ವರ್ಷದ ಬಾಲಕಿ ಅತ್ಯಾಚಾರಕ್ಕೆ ಗುರಿಯಾಗಿ ಅರೆ ಬೆತ್ತಲಿನ ಸ್ಥಿತಿಯಲ್ಲಿ ರಸ್ತೆಗಳಲ್ಲಿ ರಕ್ಷಣೆಗಾಗಿ ಓಡಾಡಿದ್ದ ಅಮಾನವೀಯ ಕೃತ್ಯ ಕುರಿತು ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಮಧ್ಯಪ್ರದೇಶದ ಬಿಜೆಪಿ ಸರ್ಕಾರದ ವಿರುದ್ಧ ಪ್ರತಿಪಕ್ಷಗಳು ಟೀಕಾಪ್ರಹಾರ ನಡೆಸಿವೆ.

ಬುಧವಾರ ಈ ಕೃತ್ಯ ನಡೆದಿದ್ದು, ಸಂತ್ರಸ್ತೆಗೆ ತಜ್ಞ ವೈದ್ಯರ ತಂಡ ಶಸ್ತ್ರಚಿಕಿತ್ಸೆ ನಡೆಸಿತ್ತು. ಆಕೆಯ ಸ್ಥಿತಿಯು ಇನ್ನೂ ಗಂಭೀರವಾಗಿಯೇ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅತ್ಯಾಚಾರ ಪ್ರಕರಣದ ಸಂಬಂಧ ಆಟೊ ಚಾಲಕನೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಸ್ಥಳ ಪರಿಶೀಲನೆಗೆ ಕರೆದೊಯ್ದಿದ್ದಾಗ, ಆತ ತಪ್ಪಿಸಿ ಕೊಳ್ಳಲು ಯತ್ನಿಸಿದ. ಆದರೆ, ಸಿಬ್ಬಂದಿ ಅದಕ್ಕೆ ಅವಕಾಶ ನೀಡಲಿಲ್ಲ. ಅಲ್ಲದೆ ಐವರು ಶಂಕಿತರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ದಿಗ್ಭ್ರಮೆ ಮೂಡಿಸಿರುವ ಈ ಕೃತ್ಯದ ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ. ಶಂಕಿತರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಮಧ್ಯಪ್ರದೇಶದ ಗೃಹ ಸಚಿವ ನರೋತ್ತಮ್ ಮಿಶ್ರಾ ತಿಳಿಸಿದ್ದಾರೆ.

'ಸಂತ್ರಸ್ತೆ ಅಪಾಯದಿಂದ ಪಾರಾಗಿದ್ದಾರೆ. ಆಕೆ ಉಜ್ಜಯಿನಿಯ ಹೊರಗಿನವರಿರಬಹುದು. ಕೃತ್ಯದ ಕುರಿತು ಪ್ರತಿಕ್ರಿಯಿಸುವ ಸ್ಥಿತಿಯಲ್ಲಿ ಆಕೆ ಇಲ್ಲ. ತಜ್ಞರು, ಆಪ್ತ ಸಮಾಲೋಚಕರ ನೆರವು ಪಡೆದು ಆಕೆಯಿಂದ ಮಾಹಿತಿ ಪಡೆಯಲು ಯತ್ನಿಸಲಾಗುತ್ತಿದೆ' ಎಂದು ತಿಳಿಸಿದರು.

ಕೃತ್ಯಕ್ಕೆ ಸಂಬಂಧಿಸಿದಂತೆ ಬಿಜೆಪಿ ಸರ್ಕಾರ ಕಾರ್ಯವೈಖರಿಯನ್ನು ಕಾಂಗ್ರೆಸ್ ಪಕ್ಷ ಕಟುವಾಗಿ ಟೀಕಿಸಿದೆ ಎಂಬ ಕುರಿತು ಗಮನಸೆಳೆದಾಗ, 'ನಿಮಗೆ ಕಾಂಗ್ರೆಸ್ ಪ್ರಮಾಣಪತ್ರ ಬೇಕೆ?' ಎಂದು ಪ್ರತಿಕ್ರಿಯಿಸಿದರು.

ತೀವ್ರ ರಕ್ತಸ್ರಾವವಿದ್ದ ಬಾಲಕಿಯೊಬ್ಬಳು ನಿಶ್ಯಕ್ತ ಸ್ಥಿತಿಯಲ್ಲಿ ರಕ್ಷಣೆಗಾಗಿ ಉಜ್ಜಯಿನಿಯ ರಸ್ತೆಗಳಲ್ಲಿ ಅಲೆದಾಡುತ್ತಿದ್ದ ದೃಶ್ಯಗಳಿದ್ದ ವಿಡಿಯೊ ಜಾಲತಾಣದಲ್ಲಿ ಹರಿದಾಡಿ ಈ ಅಮಾನವೀಯ ಕೃತ್ಯ ಬಯಲಾಗಿತ್ತು.

'ಮಹಾಕಾಳ್ ಪೊಲೀಸ್ ಠಾಣೆ ವ್ಯಾಪ್ತಿ ರಸ್ತೆಯೊಂದರಲ್ಲಿ ರಕ್ತದ ಮಡುವಿನಲ್ಲಿ ಬಾಲಕಿ ಬಿದ್ದಿದ್ದಳು. ಆಕೆಯ ಮೇಲೆ ಅತ್ಯಾಚಾರ ನಡೆದಿರುವುದು ದೃಢಪಟ್ಟಿದೆ' ಎಂದು ಉಜ್ಜಯಿನಿ ಜಿಲ್ಲಾ ಪೊಲೀಸ್ ವರಿಷ್ಠರು ನಂತರ ಖಚಿತಪಡಿಸಿದ್ದರು.

'ಬಾಲಕಿಯು ಬಹುತೇಕ ಉತ್ತರ ಪ್ರದೇಶದವಳು. ಆಕೆಯ ಬಳಿ ಯಾವುದೇ ಗುರುತುಪತ್ರ ಇಲ್ಲ. ಹೆಸರು, ವಿಳಾಸವನ್ನು ಹೇಳುವ ಸ್ಥಿತಿಯಲ್ಲೂ ಆಕೆ ಇಲ್ಲ. ದುಷ್ಕರ್ಮಿಗಳ ಪತ್ತೆಗೆ ಪೂರಕವಾಗಿ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿದ್ದರು.

ಈ ಮಧ್ಯೆ, ಆಪ್ತ ಸಮಾಲೋಕಕರು ಸಂತ್ರಸ್ತೆ ಸಾತ್ನಾ ಜಿಲ್ಲೆಯವರು ಎಂದು ಗುರುತಿಸಿದ್ದಾರೆ. ಸಾತ್ನಾ ಜಿಲ್ಲೆಯ ಸೈತ್‌ವಾಡಾ ಠಾಣೆಯಲ್ಲಿ ಬಾಲಕಿ ನಾಪತ್ತೆ ಪ್ರಕರಣವೊಂದು ದಾಖಲಾಗಿದ್ದು, ಈಕೆ ಅದೇ ಬಾಲಕಿಯಾ ಎಂಬುದು ತಿಳಿಯಬೇಕಾಗಿದೆ ಸಾತ್ನಾ ಪೊಲೀಸರು ಹೇಳಿದ್ದಾರೆ.

ಬಿಜೆಪಿ ಮಧ್ಯಪ್ರದೇಶದಲ್ಲಿ 20 ವರ್ಷದಿಂದ, ಕೇಂದ್ರದಲ್ಲಿ 10 ವರ್ಷದಿಂದ ಆಡಳಿತದಲ್ಲಿದೆ. ಆದರೆ, ಮಧ್ಯಪ್ರದೇಶದಲ್ಲಿಯೇ ಹೆಚ್ಚಿನ ದೌರ್ಜನ್ಯ ಪ್ರಕರಣ ದಾಖಲಾಗಿವೆ.

ಅಖಿಲೇಶ್ ಯಾದವ್,
ಸಮಾಜವಾದಿ ಪಕ್ಷದ ಅಧ್ಯಕ್ಷ

ಪ್ರಧಾನಿ ಮೋದಿ ಭಾಷಣದಲ್ಲಿ ವಿಶೇಷವಾಗಿ 'ನಾರಿ ಶಕ್ತಿ'ಯ ಉಲ್ಲೇಖ ಇರುತ್ತದೆ. ಆದರೆ, ಮಹಿಳೆಯರ ವಿರುದ್ಧದ ದೌರ್ಜನ್ಯ ಹೆಚ್ಚುತ್ತಲೇ ಇವೆ.

ಮಮತಾ ಬ್ಯಾನರ್ಜಿ,
ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ

'ಚಿಕಿತ್ಸೆ ಬೇಕಿತ್ತು; ಜನ ಹಣ ಕೊಟ್ಟರು'

ಉಜ್ಜಯಿನಿ: ರಕ್ತಸ್ರಾವದಿಂದ ಬಳಲುತ್ತಿದ್ದ ಅತ್ಯಾಚಾರದ ಸಂತ್ರಸ್ತೆ, ನಿಶ್ಯಕ್ತಿಯಿಂದ ಮನೆಯಿಂದ ಮನೆಗೆ ಅಲೆದಾಡುತ್ತಿದ್ದಾಗ ಆಕೆಗೆ ಆರೈಕೆ, ಚಿಕಿತ್ಸೆಗೆ ನೆರವು ಬೇಕಿತ್ತು. ಆದರೆ, ಜನರು ₹ 50, ₹ 100 ಕೊಟ್ಟರು.

'ವಿಡಿಯೊ ಗಮನಿಸಿ ನಾವು ಆಕೆಯ ಗುರುತು ಪತ್ತೆ ಮಾಡಿದೆವು. ಆಗ ಬಾಲಕಿಯ ಬಳಿ ಜನರು ನೀಡಿದ್ದ ನೆರವಿನ ಹಣ ಒಟ್ಟು ₹ 120 ಇತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು' ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ಜನರು ಸಂತ್ರಸ್ತೆಗೆ ಆರೈಕೆ, ಚಿಕಿತ್ಸೆ ನೆರವು ಒದಗಿಸಲಿಲ್ಲ. ಕೆಲವರು ಹಣ ನೀಡಿದ್ದಾರೆ. ಬಾಲಕಿಯು ಟೋಲ್ ಬೂತ್ ಬಳಿಗೆ ಬಂದಾಗ ಸಿಬ್ಬಂದಿ ಕೆಲ ಬಟ್ಟೆ, ಹಣ ನೀಡಿದ್ದಾರೆ. ಕನಿಷ್ಠ 7–8 ಮಂದಿ ನೆರವಾಗಿದ್ದಾರೆ' ಎಂದು ಹೇಳಿದ್ದಾರೆ.

'ಬಾಲಕಿಗೆ ಹಣವಲ್ಲ, ಆರೈಕೆಗೆ ನೆರವು ಬೇಕಾಗಿತ್ತು ಎಂಬ ಪ್ರಶ್ನೆಗೆ, ಪೊಲೀಸ್ ಅಧಿಕಾರಿ ಸಚಿನ್ ಶರ್ಮಾ, 'ಜನರಿಗೆ ಅವರದೇ ಆದ ಆತಂಕವಿರಬಹುದು. ಆದರೆ, ಕೆಲವರು ಆದಷ್ಟು ನೆರವು ನೀಡಲು ಯತ್ನಿಸಿದ್ದಾರೆ' ಎಂದರು.

'ಬಾಲಕಿ ನಿರ್ದಿಷ್ಟವಾಗಿ ನೆರವು ಕೇಳಿಲ್ಲ. 'ನಾನು ಅಪಾಯದಲ್ಲಿದ್ದೇನೆ. ಕೆಲವರು ನನ್ನ ಹಿಂಬಾಲಿಸುತ್ತಿದ್ದಾರೆ' ಎಂದಷ್ಟೇ ಮತ್ತೆ, ಮತ್ತೆ ಹೇಳಿದ್ದಾಳೆ. ಆಕೆಗೆ ಖಚಿತತೆ ಇರಲಿಲ್ಲ. ಪೂರಕವಾಗಿ ಜನರು ಸ್ಪಂದಿಸಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

₹1 ಕೋಟಿ ಪರಿಹಾರ: ಕಾಂಗ್ರೆಸ್ ಆಗ್ರಹ

ಉಜ್ಜಯಿನಿ (ಪಿಟಿಐ): ಅತ್ಯಾಚಾರ ಕೃತ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ವಿರುದ್ಧ ಕಾಂಗ್ರೆಸ್ ಸೇರಿ ಪ್ರತಿಪಕ್ಷಗಳು ವಾಗ್ದಾಳಿ ನಡೆಸಿವೆ. 'ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲ. ಕಾನೂನು ಸುವ್ಯವಸ್ಥೆ ಇಲ್ಲ' ಎಂದು ತರಾಟೆಗೆ ತೆಗೆದುಕೊಂಡಿವೆ.

ಮಧ್ಯಪ್ರದೇಶ ಕಾಂಗ್ರೆಸ್ ಘಟಕದ ಮುಖ್ಯಸ್ಥ ಕಮಲ್‌ನಾಥ್ ಅವರು, ಸಂತ್ರಸ್ತೆಗೆ ₹ 1 ಕೋಟಿ ಪರಿಹಾರ ನೀಡಬೇಕು. ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಪಡಿಸಿದ್ದಾರೆ.

'ಚಿಕ್ಕ ಬಾಲಕಿ ಮೇಲಿನ ಕ್ರೂರ ಕೃತ್ಯ ಹೃದಯ ಕಲಕುತ್ತದೆ. ಆಕೆ ಅರೆ ಬೆತ್ತಲು ಸ್ಥಿತಿಯಲ್ಲಿ ರಕ್ಷಣೆಗಾಗಿ ಆಕೆಯ ಅಲೆದಾಟ, ಪ್ರಜ್ಞೆತಪ್ಪಿ ರಸ್ತೆಯಲ್ಲಿ ಬಿದ್ದಿರುವುದು ಎಲ್ಲವೂ ಮನುಕುಲವನ್ನು ನಾಚಿಕೆಗೀಡು ಮಾಡುತ್ತದೆ' ಎಂದು ಹೇಳಿದ್ದಾರೆ.

'ಈ ಕೃತ್ಯ ದೇಶವೇ ನಾಚಿಕೆಪಡುವಂತಹದ್ದು. ರಾಜ್ಯದಲ್ಲಿ ನ್ಯಾಯ ಇಲ್ಲ, ಕಾನೂನು ಸುವ್ಯವಸ್ಥೆ ಇಲ್ಲ, ಹಕ್ಕುಗಳ ರಕ್ಷಣೆಯು ಇಲ್ಲ ಎಂದು ಕಾಂಗ್ರೆಸ್ ಸಂಸದ ರಾಹುಲ್‌ಗಾಂಧಿ 'ಎಕ್ಸ್' ಜಾಲತಾಣದಲ್ಲಿ ಸಂದೇಶ ಪೋಸ್ಟ್ ಮಾಡಿದ್ದಾರೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ, 'ಈ ಕೃತ್ಯವು 2012ರಲ್ಲಿ ನಡೆದಿದ್ದ ನಿರ್ಭಯಾ ಪ್ರಕರಣಕ್ಕಿಂತಲೂ ಕ್ರೂರವಾದುದು' ಎಂದಿದ್ದಾರೆ.

ಮಹಿಳೆ ಸುರಕ್ಷಿತಳಲ್ಲ –ಪ್ರಿಯಾಂಕಾ

ನವದೆಹಲಿ: 'ಬಿಜೆಪಿಯ ದುರಾಡಳಿತದಲ್ಲಿ ಮಹಿಳೆಯರು, ಬಾಲಕಿಯರು, ಬುಡಕಟ್ಟು ಜನರು ಮತ್ತು ದಲಿತರು ಸುರಕ್ಷಿತರಲ್ಲ' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಟೀಕಿಸಿದ್ದಾರೆ.

'ಎಕ್ಸ್' ಜಾಲತಾಣದಲ್ಲಿ ಸಂದೇಶ ಪೋಸ್ಟ್ ಮಾಡಿರುವ ಅವರು, 'ಮಹಾಕಾಳಿ ದೇವಿಯ ನಗರದಲ್ಲಿ ಪುಟ್ಟ ಬಾಲಕಿಯ ಮೇಲೆ ಕ್ರೂರತೆ ಮೆರೆದಿದೆ. ರಾಜ್ಯದಲ್ಲಿ ಕಾನೂನು ಸ್ಥಿತಿ. ಬಾಲಕಿಯರಿಗೆ ರಕ್ಷಣೆ ನೀಡದೇ 'ಲಾಡ್ಲಿ ಬೆಹನಾ' ಯೋಜನೆ ಘೋಷಿಸಿದರೆ ಏನು ಪ್ರಯೋಜನೆ? ಸರ್ಕಾರ ಮಹಿಳೆಯ ಘನತೆ ರಕ್ಷಿಸಲು ಅಸಮರ್ಥವಾಗಿದೆ' ಎಂದು ಟೀಕಿಸಿದ್ದಾರೆ.



ನವದೆಹಲಿಯ ಕೀರ್ತಿ ನಗರದ ಪೀಠೋಪಕರಣಗಳ ಮಾರುಕಟ್ಟೆಗೆ ಗುರುವಾರ ಭೇಟಿ ನೀಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬಡಗಿಗಳ ಜೊತೆಗೆ ಸಂವಾದ ನಡೆಸಿದ ಬಳಿಕ ಮರಗೆಲಸ ಮಾಡುವ ಉಪಕರಣವನ್ನು ಬಳಸಲು ಪ್ರಯತ್ನಿಸಿದರು –ಪಿಟಿಐ ಚಿತ್ರ

ಬಿಧೂಡಿ ಪ್ರಕರಣ: ಹಕ್ಕುಬಾಧ್ಯತಾ ಸಮಿತಿಗೆ ದೂರು ಒಪ್ಪಿಸಿದ ಸ್ಪೀಕರ್

ನವದೆಹಲಿ (ಪಿಟಿಐ): ಬಿಜೆಪಿ ಸದಸ್ಯ ರಮೇಶ್ ಬಿಧೂಡಿ ಅವರಿಗೆ ಸಂಬಂಧಿಸಿದ ಪ್ರಕರಣದಲ್ಲಿ ವಿವಿಧ ಸಂಸದರು ನೀಡಿರುವ ದೂರುಗಳನ್ನು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿದ್ದಾರೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ, ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಡಿಎಂಕೆ ಸಂಸದೆ ಕನಿಮೊಳಿ ಸೇರಿದಂತೆ ವಿಪಕ್ಷಗಳ ಹಲವು ಸದಸ್ಯರು ಬಿಧೂಡಿ ಅವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ದೂರು ನೀಡಿದ್ದರು.

ನಿಶಿಕಾಂತ್ ದುಬೆ ಸೇರಿದಂತೆ ಹಲವು ಬಿಜೆಪಿ ಸದಸ್ಯರು, ಬಿಎಸ್‌ಪಿ ಸದಸ್ಯರು ಪ್ರಚೋದನೆ ನೀಡಿದರು ಎಂದು ಆರೋಪಿಸಿದ್ದಾರೆ. ಈ ಅಂಶವನ್ನು ಗಮನಿಸಬೇಕು ಎಂದು ಕೋರಿ ಸ್ಪೀಕರ್ ಅವರಿಗೆ ದೂರು ನೀಡಿದ್ದರು.

ಈ ಎಲ್ಲವನ್ನು ಬಿಜೆಪಿ ಸಂಸದ ಸುನಿಲ್‌ಕುಮಾರ್ ಸಿಂಗ್ ನೇತೃತ್ವದ ಹಕ್ಕು ಬಾಧ್ಯತಾ ಸಮಿತಿಗೆ ಸ್ಪೀಕರ್ ಒಪ್ಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಕ್ಸ್ ಜಾಲತಾಣದಲ್ಲಿ ಗುರುವಾರ ಸಂದೇಶ ಪೋಸ್ಟ್ ಮಾಡಿರುವ ದುಬೆ, ದೂರುಗಳನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸುವ ತೀರ್ಮಾನಕ್ಕಾಗಿ ಸ್ಪೀಕರ್ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

'ಬಿಜೆಪಿಗೆ ಬಹುಮತ ಇರುವುದರಿಂದ ಇದು ಸಾಧ್ಯವಾಗಿದೆ. ಈ ಹಿಂದೆ ಹಲವು ಘಟನೆಗಳಿದ್ದರೂ ಯಾವುದೇ ಸಮಿತಿ ರಚನೆ ಆಗಿರಲಿಲ್ಲ. ಯಾರಿಗೂ ಶಿಕ್ಷೆಯೂ ಆಗಿರಲಿಲ್ಲ' ಎಂದು ಹೇಳಿದ್ದಾರೆ.

ಆಹಾರ ಕ್ಷಾಮ ನಿವಾರಿಸಿದ 'ಹಸಿರು ಕ್ರಾಂತಿ' ಹರಿಕಾರ

ಒಂದನೇ ಪುಟದಿಂದ

ಆ ಹೊತ್ತಿನಲ್ಲಿ ಭಾರತದ ಅರ್ಥ ವ್ಯವಸ್ಥೆಯು ಆಹಾರದ ಕೊರತೆಯ ಕಾರಣದಿಂದಾಗಿ ತೊಂದರೆಗೆ ಸಿಲುಕಿತ್ತು. ಭಾರತವು ಆಹಾರಕ್ಕಾಗಿ ಬೇರೆ ದೇಶಗಳ ನೆರವನ್ನು ನೆಚ್ಚಿಕೊಂಡಿತ್ತು. ಆದರೆ ಹೊಸ ತಂತ್ರಜ್ಞಾನದ ಕಾರಣದಿಂದಾಗಿ 1970ರ ದಶಕದ ಆರಂಭದಲ್ಲಿ ದೇಶವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿತು.

'ಬಿಕ್ಕಟ್ಟು ಎಂಬುದು ಹೊಸ ಆವಿಷ್ಕಾರಗಳಿಗೆ ತಾಯಿ ಇದ್ದಂತೆ. ನಾವು 1960ರ ದಶಕದಲ್ಲಿ ಬಿಕ್ಕಟ್ಟು ಎದುರಿಸಿದೆವು, ಅದನ್ನು ನಿವಾರಿಸುವಲ್ಲಿ ಯಶಸ್ಸು ಕಂಡೆವು' ಎಂದು ಅವರು 2008ರಲ್ಲಿ ಎಎಫ್‌ಪಿ ಸುದ್ದಿಸಂಸ್ಥೆ ಪ್ರತಿನಿಧಿ ಬಳಿ ಹೇಳಿದ್ದರು.

1971ರಲ್ಲಿ ಅವರಿಗೆ ಏಷ್ಯಾದ ನೊಬೆಲ್ ಎಂದೇ ಖ್ಯಾತವಾಗಿರುವ 'ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ' ದೊರೆಯಿತು. 20ನೆಯ ಶತಮಾನದ ಅತ್ಯಂತ ಪ್ರಭಾವಿ ವ್ಯಕ್ತಿಗಳ ಸಾಲಿನಲ್ಲಿ ಮಹಾತ್ಮ ಗಾಂಧಿ, ಕವಿ ರವೀಂದ್ರನಾಥ ಟ್ಯಾಗೋರ್ ಅವರ ಜೊತೆ ಸ್ವಾಮಿನಾಥನ್ ಅವರ ಹೆಸರೂ ಇರುತ್ತದೆ ಎಂದು 'ಟೈಮ್' ಪತ್ರಿಕೆಯು ಹೇಳಿದೆ.

ಸ್ವಾಮಿನಾಥನ್ ಅವರು ಕೃಷಿ ಕ್ಷೇತ್ರದಲ್ಲಿ ಮಾರ್ಗದರ್ಶಕನ ಸ್ಥಾನದಲ್ಲಿ ನಿಂತು ಮಾಡಿದ ಕೆಲಸಗಳ ಕಾರಣದಿಂದಾಗಿ ಕೋಟ್ಯಂತರ ಜನರ ಬದುಕು ಬದಲಾಯಿತು, ಭಾರತವು ಆಹಾರ ಭದ್ರತೆಯನ್ನು ಸಾಧಿಸಲು ಸಾಧ್ಯವಾಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನೆನಪಿಸಿಕೊಂಡಿದ್ದಾರೆ.

ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮವು ಸ್ವಾಮಿನಾಥನ್ ಅವರು ಹಸಿರು ಕ್ರಾಂತಿಯನ್ನು ಮುನ್ನಡೆಸಿದ ಬಗೆಯನ್ನು ಗಮನಿಸಿ 'ಆರ್ಥಿಕ ಪರಿಸರ ವಿಜ್ಞಾನದ ಪಿತಾಮಹ' ಎಂದು ಕೊಂಡಾಡಿದೆ. ಅವರಿಗೆ ದೇಶದ ಎರಡನೆಯ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮ ವಿಭೂಷಣ'ವನ್ನು 1989ರಲ್ಲಿ ಪ್ರದಾನ ಮಾಡಲಾಯಿತು.

ಹೆಚ್ಚು ಇಳುವರಿ ನೀಡುವ ಗೋಧಿ ಮತ್ತು ಭತ್ತದ ತಳಿಗಳ ಅಭಿವೃದ್ಧಿ ಮತ್ತು ಅವುಗಳ ಬಳಕೆಗೆ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದ್ದಕ್ಕಾಗಿ 1987ರಲ್ಲಿ ಮೊದಲ 'ವಿಶ್ವ ಆಹಾರ ಪ್ರಶಸ್ತಿ'ಯನ್ನು ಸ್ವಾಮಿನಾಥನ್ ಅವರಿಗೆ ಪ್ರದಾನ ಮಾಡಲಾಯಿತು.

ವಿಶ್ವ ಆಹಾರ ಪ್ರಶಸ್ತಿ ಪ್ರತಿಷ್ಠಾನದ ಪ್ರಕಾರ ದೇಶದ ಗೋಧಿಯ ಉತ್ಪಾದನೆಯು ಕೆಲವೇ ವರ್ಷಗಳಲ್ಲಿ ದುಪ್ಪಟ್ಟಾಗಿತ್ತು. ಹೆಚ್ಚು ಇಳುವರಿ ನೀಡುವ ಭತ್ತ, ಗೋಧಿಯ ತಳಿಗಳನ್ನು ಬೆಳೆಯುವುದಕ್ಕೆ ರೈತರಿಗೆ ತರಬೇತಿ ನೀಡುವಲ್ಲಿ ಕೂಡ ಅವರು ಕೆಲಸ ಮಾಡಿದರು. ಇದರ ಪರಿಣಾಮವಾಗಿ, ಆಹಾರದ ಕೊರತೆ ಎದುರಿಸುತ್ತಿದ್ದ ದೇಶವು ಆಹಾರ ರಫ್ತುದಾರ ಆಗಿ ಪರಿವರ್ತನೆ ಕಂಡಿತು.

ಸ್ವಾಮಿನಾಥನ್ ಅವರು 84 ಗೌರವ ಡಾಕ್ಟರೇಟ್‌ಗಳಿಗೆ ಪಾತ್ರರಾಗಿದ್ದಾರೆ. ವಿವಿಧ ದೇಶಗಳ ವಿಶ್ವವಿದ್ಯಾಲಯಗಳು ಅವರಿಗೆ ಡಾಕ್ಟರೇಟ್ ನೀಡಿ ಗೌರವಿಸಿವೆ. ರಾಯಲ್ ಸೊಸೈಟಿ ಆಫ್ ಲಂಡನ್ ಮತ್ತು ಅಮೆರಿಕದ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಸೇರಿದಂತೆ ಹಲವು ವೈಜ್ಞಾನಿಕ ಸಂಸ್ಥೆಗಳ ಫೆಲೊ ಆಗಿದ್ದರು. 2007ರಿಂದ 2013ರವರೆಗೆ ಅವರು ರಾಜ್ಯಸಭಾ ಸದಸ್ಯರಾಗಿಯೂ ಕರ್ತವ್ಯ ನಿಭಾಯಿಸಿದ್ದಾರೆ. ಸ್ವಾಮಿನಾಥನ್ ಅವರು 1979ರಿಂದ 1980ರ ನಡುವೆ ಕೇಂದ್ರ ಕೃಷಿ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಆಗಿದ್ದರು.

2008ರಲ್ಲಿ ರಾಯಿಟರ್ಸ್ ಸುದ್ದಿಸಂಸ್ಥೆಗೆ ನೀಡಿದ್ದ ಸಂದರ್ಶನದಲ್ಲಿ ಸ್ವಾಮಿನಾಥನ್ ಅವರು, ವಿಶ್ವಕ್ಕೆ ಭಾರತವು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಆಹಾರ ಒದಗಿಸುವಂತೆ ಆಗುವಲ್ಲಿ ಸಂರಕ್ಷಣಾ ಕೃಷಿ ಮತ್ತು ಹಸಿರು ತಂತ್ರಜ್ಞಾನ ಬಹಳ ಮಹತ್ವದ್ದು ಎಂದು ಹೇಳಿದ್ದರು. 'ಹಸಿರು ಕ್ರಾಂತಿಯು ನಮ್ಮಲ್ಲಿ ಸಾಧನೆಯ ಭಾವವೊಂದನ್ನು ತಂದಿತು. ಉತ್ಪಾದನೆಯ ಸಮಸ್ಯೆಯನ್ನು ನಾವು ಬಗೆಹರಿಸಿದೆವು ಎಂಬ ಭಾವ ಅದು. ಈಗ ಉತ್ಪಾದನೆ ಹಾಗೂ ಉತ್ಪಾದಕತೆಯಲ್ಲಿ ಸ್ಥಿರವಾದ ಮಟ್ಟ ತಲುಪಿದ್ದೇವೆ. ಈಗ ಗ್ರಾಮೀಣ ಮೂಲಸೌಕರ್ಯದಲ್ಲಿ ಅಗತ್ಯ ಪ್ರಮಾಣದ ಹೂಡಿಕೆ ಇಲ್ಲದಿರುವುದು ಒಂದು ಸಮಸ್ಯೆ' ಎಂದು ಅವರು ನಂತರ ಹೇಳಿದ್ದರು.



ಬರಗಾಲ ಕಂಡು ಕೃಷಿ ವಿಜ್ಞಾನಿಯಾದರು

ಚೆನ್ನೈ: ಎಂ.ಎಸ್. ಸ್ವಾಮಿನಾಥನ್ ಅವರು ತಮ್ಮ ತಂದೆಯಂತೆಯೇ ವೈದ್ಯನಾಗುವ ಹಂಬಲ ಹೊತ್ತಿದ್ದರು. ಆದರೆ, 1943ರಲ್ಲಿ ಬಂಗಾಳ ಕಂಡ ಕ್ಷಾಮವು ಅವರು ತಮ್ಮ ಮನಸ್ಸು ಬದಲಿಸುವಂತೆ ಮಾಡಿತು.

ಈ ಕ್ಷಾಮದಿಂದಾಗಿ ಲಕ್ಷಾಂತರ ಮಂದಿ ಸಾವಿಗೀಡಾಗಿದ್ದನ್ನು ಕಂಡು ಸ್ವಾಮಿನಾಥನ್, ಕೃಷಿ ಸಂಶೋಧನೆಯತ್ತ ಮುಖ ಮಾಡಿದರು. ಕೊಯಮತ್ತೂರು ಕೃಷಿ ಕಾಲೇಜು ಸೇರಿದರು (ಈಗಿನ ಹೆಸರು ತಮಿಳುನಾಡು ಕೃಷಿ ವಿಶ್ವವಿದ್ಯಾಲಯ).

ಅವರು ತಮಗೆ ಪ್ರಶಸ್ತಿಯ ರೂಪದಲ್ಲಿ ಬಂದ ಹಣವನ್ನು ಸಾರ್ವಜನಿಕ ಒಳಿತಿಗಾಗಿ ಖರ್ಚು ಮಾಡುತ್ತಿದ್ದರು. 'ಎಂ.ಎಸ್. ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನ'ವನ್ನು ಅವರು 1987ರಲ್ಲಿ ತಮ್ಮನ್ನು ಅರಸಿ ಬಂದ ವಿಶ್ವ ಆಹಾರ ಪ್ರಶಸ್ತಿಯಿಂದ ದೊರೆತ ಹಣ ಬಳಸಿ ಸ್ಥಾಪಿಸಿದರು.

ಐಐಟಿ–ಬಾಂಬೆ: ಸಸ್ಯಾಹಾರಿಗಳಿಗೆ ಟೇಬಲ್ ಮೀಸಲು

ಮುಂಬೈ (ಪಿಟಿಐ): ಮೂರು ಹಾಸ್ಟೆಲ್‌ಗಳ ಕ್ಯಾಂಟೀನ್‌ನಲ್ಲಿನ ಆರು ಟೇಬಲ್‌ಗಳನ್ನು ಕೇವಲ 'ಸಸ್ಯಾಹಾರಕ್ಕೆ ಮಾತ್ರ' ಬಳಸಲು ಮೀಸಲಾಗಿರಿಸಿ ಐಐಟಿ ಬಾಂಬೆ ಮೆಸ್ ಸಮಿತಿ ತೀರ್ಮಾನ ಕೈಗೊಂಡಿದೆ.

'ಕ್ಯಾಂಟೀನ್‌ನಲ್ಲಿ ಆಹಾರ ತಾರತಮ್ಯತೆ ಇದೆ' ಎಂದು ಕೆಲ ವಿದ್ಯಾರ್ಥಿಗಳು ಈ ಹಿಂದೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆ ಬೆಳವಣಿಗೆಯ ಎರಡು ತಿಂಗಳ ನಂತರ ಮೆಸ್ ಸಮಿತಿಯು ಆರು ಟೇಬಲ್‌ಗಳನ್ನು ಸಸ್ಯಾಹಾರಿಗಳಿಗೆ ಮೀಸಲಿಡುವ ನಿರ್ಧಾರ ಕೈಗೊಂಡಿದೆ.

'ಈ ನಿಯಮವವನ್ನು ಉಲ್ಲಂಘಿಸಿದಲ್ಲಿ ಮೆಸ್ ಸಮಿತಿ ಕಠಿಣಕ್ರಮ ಕೈಗೊಳ್ಳಲಿದೆ. ಸೂಕ್ತ ದಂಡವನ್ನು ವಿಧಿಸಲಿದೆ ಎಂದು ಎಚ್ಚರಿಸಲಾಗಿದೆ. ನಿಯಮ ಉಲ್ಲಂಘನೆಯಿಂದ ಸೌಹಾರ್ದಕ್ಕೆ ಧಕ್ಕೆಯಾಗಲಿದೆ' ಎಂದು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕಳಹಿಸಿರುವ ಇ–ಮೇಲ್‌ನಲ್ಲಿ ತಿಳಿಸಿದೆ.

'ಹಾಸ್ಟೆಲ್‌ನಲ್ಲಿರುವ ಪ್ರತಿಯೊಬ್ಬರೂ ಅರಾಮ ಮತ್ತು ಅನುಕೂಲಕರ ಅನುಭವ ಹೊಂದಬೇಕು ಎಂಬುದು ನಮ್ಮ ಗುರಿ. ಇದಕ್ಕಾಗಿ ನಾವು ಪೂರಕಕ ವಾತಾವರಣ ನಿರ್ಮಿಸಲು ಬಯಸಿದ್ದೇವೆ. ಆರು ಟೇಬಲ್‌ಗಳನ್ನು ಸಸ್ಯಾಹಾರಿಗಳಿಗೆ ಮೀಸಲಾಗಿಟ್ಟಿದ್ದೇವೆ' ಎಂದು ತಿಳಿಸಲಾಗಿದೆ.

ಹಿಂಸಾಚಾರ, ಡಿ.ಸಿ ಕಚೇರಿ ಧ್ವಂಸ

ಒಂದನೇ ಪುಟದಿಂದ

ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಚೇರಿ ಧ್ವಂಸ ಮಾಡಿ, ಎರಡು ವಾಹನಗಳಿಗೆ ಬೆಂಕಿ ಹಾಕಿದ್ದಾರೆ. ಸಿಆರ್‌ಪಿಎಫ್ ಸಿಬ್ಬಂದಿ ಪರಿಸ್ಥಿತಿಯನ್ನು ತಹಬದಿಗೆ ತಂದಿದ್ದಾರೆ ಎಂದೂ ಹೇಳಿದ್ದಾರೆ.

ಪ್ರತಿಭಟನೆ ಹಿಂಸಾತ್ಮಕ ರೂಪಕ್ಕೆ ತಿರುಗಿದ್ದರಿಂದ ಇಂಫಾಲ್ ಪೂರ್ವ ಮತ್ತು ಪಶ್ಚಿಮದಲ್ಲಿ ಮತ್ತೆ ಕರ್ಫ್ಯೂ ವಿಧಿಸಲಾಗಿದೆ. ಒಟ್ಟು 65 ಪ್ರತಿಭಟನಕಾರರು ಗಾಯಗೊಂಡಿದ್ದಾರೆ. ಈ ನಡುವೆ, ತೌಬಲ್ ಜಿಲ್ಲೆಯ ಖೋಂಗ್ಜಾಮ್‌ನಲ್ಲಿರುವ ಬಿಜೆಪಿ ಕಚೇರಿಗೆ ಬೆಂಕಿ ಹಚ್ಚಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉದ್ರಿಕ್ತರ ಗುಂಪು ಪೊಲೀಸ್ ವಾಹನವನ್ನು ಸುಟ್ಟು ಹಾಕಿ ಪೊಲೀಸರ ಮೇಲೆ ಹಲ್ಲೆ ನಡೆಸಿದೆ. ಶಸ್ತ್ರಾಸ್ತ್ರಗಳನ್ನು ಕಸಿದುಕೊಂಡಿದೆ ಎಂದು ಹೇಳಿಕೆಯಲ್ಲಿ ಅವರು ಹೇಳಿದ್ದಾರೆ.

ಮಣಿಪುರದಲ್ಲಿ ಮೇ 3ರಂದು ಮೈತೇಯಿ ಮತ್ತು ಕುಕಿ ಜನಾಂಗಗಳ ನಡುವೆ ಘರ್ಷಣೆ ಆರಂಭವಾದಾಗಿನಿಂದ 180ಕ್ಕೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ. ಸಾವಿರಾರು ಜನರು ಗಾಯಗೊಂಡಿದ್ದಾರೆ.

ವಿದ್ಯಾರ್ಥಿ ಸಂಘಟನೆಗಳ ಆರೋಪ: ನಾಪತ್ತೆಯಾಗಿದ್ದ ವಿದ್ಯಾರ್ಥಿಗಳನ್ನು ಪತ್ತೆ ಹಚ್ಚಲು ಸರ್ಕಾರ ವಿಫಲವಾಗಿದೆ. ಆದರೆ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳನ್ನು ಕೇಂದ್ರೀಯ ಪಡೆಗಳು ನಿರ್ದಯವಾಗಿ ಹತ್ತಿಕ್ಕಲು ಅವಕಾಶ ಕೊಟ್ಟಿವೆ. ಇದರಿಂದ ಸುಮಾರು 200 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ ಎಂದು ವಿದ್ಯಾರ್ಥಿಗಳ ಸಂಘಟನೆಯಾದ ಮಣಿಪುರದ ಡೆಮಾಕ್ರಟಿಕ್ ಸ್ಟುಡೆಂಟ್ಸ್ ಅಲೈಯನ್ಸ್ ಆರೋಪಿಸಿದೆ.

ವಿದ್ಯಾರ್ಥಿಗಳ ವಿರುದ್ಧ ಕ್ಷಿಪ್ರ ಕಾರ್ಯಪಡೆ ಮತ್ತು ಇತರ ಭದ್ರತಾ ಪಡೆಗಳು ಕೈಗೊಂಡಿರುವ ಕ್ರಮವನ್ನು ಮಣಿಪುರ ಏಕತೆಗಾಗಿ ಸಮನ್ವಯ ಸಮಿತಿಯು ಖಂಡಿಸಿದೆ. ಭದ್ರತಾಪಡೆಗಳ ಇಂತಹ ಕಾರ್ಯಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದೂ ಒತ್ತಾಯಿಸಿದೆ.



ಗಣಪತಿ ವಿಸರ್ಜನೆ

ಮುಂಬೈನ ಗಿರಗಾಂವ್ ಚೌಪಾಟಿಯಲ್ಲಿ ಗುರುವಾರ ಗಣೇಶ ಮೂರ್ತಿಗಳನ್ನು ವಿಸರ್ಜಿಸಲಾಯಿತು. ಅಪಾರ ಭಕ್ತರು ಈ ಸಂಭ್ರಮಕ್ಕೆ ಸಾಕ್ಷಿಯಾದರು –ಪಿಟಿಐ ಚಿತ್ರ

ಮುಸ್ಲಿಮರ ವಿಶ್ವಾಸಕ್ಕೆ ಆರ್‌ಎಸ್‌ಎಸ್ ಯತ್ನ

ಲಖನೌ: 2024ರ ಮೇ ತಿಂಗಳಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗೂ ಮೊದಲು ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಮುಸ್ಲಿಮರ ವಿಶ್ವಾಸಕ್ಕೆ ಪಾತ್ರವಾಗಲು ಮುಂದಾಗಿದ್ದು, ಈ ದೇಶವು ಎಲ್ಲರಂತೆ ಮುಸ್ಲಿಮರದ್ದೂ ಆಗಿದೆ ಎಂದು ಪ್ರತಿಪಾದಿಸಿದೆ.

'ಮುಸ್ಲಿಮರೂ ನಮ್ಮವರೇ. ಅವರು ನಮ್ಮಿಂದ ಪ್ರತ್ಯೇಕವಾಗಿಲ್ಲ. ಅವರ ಆರಾಧನಾ ವಿಧಾನ ಮಾತ್ರ ಬದಲಾಗಿದೆ. ಈ ದೇಶ ಅವರಿಗೂ ಸೇರಿದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಇತ್ತೀಚೆಗೆ ಇಲ್ಲಿ ನಡೆದ ಸಂಘದ ಪದಾಧಿಕಾರಿಗಳು ಮತ್ತು ಬುದ್ಧಿಜೀವಿಗಳ ಸಭೆಯಲ್ಲಿ ಹೇಳಿದ್ದಾರೆ.

ಪ್ರಮುಖ ಮುಸ್ಲಿಂ ಮುಖಂಡರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಸಭೆಗೆ ಆಹ್ವಾನಿತರಾದವರಲ್ಲಿ ಲಖನೌ ಮೂಲದ ಪ್ರಸಿದ್ಧ ಮಾವು ಬೆಳೆಗಾರ ಕಲೀಮುಲ್ಲಾ ಅವರೂ ಇದ್ದರು.

ಮಣಿಪುರ: ಭದ್ರತಾ ಪಡೆಗಳ ಮೇಲೆ ಹಠಾತ್ ದಾಳಿ

ಉಗ್ರರಿಂದ ಜನರ ಪ್ರಚೋದನೆ

ನವದೆಹಲಿ/ಇಂಫಾಲ್ (ಪಿಟಿಐ): ಇಂಫಾಲ್ ಕಣಿವೆಯಲ್ಲಿ ಉಗ್ರರು ಮುಕ್ತವಾಗಿ ಸಂಚರಿಸುತ್ತಿರುವುದು ಹಾಗೂ ಉದ್ರಿಕ್ತ ಗುಂಪುಗಳನ್ನು ಇನ್ನಷ್ಟು ಪ್ರಚೋದಿಸುತ್ತಿರುವುದು ಕಂಡುಬಂದಿದೆ.

ಅಧಿಕಾರಿಗಳು ನೀಡಿರುವ ಮಾಹಿತಿ ಅನ್ವಯ, ಬುಧವಾರ ಸಂಜೆ ಪೊಲೀಸರ ಮೇಲೆ ನಡೆದಿರುವ ದಾಳಿಯ ಸಂದರ್ಭದಲ್ಲಿ ಶಸ್ತ್ರಸಜ್ಜಿತ ವ್ಯಕ್ತಿಗಳು ಕಪ್ಪು ಬಣ್ಣದ ಸಮವಸ್ತ್ರ ಧರಿಸಿ, ಉದ್ರಿಕ್ತ ಯುವಕರಿಗೆ ಪೊಲೀಸರ ಮೇಲೆ ದಾಳಿ ನಡೆಸುವಂತೆ ಸೂಚನೆ ನೀಡುತ್ತಿದ್ದರು. ಆ ದಾಳಿಯ ಸಂದರ್ಭದಲ್ಲಿ ಹಲವು ವಾಹನಗಳ ಬೆಂಕಿ ಹಚ್ಚಲಾಗಿದೆ.

ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್ (ಯುಎನ್‌ಎಲ್‌ಎಫ್), ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಮತ್ತು ಇತರ ನಿಷೇಧಿತ ಗುಂಪುಗಳಿಗೆ ಸೇರಿದ ಉಗ್ರರು ಉದ್ರಿಕ್ತ ಜನರ ಗುಂಪಿನಲ್ಲಿ ಸೇರಿಕೊಂಡಿದ್ದಾರೆ. ಅವರು ಭದ್ರತಾ ಪಡೆಗಳ ಮೇಲೆ ಹಠಾತ್ ದಾಳಿಗಳನ್ನು ನಡೆಸುತ್ತಿದ್ದಾರೆ. ಅಷ್ಟೇ ಅಲ್ಲದೆ, ಉದ್ರಿಕ್ತರಿಗೆ ಸೂಚನೆಗಳನ್ನು ಕೂಡ ನೀಡುತ್ತಿದ್ದಾರೆ ಎಂದು ಭದ್ರತಾ ಸಂಸ್ಥೆಗಳು ಹೇಳಿವೆ.

ತೆಂಗನೋಉಪಲ್ ಜಿಲ್ಲೆಯಲ್ಲಿ ಈಚೆಗೆ ಉದ್ರಿಕ್ತ ಗುಂಪೊಂದು ನಡೆಸಿದ ದಾಳಿನಲ್ಲಿ ಸೇನೆಯ ಲೆಫ್ಟಿನೆಂಟ್ ಕರ್ನಲ್ ಒಬ್ಬರು ಗಾಯಗೊಂಡಿದ್ದರು. ಆ ದಾಳಿ ನಡೆಸಿದ ಗುಂಪಿನಲ್ಲಿ ಉಗ್ರರು ಇದ್ದುದು ಪತ್ತೆಯಾಗಿದೆ. ಪ್ರತಿಭಟನೆಯಲ್ಲಿ ತೊಡಗಿರುವ ಜನಸಾಮಾನ್ಯರ ನಡುವೆ ಉಗ್ರರು ಸೇರಿಕೊಂಡು ಅಶಾಂತಿ ಸೃಷ್ಟಿಸಲು ಯತ್ನಿಸುವ ಸಾಧ್ಯತೆ ಇದೆ ಎಂದು ಭದ್ರತಾ ಸಂಸ್ಥೆಗಳು ಈಚೆಗೆ ಎಚ್ಚರಿಸಿದ್ದವು.

ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಿದ ಸಂದರ್ಭದಲ್ಲಿ, ಜನರ ಗುಂಪಿಗೆ ಉಗ್ರರು ಸೂಚನೆ ನೀಡುತ್ತಿದ್ದರು. ಇದಲ್ಲದೆ, ಗುಂಪಿನಲ್ಲಿ ಇದ್ದ ದುಷ್ಕರ್ಮಿಗಳು ಕಬ್ಬಿಣದ ತುಂಡುಗಳನ್ನು ಸ್ವಯಂಚಾಲಿತ ಕವಣೆ ಬಳಸಿ ಭದ್ರತಾ ಪಡೆಗಳತ್ತ ಎಸೆಯುತ್ತಿದ್ದರು.

ಬಹುತೇಕ ನಿಷ್ಕ್ರಿಯಗೊಂಡಿದ್ದ ಯುಎನ್‌ಎಲ್‌ಎಫ್, ಪಿಎಲ್‌ಎ, ಪೀಪಲ್ಸ್ ರೆವಲ್ಯೂಷನರಿ ಪಾರ್ಟಿ ಆಫ್ ಕಂಗ್ಲೈಪಾಕ್ ಸೇರಿದಂತೆ ಹಲವು ನಿಷೇಧಿತ ಗುಂಪುಗಳು ಈಗ ನಡೆಯುತ್ತಿರುವ ಸಂಘರ್ಷದ ಸಂದರ್ಭದಲ್ಲಿ ಮತ್ತೆ ಸಕ್ರಿಯವಾಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಯುಎನ್‌ಎಲ್‌ಎಫ್‌ನಲ್ಲಿ 330 ಮಂದಿ, ಪಿಎಲ್‌ಎ ಬಳಿ 300 ಜನರ ತಂಡ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿ.ಎಂ ಬಿರೇನ್ ಸಿಂಗ್ ಪೂರ್ವಜರ ಮನೆ ಮೇಲೆ ದಾಳಿ ಯತ್ನ

ಇಂಫಾಲ (ಪಿಟಿಐ): ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರ ಪೂರ್ವಜರ ಮನೆ ಮೇಲೆ ಗುರುವಾರ ರಾತ್ರಿ ಗುಂಪೊಂದು ದಾಳಿ ನಡೆಸಲು ಯತ್ನಿಸಿದೆ. ಭದ್ರತಾ ಪಡೆಗಳು ಇದನ್ನು ವಿಫಲಗೊಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಅವರು ಆ ಮನೆಯಲ್ಲಿ ವಾಸಿಸುತ್ತಿಲ್ಲ. ಅವರು ತಮ್ಮ ಅಧಿಕೃತ ನಿವಾಸದಲ್ಲಿ ನೆಲೆಸಿದ್ದಾರೆ.

ಇಲ್ಲಿನ ಹೈನ್‌ಗಂಗ್ ಪ್ರದೇಶದಲ್ಲಿರುವ ಮುಖ್ಯಮಂತ್ರಿಯವರ ಪೂರ್ವಜರ ನಿವಾಸದ ಮೇಲೆ ಗುಂಪು ದಾಳಿ ನಡೆಸಲು ಯತ್ನಿಸಿತು. ಈ ಗುಂಪನ್ನು ಭದ್ರತಾಪಡೆಗಳು 100 ಮೀಟರ್ ದೂರದಲ್ಲೇ ತಡೆದರು ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ. ಈ ಮನೆಗೆ ಭಾರಿ ಕಾವಲು ಇದ್ದರೂ ಅದರಲ್ಲಿ ಯಾರೂ ವಾಸಿಸುತ್ತಿಲ್ಲ ಎಂದು ಅಧಿಕಾರಿ ತಿಳಿಸಿದ್ದಾರೆ.

ಛತ್ತೀಸಗಢ, ಮಧ್ಯಪ್ರದೇಶ ಸೇರಿ 5 ರಾಜ್ಯಗಳ ವಿಧಾನಸಭೆ ಚುನಾವಣೆ

ಅಕ್ಟೋಬರ್ ಮೊದಲ ವಾರ ವೇಳಾಪಟ್ಟಿ?

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭೆ ಚುನಾವಣೆಗೆ ಚುನಾವಣಾ ಆಯೋಗವು ಅಕ್ಟೋಬರ್ ಮೊದಲ ವಾರದಲ್ಲಿ ವೇಳಾಪಟ್ಟಿ ಪ್ರಕಟಿಸುವ ಸಾಧ್ಯತೆ ಇದೆ. ಛತ್ತೀಸ್‌ಗಢ, ಮಧ್ಯಪ್ರದೇಶ, ತೆಲಂಗಾಣ, ಮಿಜೋರಾಂ ಮತ್ತು ರಾಜಸ್ಥಾನದಲ್ಲಿ ನವೆಂಬರ್– ಡಿಸೆಂಬರ್‌ನಲ್ಲಿ ಚುನಾವಣೆ ನಡೆಯಲಿದೆ.

ರಾಜಸ್ಥಾನದಲ್ಲಿ ಸಿದ್ಧತೆಗಳನ್ನು ಪರಿಶೀಲಿಸಲು ಚುನಾವಣಾ ಆಯೋಗದ ಅಧಿಕಾರಿಗಳು ಶುಕ್ರವಾರ ಅಲ್ಲಿಗೆ ಭೇಟಿ ನೀಡಲಿದ್ದಾರೆ. ಮೂರು ದಿನಗಳವರೆಗೆ ಅವರು ಪರಿಶೀಲನೆ ನಡೆಸುವರು. ಅ. 3ರಿಂದ ತೆಲಂಗಾಣಕ್ಕೆ ತೆರಳುವ ಅಧಿಕಾರಿಗಳ ತಂಡವು ಅಲ್ಲಿ ಮೂರು ದಿನಗಳವರೆಗೆ ಚುನಾವಣಾ ಸಿದ್ಧತೆಗಳನ್ನು ಪರಿಶೀಲಿಸಲಿದೆ ಎಂದು ಅಧಿಕೃತ ಮೂಲಗಳು ಹೇಳಿವೆ.

ಶುಕ್ರವಾರ ಜೈಪುರದಲ್ಲಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಚುನಾವಣಾ ಆಯುಕ್ತರುಗಳಾದ ಅನೂಪ್ ಚಂದ್ರ ಪಾಂಡೆ ಮತ್ತು ಅರುಣ್ ಗೋಯಲ್ ಅವರು ವಿವಿಧ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸುವರು ಎಂದು ಮುಖ್ಯ ಚುನಾವಣಾ ಅಧಿಕಾರಿ ಪ್ರವೀಣ್ ಗುಪ್ತ ತಿಳಿಸಿದ್ದಾರೆ.

ಆ ಬಳಿಕ ರಾಜಸ್ಥಾನದ ಪೊಲೀಸ್ ಇಲಾಖೆ, ಆದಾಯ ತೆರಿಗೆ, ಸಾರಿಗೆ, ವಾಣಿಜ್ಯ ತೆರಿಗೆ, ರೈಲ್ವೆ ಇತ್ಯಾದಿ ಇಲಾಖೆಗಳ ನೋಡಲ್ ಅಧಿಕಾರಿಗಳ ಜತೆ ಮಾತುಕತೆ ನಡೆಸುವರು.

ಸೆ.30ರಂದು ಚುನಾವಣಾ ಸಿದ್ಧತೆ ಕುರಿತು ಮುಖ್ಯ ಚುನಾವಣಾ ಅಧಿಕಾರಿ, ರಾಜ್ಯ ಪೊಲೀಸ್ ಮತ್ತು ಕೇಂದ್ರೀಯ ಪೊಲೀಸ್ ಪಡೆಯ ನೋಡಲ್ ಅಧಿಕಾರಿಗಳು ಮಾಹಿತಿ ನೀಡುವರು.

ರಾಜ್ಯ ನಾಯಕರ ಜತೆ ಶಾ– ನಡ್ಡಾ ಚರ್ಚೆ

(ಜೈಪುರ ವರದಿ): ಗೃಹಸಚಿವ ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಗುರುವಾರ ಬೆಳಿಗ್ಗೆ ರಾಜಸ್ಥಾನ ಭೇಟಿಯನ್ನು ಪೂರ್ಣಗೊಳಿಸಿದ್ದಾರೆ. ಪಕ್ಷದ ರಾಜ್ಯ ನಾಯಕರ ಜತೆ ಅವರು ಚುನಾವಣಾ ತಂತ್ರದ ಬಗ್ಗೆ ಬುಧವಾರ ಸಂಜೆಯಿಂದ ಗುರುವಾರ ನಸುಕಿನವರೆಗೂ ಚರ್ಚಿಸಿದ್ದಾರೆ.

ಗುರುವಾರ ಬೆಳಿಗ್ಗೆ ಇಬ್ಬರು ನಾಯಕರೂ ದೆಹಲಿಗೆ ತೆರಳಿದರು. ಸ್ಥಳೀಯ ಆರ್‌ಎಸ್‌ಎಸ್ ನಾಯಕರ ಜತೆ ಸಭೆ ನಡೆಸಲು ಸಾಧ್ಯವಾಗಿಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ.

ರಾಜಸ್ಥಾನ ವಿಧಾನಸಭೆಗೆ ಸ್ಪರ್ಧಿಸುವಂತೆ ಕೇಂದ್ರದ ಇಬ್ಬರು ಸಚಿವರಿಗೆ ಹೇಳಬಹುದು ಎಂಬ ವದಂತಿ ಮಧ್ಯೆಯೇ ಚರ್ಚೆಗಳು ನಡೆದಿವೆ.

ಬುಧವಾರ ಇಲ್ಲಿಗೆ ಆಗಮಿಸಿದ್ದ ಶಾ ಮತ್ತು ನಡ್ಡಾ ಅವರು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಅವರ ಜತೆ ಮೊದಲು ಮಾತುಕತೆ ನಡೆಸಿದರು. ನಂತರ ಪಕ್ಷದ ಹಿರಿಯ ನಾಯಕರ ಸಭೆಯಲ್ಲಿ ಚುನಾವಣಾ ತಂತ್ರದ ಬಗ್ಗೆ ಚರ್ಚಿಸಿದರು. ಬಿಜೆಪಿ ಈಚೆಗೆ ನಡೆಸಿದ 'ಪರಿವರ್ತನ ಯಾತ್ರೆಗಳ' ಕುರಿತ ಪ್ರತಿಕ್ರಿಯೆಗಳನ್ನೂ ಸಭೆಯಲ್ಲಿ ಪಡೆದುಕೊಳ್ಳಲಾಗಿದೆ.

ಕೇಂದ್ರ ಸಚಿವ ಮತ್ತು ರಾಜಸ್ಥಾನಕ್ಕೆ ಪಕ್ಷದ ಚುನಾವಣಾ ಉಸ್ತುವಾರಿ ಆಗಿರುವ ಪ್ರಲ್ಹಾದ ಜೋಶಿ ಸೇರಿದಂತೆ ಹಲವು ಪ್ರಮುಖರು ಸಭೆಯಲ್ಲಿದ್ದರು.

'ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕು' ಎಂಬ ಸಂದೇಶವನ್ನು ನೀಡಲಾಗಿದೆ. ಟಿಕೆಟ್ ವಿತರಣೆ ಮತ್ತು ಚುನಾವಣಾ ಸಂಬಂಧಿತ ಇತರ ವಿಷಯಗಳನ್ನೂ ಚರ್ಚಿಸಲಾಯಿತು ಎಂದು ಕೆಲವು ನಾಯಕರು ಹೇಳಿದ್ದಾರೆ.

ಕೆಲವು ಸಂಸದರಲ್ಲದೆ, ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಮತ್ತು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರನ್ನು ಕಣಕ್ಕಿಳಿಸಬಹುದು ಎಂದು ಪಕ್ಷದ ರಾಜ್ಯ ಘಟಕದ ಮೂಲಗಳು ತಿಳಿಸಿವೆ.

ಆದರೆ ಪಕ್ಷದ ನಾಯಕರು ಸಭೆಯ ವಿವರಗಳನ್ನು ಮಾಧ್ಯಮಗಳಿಗೆ ನೀಡಲಿಲ್ಲ. ಆರ್‌ಎಸ್‌ಎಸ್‌ನ ಹಿರಿಯ ಪ್ರಚಾರಕ ಪ್ರಕಾಶ್ ಚಂದ್ ಅವರಿಗೆ ಚುನಾವಣೆಯಲ್ಲಿ ಕೆಲವು ಹೊಣೆಗಾರಿಕೆಗಳನ್ನು ನೀಡುವ ಸಂಭವ ಇದೆ ಎಂದು ಹೇಳಲಾಗಿದೆ.

ಶ್ರೀನಗರದಿಂದ ಮಣಿಪುರಕ್ಕೆ ಎಸ್ಪಿ ವರ್ಗ

ನವದೆಹಲಿ (ಪಿಟಿಐ): ಉಗ್ರರಿಗೆ ಸಂಬಂಧಿಸಿದ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಪರಿಣತರಾಗಿರುವ ಶ್ರೀನಗರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ರಾಕೇಶ್ ಬಲ್ವಾಲ್ ಅವರನ್ನು ಮಣಿಪುರಕ್ಕೆ ವರ್ಗಾಯಿಸಲಾಗಿದೆ.



ರಾಕೇಶ್ ಬಲ್ವಾಲ್

2012ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಅವರನ್ನು ಮಣಿಪುರ ಕೇಡರ್‌ಗೆ ಅವಧಿಪೂರ್ವವಾಗಿ ವಾಪಸ್ ಕರೆಸಿಕೊಳ್ಳಲಾಗಿದೆ. 2021ರ ಡಿಸೆಂಬರ್‌ನಲ್ಲಿ ಅವರನ್ನು ಅರುಣಾಚಲ ಪ್ರದೇಶ, ಗೋವಾ, ಮಿಜೋರಾಂ ಮತ್ತು ಕೇಂದ್ರಾಡಳಿತ ಪ್ರದೇಶ (ಎಜಿಎಂಯುಟಿ) ಕೇಡರ್‌ಗೆ ವರ್ಗಾಯಿಸಲಾಗಿತ್ತು.

ಬಲ್ವಾಲ್ ಅವರನ್ನು ಎಜಿಎಂಯುಟಿ ಕೇಡರ್‌ನಿಂದ ಅವಧಿ ಪೂರ್ಣಗೊಳ್ಳುವ ಮೊದಲೇ ಮಣಿಪುರ ಕೇಡರ್‌ಗೆ ವರ್ಗಾಯಿಸುವ ಗೃಹ ವ್ಯವಹಾರಗಳ ಸಚಿವಾಲಯದ ಪ್ರಸ್ತಾವಕ್ಕೆ ಸಂಪುಟದ ನೇಮಕಾತಿ ಸಮಿತಿಯು ಅನುಮೋದನೆ ನೀಡಿದೆ ಎಂದು ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ.

ಜಮ್ಮುವಿನ ಉಧಂಪುರದ ನಿವಾಸಿಯಾಗಿರುವ ಅವರು, 2017ರಲ್ಲಿ ಮಣಿಪುರದ ಚುರಚಂದ್‌ಪುರದಲ್ಲಿ ಹಿರಿಯ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಇಂಫಾಲ್ ಮತ್ತು ತೊಬಾಲ್ ಸೇರಿ ಮಣಿಪುರದ ವಿವಿಧೆಡೆ ವಿವಿಧ ಕೆಲಸ ಮಾಡಿದ ಅನುಭವವೂ ಅವರಿಗೆ ಇದೆ.

ಶ್ರೀನಗರದಲ್ಲಿ ಪೊಲೀಸರ ಮೇಲೆ ದಾಳಿ ಮತ್ತು ಅಲ್ಪಸಂಖ್ಯಾತ ಸಮುದಾಯದ ಸದಸ್ಯರ ಹತ್ಯೆ ಸೇರಿದಂತೆ ಉಗ್ರರ ಚಟುವಟಿಕೆಗಳು ಹೆಚ್ಚಾದಾಗ ಅಲ್ಲಿ ಎಸ್‌ಎಸ್‌ಪಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಇದಕ್ಕೂ ಮೊದಲು ಅವರು ಎನ್‌ಐಎನಲ್ಲಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ಮೂರು ವರ್ಷಗಳವರೆಗೆ ನಿಯೋಜನೆಗೊಂಡಿದ್ದರು. ಪುಲ್ವಾಮಾ ಉಗ್ರರ ದಾಳಿ ತನಿಖೆ ನಡೆಸಿದ ತಂಡದ ಸದಸ್ಯರೂ ಆಗಿದ್ದರು.

ವೈದ್ಯ ಅಮಾನತು: ಸಾಮಾಜಿಕ ತಾಣದಲ್ಲಿ ಅನುಚಿತ ಟೀಕೆ ಮಾಡಿದ್ದಾರೆಂಬ ಕಾರಣಕ್ಕೆ ಮಣಿಪುರದಲ್ಲಿ ತಮೆಂಗ್‌ಲಾಂಗ್ ಜಿಲ್ಲೆಯ ವೈದ್ಯಕೀಯ ಅಧಿಕಾರಿಯೊಬ್ಬರನ್ನು ಅಮಾನತು ಮಾಡಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಅನುಚಿತ ಟೀಕೆ ಮಾಡಿರುವ/ ಹಂಚಿಕೊಂಡಿರುವ ಕಾರಣ ತಕ್ಷಣದಿಂದಲೇ ಅಮಾನತು ಮಾಡಲಾಗಿದೆ ಎಂದು ಹೇಳಲಾಗಿದೆ.

ಮುಖ್ಯಾಂಶಗಳು


- ಪುಲ್ವಾಮಾ ಉಗ್ರರ ದಾಳಿ ತನಿಖೆ ನಡೆಸಿದ ತಂಡದ ಸದಸ್ಯರೂ ಆಗಿದ್ದ ಬಲ್ವಾಲ್
- ಈ ಹಿಂದೆಯೂ ಮಣಿಪುರದಲ್ಲಿ ಕೆಲಸ ನಿರ್ವಹಿಸಿದ್ದ ಅಧಿಕಾರಿ

ಶವಪತ್ತೆಗೆ ಪೋಷಕರ ಮನವಿ

ಇಂಫಾಲ್: ಹತ್ಯೆಗೀಡಾಗಿರುವ ಇಬ್ಬರು ವಿದ್ಯಾರ್ಥಿಗಳ ಶವವನ್ನು ಹುಡುಕಿಕೊಡಬೇಕು, ಅಂತ್ಯಕ್ರಿಯೆ ನಿರ್ವಹಿಸಲು ನೆರವಾಗಬೇಕು ಎಂದು ಪೋಷಕರು ಸರ್ಕಾರಕ್ಕೆ ಗುರುವಾರ ಮನವಿ ಮಾಡಿದ್ದಾರೆ.

ಈ ಇಬ್ಬರ ಶವಗಳನ್ನು ಸಿಬಿಐ ಪತ್ತೆ ಹಚ್ಚಲಿದೆ ಎಂಬ ವಿಶ್ವಾಸವನ್ನು ಅವರು ಹೊಂದಿದ್ದಾರೆ. 'ಕಡೆಯ ಬಾರಿಗೆ ನಮ್ಮ ಮಕ್ಕಳನ್ನು ನಾವು ನೋಡಬೇಕು. ಅವರಿಗೆ ಸಲ್ಲಬೇಕಾದ ಘನತೆಯೊಂದಿಗೆ ಅಂತ್ಯಕ್ರಿಯೆ ನೆರವೇರಿಸಬೇಕು. ನಮಗಾಗಿರುವ ನಷ್ಟವನ್ನು ಯಾವುದೂ ಭರಿಸಲಾರದು' ಎಂದು ಯುವತಿಯ ತಂದೆ ಹಿಜಂ ಕುಲಜಿತ್ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಮೈತೇಯಿ ಸಮುದಾಯದ ಸಂಪ್ರದಾಯದ ಪ್ರಕಾರ, ಅಂತ್ಯಕ್ರಿಯೆ ನೆರವೇರಿಸಲು ಮೃತವ್ಯಕ್ತಿಗಳು ಧರಿಸಿರುವ ಉಡುಪಿನ ಸ್ವಲ್ಪ ಭಾಗವಾದರೂ ಇರಬೇಕು.



ಸುಭಾಷಿತ

ಒಂದು ವಿಷಯವನ್ನು ಸರಳವಾಗಿ ವಿವರಿಸಲು ನಿಮಗೆ ಸಾಧ್ಯವಾಗುತ್ತಿಲ್ಲ ಎಂದಾದರೆ, ನೀವು ಅದನ್ನು ಸರಿಯಾಗಿ ಅರ್ಥೈಸಿಕೊಂಡಿಲ್ಲ ಎಂದರ್ಥ.

–ಆಲ್‌ಬರ್ಟ್ ಐನ್‌ಸ್ಟೀನ್

ಬಿಜೆಪಿ ಸಖ್ಯ ತೊರೆದ ಎಐಎಡಿಎಂಕೆ ದ್ರಾವಿಡ ನೆಲದಲ್ಲಿ ಯಾರಿಗೆ ಅನುಕೂಲ?

ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಪಕ್ಷವನ್ನು ಸೇರಿಸಿಕೊಂಡ ಮರುದಿನವೇ ತಮಿಳುನಾಡಿನಲ್ಲಿ ಪ್ರಮುಖ ಮಿತ್ರಪಕ್ಷವಾಗಿದ್ದ ಎಐಎಡಿಎಂಕೆ ಸಖ್ಯವನ್ನು ಬಿಜೆಪಿ ಕಳೆದುಕೊಂಡಿದೆ. ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಬಿಜೆಪಿ ಜೊತೆಗಿನ ನಂಟು ಕಡಿದುಕೊಂಡಿರುವುದಾಗಿ ಘೋಷಿಸಿದ್ದಾರೆ. ಎಐಎಡಿಎಂಕೆ ಮುಖ್ಯಸ್ಥೆಯಾಗಿದ್ದ ಜೆ.ಜಯಲಲಿತಾ ಅವರ ಮರಣದ ನಂತರ ಈ ಪಕ್ಷವು ಹಲವು ಬದಲಾವಣೆಗಳನ್ನು ಕಂಡಿದೆ. ಹಲವು ವರ್ಷಗಳಿಂದ ಇದ್ದ ಮೈತ್ರಿಯಿಂದ ಎರಡೂ ಪಕ್ಷಗಳಿಗೆ ಕೆಲವು ಅನುಕೂಲಗಳು ಆಗಿದ್ದವು. ತಮಿಳುನಾಡಿನಲ್ಲಿ ಬಿಜೆಪಿಗೆ ನೆಲೆಯೇ ಇಲ್ಲ. ಹಾಗಾಗಿಯೇ ಅಲ್ಲಿ ಮಿತ್ರಪಕ್ಷವೊಂದರ ಅಗತ್ಯ ಬಿಜೆಪಿಗೆ ಇತ್ತು. ಜಯಲಲಿತಾ ಸಾವಿನ ನಂತರ ನಾಯಕತ್ವ ಮತ್ತು ಸಂಘಟನಾತ್ಮಕ ಸಮಸ್ಯೆಗಳನ್ನು ಎದುರಿಸಿದ ಎಐಎಡಿಎಂಕೆಗೆ ಬಿಜೆಪಿಯೊಂದಿಗಿನ ಮೈತ್ರಿ ನೆರವಾಗಿತ್ತು. ಈಗ, ಎಡಪ್ಪಾಡಿ ಪಳನಿಸ್ವಾಮಿ ಅವರು ಪ್ರಭಾವಿ ನಾಯಕನಾಗಿ ಹೊರಹೊಮ್ಮಿದ್ದಾರೆ. ಹಾಗಾಗಿ, ಎಐಎಡಿಎಂಕೆಗೆ ಹಿಂದಿನಂತೆ ಈಗ ಬಿಜೆಪಿಯ ಅಗತ್ಯ ಇಲ್ಲ. ದ್ರಾವಿಡ ಸಂಸ್ಕೃತಿಯ ಪ್ರಾಬಲ್ಯದ ರಾಜ್ಯದಲ್ಲಿ ಬಿಜೆಪಿ ಜೊತೆಗಿನ ನಂಟು ಎಐಎಡಿಎಂಕೆಗೆ ಹೊರೆಯಾಗಿಯೇ ಪರಿಣಮಿಸಿತ್ತು. ಹಿಂದುತ್ವವಾದಿ ಪಕ್ಷದ ಜೊತೆಗೆ ಇರುವುದು ಎಐಎಡಿಎಂಕೆಗೆ ರಾಜಕೀಯವಾಗಿ ಹಾನಿಕರವಾಗುವುದರ ಜೊತೆಗೆ ಚುನಾವಣೆಯಲ್ಲಿಯೂ ಉಪಯುಕ್ತವೇನೂ ಅಲ್ಲ. ತನ್ನ ಮತಗಳು ಬಿಜೆಪಿ ಪಾಲಾಗಿಬಿಡಬಹುದು ಎಂಬ ಭಯವೂ ಎಐಎಡಿಎಂಕೆಗೆ ಇತ್ತು.



ಚುನಾವಣಾ ರಾಜಕಾರಣದ ತಕ್ಷಣದ ಲಾಭಕ್ಕಿಂತ ದೀರ್ಘಾವಧಿ ಲೆಕ್ಕಾಚಾರದ ಮೇಲೆ ಬಿಜೆಪಿ ಭರವಸೆ ಇಟ್ಟಿದೆ. ಎಐಎಡಿಎಂಕೆಗೆ ಈಗ ಹಿಂದಿನಂತೆ ಬಿಜೆಪಿಯ ಅಗತ್ಯ ಇಲ್ಲ

ಸನಾತನ ಧರ್ಮಕ್ಕೆ ಸಂಬಂಧಿಸಿ ಇತ್ತೀಚೆಗೆ ಸೃಷ್ಟಿಯಾದ ವಿವಾದವು ಎಐಎಡಿಎಂಕೆಯ ಇಕ್ಕಟ್ಟಿನ ಸ್ಥಿತಿಯನ್ನು ಬಯಲಾಗಿಸಿದೆ. ಸನಾತನ ಧರ್ಮವನ್ನು ಟೀಕಿಸಿದ ಉದಯನಿಧಿ ಸ್ಟಾಲಿನ್ ಅವರನ್ನು ಬಿಜೆಪಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು. ಆದರೆ, ಉದಯನಿಧಿಯವರನ್ನು ಎಐಎಡಿಎಂಕೆ ಟೀಕಿಸಿದರೂ ಅವರ ಹೇಳಿಕೆಯನ್ನು ಖಂಡಿಸಲಿಲ್ಲ. ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರ ಆಕ್ರಮಣಕಾರಿ ವರ್ತನೆ ಮತ್ತು ಕಾರ್ಯಶೈಲಿಯೂ ಎಐಎಡಿಎಂಕೆಗೆ ಇರುಸುಮುರುಸು ಉಂಟು ಮಾಡಿದೆ. ದ್ರಾವಿಡ ಚಳವಳಿಯ ನಾಯಕ ಸಿ.ಎನ್. ಅಣ್ಣಾದೊರೈ ಮತ್ತು ಜಯಲಲಿತಾ ಅವರ ಕುರಿತು ಅಣ್ಣಾಮಲೈ ಆಡಿದ್ದ ಅಸಡ್ಡೆಯ ಮಾತುಗಳು ಕೂಡ ಮೈತ್ರಿ ಮುರಿಯುವಲ್ಲಿ ಕೆಲಸ ಮಾಡಿವೆ. ಎಐಎಡಿಎಂಕೆ ಮೈತ್ರಿಯಿಂದ ಹೊರನಡೆಯಲಿ, ಆ ಬಳಿಕ ಸ್ವತಂತ್ರವಾಗಿಯೇ ರಾಜ್ಯದಲ್ಲಿ ಪಕ್ಷ ಕಟ್ಟಬಹುದು ಎಂಬುದು ಅಣ್ಣಾಮಲೈ ಅವರ ಉದ್ದೇಶವಿದ್ದರೂ ಇರಬಹುದು. ಎಐಎಡಿಎಂಕೆಗೆ ಬಿಜೆಪಿಯ ಕೇಂದ್ರ ನಾಯಕತ್ವದ ಕುರಿತು ಯಾವುದೇ ಅಸಮಾಧಾನ ಇಲ್ಲ ಎಂಬುದು ಕೂಡ ಇಲ್ಲಿ ಗಮನಾರ್ಹ. ಬಿಜೆಪಿಯ ಕೇಂದ್ರ ನಾಯಕತ್ವವು ಎಐಎಡಿಎಂಕೆ ಬದಲಿಗೆ ಅಣ್ಣಾಮಲೈ ಅವರನ್ನೇ ನೆಚ್ಚಿಕೊಂಡಿದೆ. ಚುನಾವಣಾ ರಾಜಕಾರಣದ ತಕ್ಷಣದ ಲಾಭಕ್ಕಿಂತ ಅಣ್ಣಾಮಲೈ ಅವರ ದೀರ್ಘಾವಧಿ ಲೆಕ್ಕಾಚಾರದ ಮೇಲೆ ಬಿಜೆಪಿ ಭರವಸೆ ಇಟ್ಟಿದೆ.

ತಮಿಳುನಾಡಿಗೆ ಬಿಜೆಪಿ ವಿಶೇಷ ಮಹತ್ವ ನೀಡಿರುವುದು ನಿಜ. ತಮಿಳು ಪರಂಪರೆಯ ಸ್ಮರಣೆ, ತಮಿಳುನಾಡಿನ ಸೆಂಗೋಲ್ (ರಾಜದಂಡ) ಅನ್ನು ಸಂಸತ್ತಿನ ಹೊಸ ಕಟ್ಟಡದಲ್ಲಿ ಸ್ಥಾಪಿಸಿರುವುದು, ರಾಜ್ಯದ ಲೋಕಸಭಾ ಕ್ಷೇತ್ರವೊಂದರಿಂದ ನರೇಂದ್ರ ಮೋದಿ ಅವರು ಸ್ಪರ್ಧಿಸಬಹುದು ಎಂಬ ಯೋಚನೆಗಳೆಲ್ಲ ಇದನ್ನು ಸೂಚಿಸುತ್ತವೆ. ಎರಡೂ ಪಕ್ಷಗಳ ಮೈತ್ರಿಯು ಮುಗಿದುಹೋದ ಅಧ್ಯಾಯವಾದರೆ, ರಾಜ್ಯದಲ್ಲಿ ಚುನಾವಣಾ ಲಾಭ ಪಡೆದುಕೊಳ್ಳುವುದು ಬಿಜೆಪಿಗೆ ಸಾಧ್ಯವಿಲ್ಲ. ದೇಶದ ಹೆಚ್ಚು ಪ್ರಗತಿಪರ ಮತ್ತು ಆರ್ಥಿಕವಾಗಿ ಸದೃಢವಾದ ದಕ್ಷಿಣ ಭಾಗವು ಬಿಜೆಪಿಗೆ ಒಲಿಯುವ ಲಕ್ಷಣಗಳು ಕಾಣಿಸುತ್ತಿಲ್ಲ. ಕರ್ನಾಟಕದಲ್ಲಿ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡರೂ ಚುನಾವಣೆಯಲ್ಲಿ ಹೆಚ್ಚಿನ ಲಾಭವೇನೂ ಆಗದು. ಬಿಜೆಪಿಯ ರಾಜಕೀಯ ಮತ್ತು ಸೈದ್ಧಾಂತಿಕ ಹೊರೆಯನ್ನು ಕಳಚಿಕೊಂಡರೆ ಚುನಾವಣೆಯಲ್ಲಿ ಉತ್ತಮ ಸಾಧನೆ ಮಾಡಬಹುದೆಂಬ ಭರವಸೆಯನ್ನು ಎಐಎಡಿಎಂಕೆ ಹೊಂದಿದೆ. 2024ರ ಲೋಕಸಭಾ ಚುನಾವಣೆಗಿಂತ 2026ರ ವಿಧಾನಸಭಾ ಚುನಾವಣೆ ಮೇಲೆ ತನ್ನ ಗಮನವನ್ನು ಅದು ಕೇಂದ್ರೀಕರಿಸಿದೆ. ಎಐಎಡಿಎಂಕೆ ಮತ್ತು ಬಿಜೆಪಿ ಪ್ರತ್ಯೇಕವಾಗಿರುವುದು ಡಿಎಂಕೆ ನೇತೃತ್ವದ ಮೈತ್ರಿಕೂಟಕ್ಕೆ ಅನುಕೂಲಕರವಾಗಿ ಪರಿಣಮಿಸಬಹುದು. ರಾಜ್ಯದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟರೆ ಅದರ ಲಾಭ ಈ ಮೈತ್ರಿಕೂಟಕ್ಕೆ ದೊರಕಬಹುದು.

ದಿನದ ಟ್ವೀಟ್

ಯಶಸ್ಸಿನ ಪಾಲುದಾರ



ಎಂ.ಎಸ್.ಸ್ವಾಮಿನಾಥನ್ ತೀರಿಕೊಂಡಿದ್ದಾರೆ. ದೀರ್ಘಕಾಲದಿಂದ ಆಹಾರದ ಅಭಾವ ಎದುರಿಸುತ್ತಾ, ಅದಕ್ಕಾಗಿ ಇತರರನ್ನು ಅವಲಂಬಿಸಿದ್ದ ಭಾರತವನ್ನು ಆಹಾರಧಾನ್ಯ ರಫ್ತು ಮಾಡುವ ದೇಶವನ್ನಾಗಿ ರೂಪಿಸುವವರೆಗಿನ ಅವರ ಪಾತ್ರವು 20ನೇ ಶತಮಾನದ ಅತ್ಯಂತ ದೊಡ್ಡ ಯಶಸ್ಸಿನ ಕತೆಗಳಲ್ಲಿ ಒಂದಾಗಿ ನಿಲ್ಲುತ್ತದೆ.

ಎನ್.ಎಸ್.ಮಾಧವನ್, ಮಲಯಾಳಂ ಲೇಖಕ

ಕಿಡಿನುಡಿ

ಬೆಂಗಳೂರಿನ ಹೊರ ವರ್ತುಲ ರಸ್ತೆಯಲ್ಲಿ ನಾಲ್ಕು ಗಂಟೆಗಳ ಕಾಲ ಟ್ರಾಫಿಕ್ ಜಾಮ್ ಆಗಿದೆ. ಬಿಜೆಪಿಯು ಕಾಂಗ್ರೆಸ್ಸನ್ನು ದೂರುತ್ತದೆ, ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ದೂರುತ್ತದೆ. ಈ ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಕೋನವುಳ್ಳ ಒಬ್ಬನೇ ಒಬ್ಬ ರಾಜಕಾರಣಿಯೂ ನನ್ನ ರಾಜ್ಯದಲ್ಲಿ ಇಲ್ಲ.



ಸ್ವಾತಿ ಬೆಲ್ಲಂ

25 ವರ್ಷಗಳ ಹಿಂದೆ

ಮಂಗಳವಾರ, 29-9-1998

• ಶಾಸಕರ ಭವನದ ಗೌರವ ರಕ್ಷಣೆಗೆ ಯತ್ನ

ಬೆಂಗಳೂರು, ಸೆ. 28– ನಗರದಲ್ಲಿರುವ ಶಾಸಕರ ಭವನದ ಕೆಲವು ಕೊಠಡಿಗಳಲ್ಲಿ ಅನಪೇಕ್ಷಣೀಯ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ವಿಧಾನಮಂಡಲದ ಉಭಯ ಸದನಗಳ ಅಧ್ಯಕ್ಷರು, ಶಾಸಕರ ಭವನದಲ್ಲಿ ನಡೆಯುವ ಅಂಥ ಚಟುವಟಿಕೆಗಳನ್ನು ತಡೆಗಟ್ಟಲು ಬಿಗಿ ಕ್ರಮಗಳ ಎಚ್ಚರಿಕೆ ನೀಡಿದ್ದಾರೆ.

‘ಶಾಸಕರ ಭವನದ ಕೆಲವು ಕೊಠಡಿಗಳಲ್ಲಿ ಅನಪೇಕ್ಷಣೀಯ ಚಟುವಟಿಕೆಗಳು ನಡೆಯುತ್ತಿದ್ದು, ಇದರಿಂದ ಹಲವಾರು ಶಾಸಕರಿಗೆ ತಮ್ಮ ಕ್ಷೇತ್ರದ ಕೆಲಸಗಳನ್ನು ಶಾಂತ ರೀತಿಯಲ್ಲಿ ನಿರ್ವಹಿಸಲು ಅಡ್ಡಿಯಾಗಿದೆ’ ಎಂದು ವಿಧಾನಸಭೆಯ ಅಧ್ಯಕ್ಷ ರಮೇಶ್ ಕುಮಾರ್ ಮತ್ತು ವಿಧಾನ ಪರಿಷತ್ತಿನ ಸಭಾಪತಿ ಡಿ.ಬಿ.ಕಲ್ಮಣಕರ್ ಅವರು ಜಂಟಿಯಾಗಿ ಸುತ್ತೋಲೆ ಹೊರಡಿಸಿದ್ದಾರೆ.

• 356ನೇ ವಿಧಿ: ರಾಷ್ಟ್ರೀಯ ಚರ್ಚೆಗೆ ಅಡ್ವಾಣಿ ಸಲಹೆ

ಜೈಪುರ, ಸೆ. 28 (ಪಿಟಿಐ)– ತಪ್ಪು ಮಾಡುವ ರಾಜ್ಯ ಸರ್ಕಾರಗಳನ್ನು ವಜಾ ಮಾಡಲು ಅವಕಾಶ ನೀಡುವ ಸಂವಿಧಾನದ 356ನೇ ವಿಧಿ ಕುರಿತಂತೆ ರಾಷ್ಟ್ರೀಯ ಚರ್ಚೆ ನಡೆಯಬೇಕು ಎಂದು ಕೇಂದ್ರ ಗೃಹ ಸಚಿವ ಎಲ್.ಕೆ.ಅಡ್ವಾಣಿ ಸಲಹೆ ಮಾಡಿದ್ದಾರೆ.

ರಾಜಸ್ಥಾನ, ಹಿಮಾಚಲ ಪ್ರದೇಶ ಮತ್ತು ಮಧ್ಯಪ್ರದೇಶದ ಬಿಜೆಪಿ ನೇತೃತ್ವದ ಸರ್ಕಾರಗಳನ್ನು ವಜಾ ಮಾಡಲು ಕಾರಣವಾದ ಅಂಶಗಳೂ ಸೇರಿದಂತೆ 356ನೇ ವಿಧಿ ಬಳಕೆ ಬಗ್ಗೆ ಸಮಗ್ರ ದಾಖಲೆಯೊಂದನ್ನು ತಯಾರಿಸಬೇಕು ಎಂದು ಅವರು ಇಲ್ಲಿ ರಾಜಸ್ಥಾನ ಬಿಜೆಪಿ ಘಟಕದ ರಾಜಕೀಯ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 29-9-1973

• ರೈತನಿಗೆ ಒಳ್ಳೇ ಬೆಲೆ, ಬಳಕೆದಾರನಿಗೆ ಸುಲಲಿತ ಹಂಚಿಕೆ

ಬೆಂಗಳೂರು, ಸೆ. 28– ರೈತನಿಗೆ ಉತ್ತೇಜನಕಾರಿಯಾದ ಬೆಲೆ ನೀಡಿಕೆ ಹಾಗೂ ಬಳಕೆದಾರನಿಗೆ ಸುಲಲಿತವಾದ ಹಂಚಿಕೆ ವ್ಯವಸ್ಥೆ ಮಾಡದಿದ್ದರೆ ಆಹಾರ ಅಭಾವ ಮತ್ತು ಬೆಲೆ ಏರಿಕೆ ತಪ್ಪಿಸುವುದು ಕಷ್ಟ ಎಂದು ಇಂದು ವಿಧಾನಸಭೆಯಲ್ಲಿ ಸದಸ್ಯರು ಅಭಿಪ್ರಾಯಪಟ್ಟರು.

ಸಾಲವನ್ನೇ ಆದಾಯ ಎಂದು ಪರಿಗಣಿಸುವ ಮನೋವೃತ್ತಿ ತಪ್ಪದಿದ್ದರೆ ಹಣದುಬ್ಬರದಿಂದ ದೇಶ ಹಾಳಾದೀತೆಂದು ಎಂ.ರಾಜಶೇಖರಮೂರ್ತಿ ಅವರು ಎಚ್ಚರಿಸಿ, ಬೆಲೆ ವೇತನ ಮತ್ತು ತೆರಿಗೆ ಕ್ರಮದ ಬಗ್ಗೆ ಕಾಯಂ ಆಯೋಗ ರಚಿಸಬೇಕೆಂದು ಸಲಹೆ ಮಾಡಿದರು.

• ಕಾರವಾರದಲ್ಲಿ ಗುಂಡು 1 ಸಾವು, ಇಬ್ಬರಿಗೆ ಪೆಟ್ಟು

ಬೆಂಗಳೂರು, ಸೆ. 28– ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಇಂದು ಉದ್ರಿಕ್ತ ಜನರ ಗುಂಪನ್ನು ಚದುರಿಸಲು ಪೊಲೀಸರು ಗುಂಡು ಹಾರಿಸಿದ್ದರಿಂದ ಒಬ್ಬನು ಮೃತಪಟ್ಟು, ಇತರ ಇಬ್ಬರಿಗೆ ಗಾಯಗಳಾಗಿವೆ ಎಂದು ಇಲ್ಲಿಗೆ ಬಂದಿರುವ ವರದಿ ತಿಳಿಸಿದೆ.

ಬೆಲೆ ಏರಿಕೆ ವಿರುದ್ಧ ಪ್ರತಿಭಟಿಸಲು ವಿದ್ಯಾರ್ಥಿಗಳು ಬಂದ್ ಆಚರಣೆಗೆ ಕರೆ ನೀಡಿದ್ದು, ಇಂದು ಮೆರವಣಿಗೆಯನ್ನು ನಡೆಸಿದರೆಂದೂ ಮೆರವಣಿಗೆ ಸಾಗುತ್ತಿದ್ದಾಗ ಅಕ್ಕಪಕ್ಕದ ಅಂಗಡಿಗಳ ಮೇಲೆ ಕಲ್ಲುಗಳನ್ನು ಎಸೆದರೆಂದೂ ಹೇಳಲಾಗಿದೆ.

ದೊಡ್ಡ ಗೆರೆ ಎಳೆದು ಸಮಸ್ಯೆ ಚಿಕ್ಕದು ಮಾಡುವ ಮಾಯ್ಕಾರ

ಮೋದಿ ಕಣ್ಣು ಚುನಾವಣೆ ಮ್ಯಾಲೆ!



ಅನುಸಂಧಾನ

ರವೀಂದ್ರ ಭಟ್ಟ

ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಅವತಾರಪುರುಷ ಎಂದು ನಂಬುವ ಬಹಳಷ್ಟು ಜನ ನಮ್ಮ ದೇಶದಲ್ಲಿದ್ದಾರೆ. ವಿಷಯ ಅದಲ್ಲ. ಮೋದಿ ಅವರ ಇತ್ತೀಚಿನ ನಡೆಯನ್ನು ಗಮನಿಸಿದರೆ, ಅವರ ಕಟು ಟೀಕಾಕಾರರು ಕೂಡ ಈ ಮಾತನ್ನು ಒಪ್ಪುವ ಹಂತಕ್ಕೆ ಬಂದಿದ್ದಾರೆ. ಭಾರತದಲ್ಲಿ ಮೋದಿ ಎಷ್ಟೊಂದು ಪ್ರಭಾವಶಾಲಿ ಎಂದರೆ, ಅವರು ನಮ್ಮ ಕನಸುಗಳನ್ನು ಮರೆಸಬಲ್ಲರು. ನಮ್ಮ ಹೊಟ್ಟೆಪಾಡಿನ ಆದ್ಯತೆಯನ್ನೂ ಬದಿಗೆ ಸರಿಸಬಲ್ಲರು. ನಮ್ಮ ಉದ್ಯೋಗದ ಆಕಾಂಕ್ಷೆಯನ್ನೂ ಮಸುಕಾಗಿಸಬಲ್ಲರು. ದೇಶದ ಮುಂದೆ ಯಾವುದೇ ಸಮಸ್ಯೆ ಎಷ್ಟೇ ಪ್ರಬಲವಾಗಿದ್ದರೂ ಒಂದೆರಡು ದಿನಗಳಲ್ಲಿಯೇ ಅದನ್ನು ಕಿತ್ತೊಗೆಯಬಲ್ಲರು. ಅವರ ಮುಂದೆ ಯಾವುದೇ ಸವಾಲುಗಳನ್ನು ಇಟ್ಟರೂ ಅವುಗಳನ್ನು ಕ್ಷಣಮಾತ್ರದಲ್ಲಿ ಮರೆಮಾಚಬಲ್ಲರು. ಮಾತಿನ ಮೋಡಿಯಲ್ಲಿ ನಮ್ಮನ್ನು ನಾವು ಮರೆಯುವಂತೆ ಮಾಡಬಲ್ಲರು. ಸಣ್ಣ ಗೆರೆಯ ಪಕ್ಕ ದೊಡ್ಡ ಗೆರೆಯನ್ನು ಎಳೆಯಬಲ್ಲ ಮಾಯ್ಕಾರ ಅವರು.

ಮೋದಿ ಬಗ್ಗೆ ಮೇಲೆ ಹೇಳಿದ ಯಾವ ಮಾತುಗಳೂ ಅತಿಶಯೋಕ್ತಿಯಲ್ಲ. ‘ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿ ಎಲ್ಲಿ ಸ್ವಾಮಿ?’ ಎಂದು ಕೇಳಿದರೆ, ‘ಅಯೋಧ್ಯೆಯಲ್ಲಿ 2024ರ ಜನವರಿಯಲ್ಲಿ ರಾಮಮಂದಿರ ಉದ್ಘಾಟನೆ’ ಎಂದರು. ‘ಬೆಲೆ ಏರಿಕೆಯನ್ನು ಯಾವಾಗ ತಡೀತೀರಿ’ ಎಂದರೆ, ‘ಭಾರತವನ್ನು ಹಿಂದೂರಾಷ್ಟ್ರ ಮಾಡ್ತೀನಿ’ ಎಂದರು. ಈಗ ಎರಡು– ಮೂರು ತಿಂಗಳ ಹಿಂದೆ ಮಣಿಪುರದ ಗಲಾಟೆ ಎಷ್ಟು ದೊಡ್ಡ ಸಮಸ್ಯೆಯಾಗಿತ್ತು. ನಮ್ಮ ದೇಶದ ಮತ್ತು ವಿದೇಶದ ಮಾಧ್ಯಮಗಳಲ್ಲಿ ಅದರದ್ದೇ ಸುದ್ದಿಗಳು ತುಂಬಿ ತುಳುಕುತ್ತಿದ್ದವು. ಈಗ ನೋಡಿ ಯಾರೂ ಮಣಿಪುರದ ಸುದ್ದಿಯನ್ನೇ ಮಾತನಾಡುತ್ತಿಲ್ಲ. ಹಾಗಂತ ಮಣಿಪುರದಲ್ಲಿ ಶಾಂತಿ ನೆಲೆಯಾಗಿದೆಯೇ? ಜನಾಂಗೀಯ ದ್ವೇಷ ಕಡಿಮೆಯಾಗಿದೆಯೇ? ಮಣಿಪುರದ ಜನತೆ ನೆಮ್ಮದಿಯಿಂದ ಇದ್ದಾರೆಯೇ ಎಂದು ಕೇಳಿದರೆ ಉತ್ತರ ನಕಾರಾತ್ಮಕವಾಗಿಯೇ ಇದೆ. ಅಲ್ಲಿ ಇನ್ನೂ ಹಿಂಸೆ ತಾಂಡವವಾಡುತ್ತಿದೆ.

ಮಣಿಪುರದ ಗಲಭೆ ಬಗ್ಗೆ ಪ್ರಧಾನಮಂತ್ರಿಯವರು ಸಂಸತ್ತಿನಲ್ಲಿ ಹೇಳಿಕೆ ನೀಡಬೇಕು ಎಂಬ ಒಂದೇ ಕಾರಣಕ್ಕೆ ಮೋದಿ ಅವರ ವಿರುದ್ಧ ಅವಿಶ್ವಾಸ ನಿರ್ಣಯವನ್ನೂ ಮಂಡಿಸಲಾಯಿತು. ಆದರೂ ಮೋದಿ ಆ ಬಗ್ಗೆ ಹೆಚ್ಚೇನೂ ಮಾತನಾಡಲಿಲ್ಲ. ಮಣಿಪುರಕ್ಕೆ ಭೇಟಿಯನ್ನೂ ನೀಡಲಿಲ್ಲ. ಹಾಗಂತ ಅವರು ಸುಮ್ಮನಿದ್ದಾರೆ ಎಂದಲ್ಲ. ಬುಟ್ಟಿಯಿಂದ ‘ಒಂದು ದೇಶ ಒಂದು ಚುನಾವಣೆ’ ಐಡಿಯಾ ಹೊರಬಿಟ್ಟರು. ಈ ಬಗ್ಗೆ ಅಧ್ಯಯನ ನಡೆಸಲು ಹಿಂದಿನ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದಲ್ಲಿ ಸಮಿತಿ ರಚಿಸುವುದಾಗಿ ಪ್ರಕಟಿಸಿದರು. ಅಲ್ಲಿಗೆ ಮಣಿಪುರದ ವಿಷಯ ಮರೆಯಾಯ್ತು. ಏಕಕಾಲಕ್ಕೆ ಚುನಾವಣೆ ಎಂಬುದು ಬುಸುಗುಡತೊಡಗಿತು.

ಅಷ್ಟರಲ್ಲಿಯೇ ವಿರೋಧ ಪಕ್ಷಗಳು ಒಂದಾಗಿ ‘ಇಂಡಿಯಾ’ ಒಕ್ಕೂಟ ರಚಿಸಿಕೊಂಡವು. ದೇಶದಲ್ಲಿ ಒಂದು ಸಣ್ಣ ಸಂಚಲನ ಉಂಟಾಯಿತು. ಮೋದಿಯವರು ವಿಚಲಿತರಾಗಲಿಲ್ಲ. ಒಂದು ಸಣ್ಣ ಡೋಸ್ ಕೊಟ್ಟರು. ಅವರು ಹೆಚ್ಚೇನೂ ಮಾಡಿರಲಿಲ್ಲ. ರಾಷ್ಟ್ರಪತಿ ಔತಣಕೂಟದ ಆಹ್ವಾನ ಪತ್ರಿಕೆಯಲ್ಲಿ ಪ್ರೆಸಿಡೆಂಟ್ ಆಫ್ ಇಂಡಿಯಾ ಬದಲು ಪ್ರೆಸಿಡೆಂಟ್ ಆಫ್ ಭಾರತ ಎಂದು ಅಚ್ಚು ಹಾಕಿಸಿದ್ದರು ಅಷ್ಟೆ. ಮುಂದಿನದೆಲ್ಲಾ ಅವರ ನಿರೀಕ್ಷೆಯಂತೆಯೇ ನಡೆಯಿತು. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡುವ ಬಗ್ಗೆ ಮತ್ತು 370ನೇ ವಿಧಿ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಆರಂಭವಾಯಿತು. ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡಿದ ನಂತರವೂ ಅಲ್ಲಿನ ಪರಿಸ್ಥಿತಿ ಹೇಳಿಕೊಳ್ಳುವಷ್ಟು ಏನೂ ಬದಲಾಗಲಿಲ್ಲ. ಮೋದಿ ಏನೂ ವಿಚಲಿತರಾಗಲಿಲ್ಲ. ಅವರ ಬುಟ್ಟಿಯಿಂದ ಇನ್ನೊಂದು ಹಾವು ಹೊರಬಂತು. ಜನರೆಲ್ಲಾ ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ಚರ್ಚೆ ಮಾಡಲು ಆರಂಭಿಸಿದರು. ಈಗ ಏನಿದ್ದರೂ ಮೋದಿಯವರದ್ದು ಕ್ರಿಯೆ, ವಿರೋಧ ಪಕ್ಷಗಳದ್ದು ಬರೀ ಪ್ರತಿಕ್ರಿಯೆ ಅಷ್ಟೆ.

‘ನಮ್ಮದೇನೂ ರಾಮರಾಜ್ಯವಲ್ಲ. ರಾಮರಾಜ್ಯ ಮಾಡಬೇಕು ಎನ್ನುವುದು ನಮ್ಮ ಕನಸು ಅಷ್ಟೆ. ಅದಕ್ಕಾಗಿಯೇ ಒಂದಲ್ಲ ಒಂದು ಸಮಸ್ಯೆ ಸೃಷ್ಟಿಯಾಗುತ್ತಲೇ ಇರುತ್ತದೆ. ನಮ್ಮ ದೇಶದ ಕೆಲವು ಪ್ರದೇಶಗಳನ್ನು ಚೀನಾ ಆಕ್ರಮಿಸಿಕೊಂಡಿದೆ. ಈ ಬಗ್ಗೆ ಪ್ರಧಾನಿ ಮೋದಿ ಏನನ್ನೂ ಮಾಡುತ್ತಿಲ್ಲ, ಏನೂ ಹೇಳುತ್ತಿಲ್ಲ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹರಿಹಾಯಲು ಆರಂಭಿಸಿದರು. ಇತರ ಕೆಲವು ಮುಖಂಡರೂ ಅವರಿಗೆ ಸಾಥ್ ನೀಡಲು ಆರಂಭಿಸಿದರು. ಅವತಾರ ಪುರುಷನಿಗೆ ಇವೆಲ್ಲಾ ಒಂದು ಸಮಸ್ಯೆಯೇ? ಸಂಸತ್ತಿನ ವಿಶೇಷ ಅಧಿವೇಶನ ಕರೆಯುವ ಪ್ರಕಟಣೆ ಇದ್ದಕ್ಕಿದ್ದಂತೆಯೇ ಹೊರಬಿತ್ತು. ಏತಕ್ಕಾಗಿ ವಿಶೇಷ ಅಧಿವೇಶನ ಎಂಬುದು ಮೊದಲು ಸ್ಪಷ್ಟ ಇರಲಿಲ್ಲ. ನಂತರ ಗೊತ್ತಾಯಿತು, ಮಹಿಳಾ ಮೀಸಲಾತಿ ಮಸೂದೆಗೆ ಅನುಮೋದನೆ ಪಡೆಯುವುದಕ್ಕೆ ಈ ಅಧಿವೇಶನ ಎಂದು. ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನ ಮೀಸಲಿಡುವ ಮಸೂದೆಗೆ ಲೋಕಸಭೆ ಮತ್ತು ರಾಜ್ಯಸಭೆ ಅನುಮೋದನೆ ನೀಡಿದವು. ದೇಶದೆಲ್ಲೆಡೆ ಈ ಬಗ್ಗೆ ಚರ್ಚೆ ಆರಂಭವಾಯಿತು. ಮಹಿಳಾ ಮೀಸಲಾತಿಯಾಗಲೀ ಒಂದು ದೇಶ ಒಂದು ಚುನಾವಣೆಯಾಗಲೀ 2024ರ ಲೋಕಸಭಾ ಚುನಾವಣೆಗೆ ಅನ್ವಯವಾಗುವುದಿಲ್ಲ ಎನ್ನುವುದು ನಂತರ ಬಹಿರಂಗವಾಯಿತು. ಆದರೂ ಅವು ತಮ್ಮ ಉದ್ದೇಶವನ್ನು ಸಾಧಿಸಿಕೊಂಡವು.



ಹೊಸದಾಗಿ ನಿರ್ಮಿಸಲಾದ ಸಂಸತ್ ಭವನದಲ್ಲಿ ಕಾರ್ಯಕಲಾಪ ನಡೆಸುವ ಬಗ್ಗೆ ದೆಹಲಿಯಲ್ಲಿ ಸಂಭ್ರಮ ಮೂಡಿರುವಾಗಲೇ ಕೆನಡಾದಲ್ಲಿ ಖಾಲಿಸ್ತಾನ್ ಟೈಗರ್ ಫೋರ್ಸ್ (ಕೆಟಿಎಫ್) ಮುಖ್ಯಸ್ಥ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಾಯಿತು. ಈ ಹತ್ಯೆಯನ್ನು ಭಾರತ ಸರ್ಕಾರದ ಏಜೆಂಟರೇ ಮಾಡಿದ್ದಾರೆ ಎಂಬರ್ಥದಲ್ಲಿ ಕೆನಡಾ ಪ್ರಧಾನಿ ಆರೋಪಿಸಿದರು. ಜೊತೆಗೆ ಭಾರತೀಯ ರಾಯಭಾರಿಗಳನ್ನು ಉಚ್ಚಾಟಿಸಿಯೂ ಆಗಿತ್ತು. ಜಿ-20 ಮುಖಂಡರ ಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಭೇಟಿಯಾಗಿ ಮಾತುಕತೆ ನಡೆಸಿದ ಕೆಲವೇ ದಿನಗಳಲ್ಲಿ ಎರಡೂ ದೇಶಗಳ ರಾಜತಾಂತ್ರಿಕ ಸಂಬಂಧ ಹದಗೆಟ್ಟಿತು. ಈ ಇಕ್ಕಟ್ಟಿನ ಸಂದರ್ಭದಲ್ಲಿಯೇ ಹೊಸ ಸಂಸತ್ ಭವನದಲ್ಲಿ ಸದಸ್ಯರಿಗೆ ನೀಡಿದ ಸಂವಿಧಾನದ ಪ್ರಸ್ತಾವನೆ ಪ್ರತಿಯಲ್ಲಿ, ‘ಜಾತ್ಯತೀತ ಮತ್ತು ಸಮಾಜವಾದ’ ಪದಗಳು ಮಾಯವಾಗಿದ್ದವು. ಈ ಪದಗಳನ್ನು ಹೊಂದಿರದಿದ್ದ ಸಂವಿಧಾನದ ಮೂಲ ಪ್ರತಿಯನ್ನು ಅವರಿಗೆ ನೀಡಲಾಗಿತ್ತು. ಜೊತೆಗೆ ಮಹಿಳಾ ಮೀಸಲಾತಿ ಮಸೂದೆಯೂ ಮಂಡನೆಯಾಯಿತು. ಎಂದಿನಂತೆ ಜನರ ಗಮನವೆಲ್ಲಾ ಆ ಕಡೆಗೆ ಹರಿಯಿತು.

ಇದೆಲ್ಲಾ ಹೋಗಲಿ. 2014 ಮತ್ತು 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯು ದೇಶದಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಸುವ ಭರವಸೆ ನೀಡಿತ್ತು. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಆಸೆಯನ್ನೂ ತೋರಿಸಿತ್ತು. ಅಲ್ಲದೆ ಬೆಲೆ ಏರಿಕೆ ತಡೆಯುವುದಾಗಿ ಹೇಳಿಕೊಂಡಿತ್ತು. 2024ರ ಚುನಾವಣೆಗೂ ಇದೇ ಭರವಸೆಗಳು ಹೊರಬರಬಹುದು. ಆದರೆ ಹಿಂದಿನ 9 ವರ್ಷಗಳಲ್ಲಿ ಈ ಎರಡೂ ಭರವಸೆಗಳು ಹುಸಿಯಾಗಿವೆ. ಆದರೂ ನಾವೇನ್ ಕಮ್ಮಿ ಇಲ್ಲ. ಜಿ-20 ಸಮ್ಮೇಳನವನ್ನು ಯಶಸ್ವಿಯಾಗಿ ಮಾಡಿ ಇಡೀ ವಿಶ್ವ ನಮ್ಮ ಕಡೆ ನೋಡುವಂತೆ ಮಾಡಿದ್ದೇವೆ. 2024ರ ಜನವರಿಯಲ್ಲಿಯೇ ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಯನ್ನೂ ಮಾಡುತ್ತೇವೆ. ನೋಡ್ತಾ ಇರಿ, 2029ರ ವೇಳೆಗೆ ನಾವು ವಿಶ್ವಗುರು ಆಗೇ ಆಗ್ತೀವಿ. ಬೆಲೆ ಏರಿದರೇನು, ರಾಮ ನಗ್ತಾ ನಿಂತಿರುತ್ತಾನಲ್ಲ. ಅವನ ನಗುವಿನಲ್ಲಿ ನಮ್ಮ ಕಣ್ಣೀರು ಕರಗಿ ಹೋಗ್ತದಲ್ಲ.

ಮೋದಿಯವರೇ ನಮ್ಮ ಮುಂದೆ ಬಹಳಷ್ಟು ವಿಷಯಗಳನ್ನು ಇಟ್ಟಿದ್ದಾರೆ. ಅದು ಸಾಲದೆಂಬಂತೆ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಪುತ್ರ ಉದಯನಿಧಿ ಸನಾತನ ಧರ್ಮ ಕುರಿತ ವಿವಾದವನ್ನೂ ನಮ್ಮ ಮುಂದಿಟ್ಟಿದ್ದಾರೆ. ಅದನ್ನೂ ಬಿಜೆಪಿಯವರು ಯಶಸ್ವಿಯಾಗೇ ಬಳಸಿಕೊಳ್ಳುತ್ತಿದ್ದಾರೆ. ಇದೊಂದು ತರಹ ನಗುವವರ ಮುಂದೆ ಎಡವಿಬಿದ್ದ ಹಾಗಿದೆ. ಇದನ್ನೆಲ್ಲಾ ನೋಡಿದರೆ ಮತದಾರರು ಕೂಡ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಕವಿತೆಯಂತೆ ‘ಹಿಂದೆ ಹೇಗೆ ಚಿಮ್ಮುತಿತ್ತು ಕಣ್ಣತುಂಬ ಪ್ರೀತಿ! ಈಗ ಯಾಕೆ ಜ್ವಲಿಸುತಿದೆ ಏನೋ ಶಂಕೆ ಭೀತಿ!’ ಎಂದು ಕೇಳಬಹುದೇನೊ?

ಚುರುಮುರಿ



ಎಣ್ಣೆ ಮತ್ತು ನೀರು

• ಬಿ.ಎನ್.ಮಲ್ಲೇಶ್

‘ಲೇ ತೆಪರ, ಏನಲೆ ಇವತ್ತಿನ ಸುದ್ದಿ?’ ಹರಟೆ ಕಟ್ಟೆಯಲ್ಲಿ ದುಬ್ಬೀರ ಚಾ ಕುಡಿಯುತ್ತ ಕೇಳಿದ.

‘ಇವತ್ತಿಂದಾ? ಒಂದು ಎಣ್ಣೇದು, ಇನ್ನೊಂದು ನೀರಿಂದು... ಯಾವುದು ಬೇಕು?’

‘ಎರಡೂ ಬೇಕು ಕಣಲೆ, ಎರಡೂ ಮಿಕ್ಸ್ ಆದ್ರೆ ಚಂದ’ ದುಬ್ಬೀರ ಕಣ್ಣು ಮಿಟುಕಿಸಿದ.

‘ಆಹಾ... ಆಸೆ ನೋಡು. ನಾನೇಳಿದ್ದು ಮದ್ಯದಂಗಡಿ ಜಾಸ್ತಿ ಮಾಡ್ತಿರೋದಕ್ಕೆ ವಿರೋಧದ ಸುದ್ದಿ, ಆಮೇಲೆ ಕಾವೇರಿ ನೀರಿನ ಗಲಾಟೆ ಸುದ್ದಿ’ ತೆಪರೇಸಿ ನಕ್ಕ.

‘ಗೊತ್ತು ಕಣಲೆ, ಸುಮ್ನೆ ತಮಾಷೆ ಮಾಡಿದೆ’ ಎಂದ ದುಬ್ಬೀರ.

‘ಅದಿರ್ಲಿ, ಈ ನೀರಿನ ಗಲಾಟೆಗೆ ಎಣ್ಣೆ ಅಂಗಡಿ ಮುಚ್ಚೋದು ಯಾವ ನ್ಯಾಯ?’ ಗುಡ್ಡೆ ಆಕ್ಷೇಪಿಸಿದ.

ಮಂಜಮ್ಮಗೆ ಸಿಟ್ಟು ಬಂತು. ‘ಆಹಾ... ಎಲ್ರಿಗೂ ಎಣ್ಣೆ ಅಂಗಡಿ ಅಂದ್ರೆ ಎಷ್ಟ್ ಪ್ರೀತಿ ನೋಡು, ಹುಟ್ಟು ಕುಡುಕರು’ ಎಂದಳು.

‘ಹೌದು ಮತ್ತೆ, ನೀರು ಜಗಳ ಹಚ್ಚುತ್ತೆ, ಎಣ್ಣೆ ಎಲ್ಲರ್‍ನೂ ಒಂದುಮಾಡುತ್ತೆ ಗೊತ್ತಾ?’ ಗುಡ್ಡೆ ವಾದಿಸಿದ.

‘ಹೌದೌದು... ಕುಡಿಯೋಕೆ ಮುಂಚೆ ಎಣ್ಣೆ ಎಲ್ಲರ್‍ನೂ ಒಂದುಮಾಡುತ್ತೆ, ಕುಡಿದ ಮೇಲೆ ಹೊಡೆದಾಟ ಮಾಡುಸ್ತೆ, ನಂಗೊತ್ತಿಲ್ವಾ?’ ಮಂಜಮ್ಮ ನಕ್ಕಳು.

‘ಅದೆಲ್ಲ ಬೇಡ, ನೀನು ನೀರಿನ ಬಂದ್‌ಗೆ ಹೋಟ್ಲು ಮುಚ್ತೀಯಾ?’ ಗುಡ್ಡೆ ಕೇಳಿದ.

‘ಹು, ಮುಚ್ತೀನಿ’.

‘ಹಂಗಾದ್ರೆ ಎಣ್ಣೆ ಅಂಗಡಿ ಪರ ನಾವೂ ಬಂದ್‌ಗೆ ಕರೆ ಕೊಡ್ತೀವಿ, ಅವತ್ತೂ ನಿನ್ ಹೋಟ್ಲು ಮುಚ್ಬೇಕು’.

‘ಆತು ಬಿಡು, ಮುಚ್ತೀನಿ. ಎಣ್ಣೆ ಅಂಗಡಿ ಊರೂರಿಗಲ್ಲ, ಗಲ್ಲಿಗೊಂದೊಂದು ಕೊಡ್ಲಿ, ಅದ್ರಲ್ಲೂ ನಿನ್ ಮನಿ ಮುಂದೇನೇ ಒಂದು ಅಂಗಡಿ ಆಗ್ಲಿ ಅಂತ ಹಾರೈಸ್ತೀನಿ’.

‘ನನ್ ಮನಿ ಮುಂದಾ? ಯಾಕೆ?’

‘ನೀನು ಕುಡಿದು ರಸ್ತೇಲಿ ಬಿದ್ರೆ ನಿನ್ ಕಾಲಿಡಿದು ದರದರ ಎಳೆದು ಪಟ್ ಅಂತ ಅಲ್ಲೇ ನಿನ್ ಮನಿ ಒಳಕ್ಕೆ ಹಾಕಬಹುದಲ್ಲ ಅಂತ’.

ಮಂಜಮ್ಮನ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಚರ್ಚೆ

ಸನಾತನ: ಶಾಸ್ತ್ರಬದ್ಧ ಅಸಮಾನತೆ

ಸನಾತನ ಧರ್ಮ ಎಂಬ ಸಂಕಥನದಲ್ಲಿಯೇ ಎಲ್ಲ ಬಗೆಯ ಅಸಮಾನತೆ ಮತ್ತು ಭೇದಗಳನ್ನು ಶಾಸ್ತ್ರಬದ್ಧಗೊಳಿಸಲಾಗಿದ್ದು, ಹತ್ತಾರು ಆಚರಣೆಗಳ ಮೂಲಕ ಆ ಭಾವಗಳನ್ನು ಗಟ್ಟಿಗೊಳಿಸಲಾಗಿದೆ

• ಮೀನಾಕ್ಷಿ ಬಾಳಿ

ವೇದವೆಂಬುದು ಓದಿನ ಮಾತು/ ಶಾಸ್ತ್ರವೆಂಬುದು ಸಂತೆಯ ಸುದ್ದಿ/ ಪುರಾಣವೆಂಬುದು ಪುಂಡರ ಗೋಷ್ಠಿ/ ತರ್ಕವೆಂಬುದು ತಗರ ಹೋರಟೆ/ ಭಕ್ತಿಯೆಂಬುದು ತೋರುಂಬ ಲಾಭ/ ಗುಹೇಶ್ವರನೆಂಬುದು ಮೀರಿದ ಘನವು


ಸನಾತನ ಧರ್ಮವು ತನ್ನ ತಾತ್ವಿಕತೆಗೆ ಆಧಾರವಾಗಿ ಇಟ್ಟುಕೊಂಡಿರುವ ಎಲ್ಲ ಪಠ್ಯಗಳನ್ನು ಅಲ್ಲಮಪ್ರಭು ಈ ವಚನದಲ್ಲಿ ತುಂಬಾ ಸ್ಪಷ್ಟವಾಗಿ ನಿರಾಕರಿಸುತ್ತಾನೆ. ವೇದ, ಶಾಸ್ತ್ರ, ಪುರಾಣಗಳೆಲ್ಲವೂ ನಿರ್ದಿಷ್ಟ ಸಮುದಾಯದ ಹಿತಾಸಕ್ತಿ ಕಾಪಾಡುವ, ಆ ಮೂಲಕ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ನಿರ್ಲಜ್ಜವಾಗಿ ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡುತ್ತವೆ ಎಂಬುದನ್ನು ಬಸವಾದಿ ಶಿವಶರಣರು ಹತ್ತಾರು ವಚನಗಳಲ್ಲಿ ನಿಷ್ಕರ್ಷಿಸಿ ಅವುಗಳನ್ನು ಸಾರಾಸಗಟಾಗಿ ಧಿಕ್ಕರಿಸಿದ್ದಾರೆ. ಇಂಥ ಸನಾತನ ಧರ್ಮವನ್ನು ಉದಾತ್ತೀಕರಿಸುತ್ತ ಸಿ.ಎನ್.ರಾಮಚಂದ್ರನ್ ಅವರು ‘ಇಂದು ನಾವು ಅಳವಡಿಸಿಕೊಳ್ಳಬೇಕಿರುವುದು ಸನಾತನ ಧರ್ಮದ ಆಧುನಿಕ ರೂಪ’ ಎಂದು ಹೇಳಿದ್ದಾರೆ (ಪ್ರ.ವಾ., ಸೆ. 23).

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಬೃಹತ್ ನಿಘಂಟಿನಲ್ಲಿ, ಸನಾತನ ಎಂದರೆ ಯಾವಾಗಲೂ ಇರುವ, ಶಾಶ್ವತವಾದ, ಹಳೆಯದಾದ, ಪುರಾತನವಾದ ಎಂಬ ಅರ್ಥಗಳನ್ನು ನೀಡಲಾಗಿದೆ. ‘ಧ್ವನ್ಯಾಲೋಕ’ ಕೃತಿಯಲ್ಲಿ ಇದಕ್ಕೆ ಬ್ರಹ್ಮವೆಂತಲೂ ಅರ್ಥವಿರುವುದನ್ನು ಕಾಣಿಸಲಾಗಿದೆ. ಸನಾತನ ಧರ್ಮ ಎಂಬುದಕ್ಕೆ ಅದೇ ನಿಘಂಟುವಿನಲ್ಲಿ ಪರಂಪರಾಗತವಾಗಿರುವ ಧರ್ಮ ಎಂದು ಅರ್ಥ ನೀಡಲಾಗಿದೆ. ಈ ಎಲ್ಲ ಅರ್ಥಗಳು ಸನಾತನದ ಪ್ರಾಚೀನತೆಯನ್ನು, ಚಿರಂತನತೆಯನ್ನು ಹೇಳುತ್ತವೆ ವಿನಾ ಅದರ ಶ್ರೇಷ್ಠತೆ ಅಥವಾ ಜೀವಪರತೆಯನ್ನೇನೂ ದೃಢೀಕರಿಸುವುದಿಲ್ಲ.

ವೈದಿಕರ ತತ್ವ, ಸಿದ್ಧಾಂತಗಳು ಕಾನೂನುಬದ್ಧಗೊಳಿಸಿದ್ದ ಹಿಂಸೆಯನ್ನು ಹಳಿಯುವ ಬಸವಣ್ಣ, ವೇದಾದಿಗಳು ವಿಧಿಸಿದ ಜಾತಿ ವ್ಯವಸ್ಥೆಯ ಕೀಳಾಚಾರಗಳನ್ನು ವಿಡಂಬಿಸುತ್ತ ‘ವೇದ ನಡನಡುಗಿತ್ತು/ ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದುದಯ್ಯ! ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯ! ಆಗಮ ಹೊರತೊಲಗಿ ಅಗಲಿದ್ದಿತಯ್ಯ! ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ’ ಎಂದು ಘೋಷಿಸುತ್ತಾರೆ. ಅಂದರೆ ಸನಾತನಿಗಳ ವೇದಾದಿಗಳು, ಮನುಷ್ಯರು ಮತ್ತು ಅವರ ಕಾಯಕಗಳನ್ನು ಕುಲಾದಿಗಳಲ್ಲಿ ವಿಂಗಡಿಸಿ ಅವುಗಳಿಗೆ ಉಚ್ಚ, ನೀಚ ಎಂಬ ಷರಾ ಕೂಡ ಬರೆದಿದ್ದರು. ಅಸ್ಪೃಶ್ಯ ಕುಲದವರು ಅಧಮರು. ಅವರಿಗೆ ದೇವರನ್ನು ಮುಟ್ಟಿ ಪೂಜಿಸುವ, ಆರಾಧಿಸುವ, ಅಷ್ಟೇ ಏಕೆ ಕಣ್ಣಿಂದ ನೋಡುವ ಹಕ್ಕೂ ಇರಲಿಲ್ಲ. ಇಂಥ ಸನಾತನ ಧರ್ಮವು ಮಾದಾರ ಚೆನ್ನಯ್ಯನ ಮನೆಯ ಅಂಬಲಿಯ ಎಂಜಲನ್ನು ಕೂಡಲಸಂಗಯ್ಯನೆಂಬ ದೇವನು ಉಂಡನು ಎಂದು ಹೇಳಿದರೆ ಅರಗಿಸಿಕೊಂಡೀತೆ? ವೇದಾದಿಗಳು ನಡುಗಿ ಬಕ್ಕ ಬಾರಲೇ ಬೀಳದೆ ಏನು ತಾನೇ ಮಾಡಿಯಾವು ಎನ್ನುತ್ತಾರೆ ಬಸವಣ್ಣ.

ಚೆನ್ನಯ್ಯನ ಪ್ರಸಂಗವು ಪವಾಡ ಎನ್ನುವುದಾದರೆ, ಪುರಾಣಗಳ ಕಲ್ಪಿತ ಅಂಶಗಳನ್ನು ಪುರಾಣಗಳಿಂದಲೇ ಒಡೆಯುವ ವಚನಕಾರರ ತಾತ್ವಿಕ ಸಂಘರ್ಷವನ್ನು ಇಂಥ ಹತ್ತಾರು ವಚನಗಳು ನಿರೂಪಿಸುತ್ತವೆ. ಹೀಗೆ ಸುಮಾರು ಎಂಟು ಶತಮಾನಗಳ ಹಿಂದೆಯೇ ತಿರಸ್ಕರಿಸಲಾಗಿದ್ದ ಧರ್ಮದಲ್ಲಿ ಸ್ವೀಕರಿಸುವಂಥದ್ದು ಶೂದ್ರಾದಿ ದಲಿತರಿಗೆ ಏನಿದೆ?

ಆದಾಗ್ಯೂ ರಾಮಚಂದ್ರನ್ ಅವರು ‘ಸನಾತನ ಧರ್ಮವು ವ್ಯಾಪಕ ವೈಚಾರಿಕತೆಯನ್ನು ಆಧರಿಸಿದೆ. ಅದು ಶ್ರುತಿ, ಸ್ಮೃತಿ, ಪುರಾಣ ಈ ಮೂರು ವೈಚಾರಿಕ ಸ್ತಂಭಗಳ ಮೇಲೆ ನಿಂತಿದೆ’ ಎಂದು ಒಪ್ಪಿಸುವ ಪ್ರಯತ್ನ ಮಾಡಿದ್ದಾರೆ. ಇದು ನಿಜವೇ ಆಗಿದ್ದಲ್ಲಿ ಗೌತಮ ಬುದ್ಧ, ಮಹಾವೀರ, ಬಸವಾದಿ ಶರಣರು ಈ ಪರಿ ಖಂಡಿಸಿದ್ದು ಏಕೆ? ಬುದ್ಧನನ್ನು ವೇದಭಂಜಕನೆಂದೇ ಕರೆಯಲಾಗುತ್ತದೆ. ಹಾಗೆಯೇ ಜೈನ ಧರ್ಮವೂ ನಾಸ್ತಿಕವೆ. ಬಸವಾದಿಗಳ ಕಾಣ್ಕೆ ನಾಸ್ತಿಕವಲ್ಲವಾದರೂ ವೇದಾದಿಗಳನ್ನು ಮಾನ್ಯ ಮಾಡುವ ಸನಾತನವೆಂಬ ಧರ್ಮವನ್ನು ಅವರು ನಖಶಿಖಾಂತ ಹಳಿದಿದ್ದಾರೆ. ಕಾರಣ, ಈ ಸನಾತನ ಅರ್ಥಾತ್ ವರ್ಣಾಶ್ರಮ ಧರ್ಮ ಯಾವತ್ತೂ ಶೂದ್ರರನ್ನು, ಪಂಚಮರನ್ನು ಮನುಷ್ಯರೆಂದೇ ಪರಿಗಣಿಸಲಿಲ್ಲ.



ವೇದಪ್ರಣೀತ ಈ ಧರ್ಮದ ಎಲ್ಲ ಅಪಸವ್ಯಗಳನ್ನು ರಾಮಚಂದ್ರನ್ ವಿವರಿಸುತ್ತಾರಾದರೂ ಕೊನೆಗೆ ಮಾತ್ರ, ಉಪನಿಷತ್ತುಗಳ ಪಠಣ ಮತ್ತು ಮನನ ಮಾಡಬೇಕು, ಸ್ಮೃತಿಗಳನ್ನು ತಿರಸ್ಕರಿಸಬೇಕು ಹಾಗೂ ಪುರಾಣಗಳನ್ನು ಕಾಲ್ಪನಿಕ ಕಥೆಗಳಂತೆ ಓದಬೇಕು ಎಂದು ಶಿಫಾರಸು ಮಾಡುತ್ತಾರೆ. ಈ ಎಲ್ಲ ಸೂಚನೆಗಳನ್ನು ಅವರು ತುಳಿಸಿಕೊಂಡವರಿಗೆ ಹೇಳುತ್ತಾರೋ ಅಥವಾ ಧರ್ಮದ ಹೆಸರಲ್ಲಿ ಕೆಳಸಮುದಾಯದ ಜನರನ್ನು ತುಚ್ಛವೆಂದು ಈ ಕ್ಷಣಕ್ಕೂ ತಿಳಿದು ಅದರಂತೆ ಆಚರಿಸಿಕೊಂಡು ಬರುತ್ತಿರುವ ಸಮುದಾಯಗಳಿಗೆ ಹೇಳುತ್ತಾರೋ ಎನ್ನುವುದು ಸ್ಪಷ್ಟವಾಗಿಲ್ಲ. ಸನಾತನ ಧರ್ಮವೆಂದು ಕರೆಸಿಕೊಳ್ಳುತ್ತಿರುವ ಇದನ್ನು ಇಷ್ಟೆಲ್ಲ ಅನಿಷ್ಟಗಳ ನಡುವೆಯೂ ಆಚರಿಸಿಕೊಂಡು ಬರಬೇಕೆ?

ಅಷ್ಟಕ್ಕೂ ಸನಾತನ ಧರ್ಮದ ಕುರಿತು ಅದರ ಪ್ರತಿಪಾದಕರು ಎಷ್ಟೇ ಉದಾತ್ತೀಕರಿಸಿದರೂ ಅದರ ಮೂಲದಲ್ಲಿರುವ ತಾರತಮ್ಯ, ಅಸಮಾನತೆ ಇಲ್ಲವಾಗುತ್ತವೆಯೇ? ಕಾರಣ, ಸನಾತನ ಧರ್ಮ ಎಂಬ ಸಂಕಥನದಲ್ಲಿಯೇ ಎಲ್ಲ ಬಗೆಯ ಅಸಮಾನತೆ ಮತ್ತು ಭೇದಗಳನ್ನು ಶಾಸ್ತ್ರಬದ್ಧಗೊಳಿಸಲಾಗಿದೆ. ಅಷ್ಟೇ ಅಲ್ಲ ಹತ್ತಾರು ಆಚರಣೆಗಳ ಮೂಲಕ ಆ ಭಾವಗಳನ್ನು ಗಟ್ಟಿಗೊಳಿಸುತ್ತಲೇ ಬರಲಾಗಿದೆ. ಉಪನಿಷತ್ತುಗಳ ಅಪ್ರಾಯೋಗಿಕ ಆದರ್ಶಗಳಿಂದ ಸಮಾಜದಲ್ಲಿ ಇಲ್ಲಿಯವರೆಗೆ ವೈದಿಕ ಲೋಕದಲ್ಲಿ ಅದಾವ ಬದಲಾವಣೆ ಆಗಿದೆ ಎಂಬುದನ್ನು ಪ್ರಮಾಣೀಕರಿಸಬೇಕಲ್ಲವೆ?

ವಾಚಕರ ವಾಣಿ

ವೈದ್ಯಕೀಯ ಕಾಲೇಜು: ಆತಂಕಕಾರಿ ಮಾರ್ಗಸೂಚಿ

‘ವೈದ್ಯಕೀಯ ಕಾಲೇಜು: ದಕ್ಷಿಣದ ರಾಜ್ಯಗಳ ಅಧಿಕಾರ ಮೊಟಕು’ ಸುದ್ದಿ (ಪ್ರ.ವಾ., ಸೆ. 28) ಆಘಾತಕಾರಿಯೇ ಸರಿ. ಆರೋಗ್ಯವೇ ಭಾಗ್ಯ ಎಂದು ಸದಾ ಹೇಳುವ ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾದ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಆಯಾ ರಾಜ್ಯಗಳ ಜನಸಂಖ್ಯೆ ಆಧರಿಸಿ ವೈದ್ಯಕೀಯ ಶಿಕ್ಷಣ ಕಾಲೇಜು ಮತ್ತು ವೈದ್ಯಕೀಯ ಸೀಟು ಹಂಚಿಕೆ ವಿಷಯವಾಗಿ ನೀಡಿರುವ ಹೊಸ ಮಾರ್ಗಸೂಚಿಯು ವಿಚಿತ್ರವಾಗಿದೆ. ಇದು, ವೈದ್ಯಕೀಯ ಪರಿಣತಿ ಹೊಂದಿರುವ ದಕ್ಷಿಣದ ರಾಜ್ಯಗಳಲ್ಲಿ ಅದರಲ್ಲೂ ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣ ಆಕಾಂಕ್ಷಿಗಳಿಗೆ ಆತಂಕವನ್ನು ಉಂಟುಮಾಡುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ದಕ್ಷಿಣದ ರಾಜ್ಯಗಳಿಗಿಂತ ಉತ್ತರದ ರಾಜ್ಯಗಳಲ್ಲಿ ಜನಸಂಖ್ಯೆ ಹೆಚ್ಚು. ಆ ರಾಜ್ಯಗಳಲ್ಲಿ ವೈದ್ಯಕೀಯ ಶಿಕ್ಷಣದ ಪ್ರವೇಶಕ್ಕಾಗಿ ಇರುವ ಪೂರ್ವಭಾವಿ ಪರೀಕ್ಷೆಗಳಲ್ಲಿ ಹಿಂದಿ ಭಾಷೆಯಲ್ಲಿ ಬರೆಯುವ ಅವಕಾಶ ಹೆಚ್ಚು ಬಳಕೆ ಆಗುತ್ತಿದೆ. ಹಾಗಾಗಿ, ಅಲ್ಲಿ ಹೆಚ್ಚು ಹೆಚ್ಚು ವೈದ್ಯಕೀಯ ಪದವೀಧರರು ಸೃಷ್ಟಿಯಾಗಿ, ಉದ್ಯೋಗ, ವೈದ್ಯಕೀಯ ವೃತ್ತಿ ಸಲುವಾಗಿ ಅವರು ದಕ್ಷಿಣದ ರಾಜ್ಯಗಳಿಗೆ ದಾಂಗುಡಿಯಿಟ್ಟು, ಈ ರಾಜ್ಯಗಳನ್ನು ಸರ್ವವಿಧದಲ್ಲೂ ಹಿಂದಿಮಯ ಮಾಡಬೇಕೆನ್ನುವ ಹುನ್ನಾರದ ಒಂದು ಭಾಗ ಈ ಮಾರ್ಗಸೂಚಿ ಇರಬಹುದೆಂದು ತೋರುತ್ತದೆ. ಆದ್ದರಿಂದ ದಕ್ಷಿಣದ ರಾಜ್ಯಗಳು ಈ ಕೂಡಲೇ ಇದನ್ನು ಪ್ರತಿಭಟಿಸಬೇಕಿದೆ. ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರು ಈ ಮಾರ್ಗಸೂಚಿಯನ್ನು ವಿರೋಧಿಸಿ ಕೇಂದ್ರಕ್ಕೆ ಪತ್ರ ಬರೆಯುವುದಾಗಿ ಹೇಳಿದ್ದಾರಾದರೂ ಇದನ್ನು ಇಷ್ಟಕ್ಕೇ ನಿಲ್ಲಿಸದೆ ಮುಂದಿನ ಹಂತಕ್ಕೆ ಜವಾಬ್ದಾರಿಯುತವಾಗಿ ಕೊಂಡೊಯ್ಯಬೇಕು.

ರಮೇಶ್, ಬೆಂಗಳೂರು

ಜಾತ್ಯತೀತ ಮೌಲ್ಯದ ಪತನವಲ್ಲವೇ?

‘ಸಂಪೂರ್ಣ ಜಾತ್ಯತೀತ ಎನ್ನುವ ಯಾವ ಪಕ್ಷವೂ ದೇಶದಲ್ಲಿ ಇಲ್ಲ. ಎಲ್ಲವೂ ಒಂದಲ್ಲ ಒಂದು ಸಮಯದಲ್ಲಿ ಬಿಜೆಪಿ ಸಂಪರ್ಕಕ್ಕೆ ಬಂದಿವೆ’ ಎಂದಿದ್ದಾರೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ (ಕಿಡಿನುಡಿ, ಸೆ. 28). ನಿಜ, ಆದರೆ ಜಾತ್ಯತೀತ ಎಂಬ ಬಹುದೊಡ್ಡ ಮೌಲ್ಯ ನಾವೆಲ್ಲರೂ ತಲುಪಬೇಕಾದ ಗುರಿಯಾಗಿದೆ. ‘ಸರ್ವ ಧರ್ಮ ಸಮಭಾವ’ ಎಂಬ ನಮ್ಮ ಘನ ಸಂವಿಧಾನದ ಆಶಯವೂ ಅದೇ ಆಗಿದೆ. ಎಲ್ಲಕ್ಕೂ ಮಿಗಿಲಾಗಿ ಜೆಡಿಎಸ್ ಯಾವಾಗ ತನ್ನ ಹೆಸರಿನೊಂದಿಗೆ ಈ ‘ಜಾತ್ಯತೀತ’ ಎಂಬ ಪದವನ್ನು ಇಟ್ಟುಕೊಂಡಿತು ಎಂಬುದು ಮುಖ್ಯ. ಈ ಹಿಂದೆ ಜನತಾದಳದ ಕೆಲವು ನಾಯಕರು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಲು ಮುಂದಾದಾಗ ಅಲ್ಲವೇ ಅದನ್ನು ಖಂಡಿಸಿದ ದೇವೇಗೌಡರ ಗುಂಪು ‘ಜಾತ್ಯತೀತ’ ಎಂಬ ಪದವನ್ನು ತನ್ನ ಹೆಸರಿನೊಂದಿಗೆ ಇಟ್ಟುಕೊಂಡದ್ದು?

ಈ ಹಿಂದೆ ಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿಯೊಂದಿಗೆ ಸೇರಿ ಸರ್ಕಾರ ರಚಿಸಿದಾಗಲೂ ಅದನ್ನು ಖಂಡಿಸಿದ ದೇವೇಗೌಡರು ಆಕ್ರೋಶದಿಂದ ‘ಜಾತ್ಯತೀತ’ ಮೌಲ್ಯವನ್ನು ಎತ್ತಿಹಿಡಿದಿದ್ದರು. ಆದರೆ ಈಗ ಅದೇ ದೇವೇಗೌಡರು ಜೆಡಿಎಸ್ ಅಸ್ತಿತ್ವಕ್ಕಾಗಿ ಅದೇ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿರುವುದು ಜಾತ್ಯತೀತ ಮೌಲ್ಯದ ಪತನವಲ್ಲವೇ? ಅಸ್ತಿತ್ವಕ್ಕಾಗಿ, ಅಧಿಕಾರದ ಆಸೆಗಾಗಿ ಜಾತ್ಯತೀತ ಮೌಲ್ಯವನ್ನು ಬಲಿ ಕೊಡುವುದು ಉಚಿತವಲ್ಲ. ಅದು ಜೆಡಿಎಸ್ ಕಾರ್ಯಕರ್ತರ ಮೇಲೂ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂಬುದನ್ನು ದೇವೇಗೌಡರು ಗ್ರಹಿಸಬೇಕಿತ್ತು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಮತಪತ್ರ ದೋಚಿದವರಿಗೆ ಕಠಿಣ ಶಿಕ್ಷೆಯಾಗಲಿ

ಮಾಗಡಿ ತಾಲ್ಲೂಕಿನ ಹುಳ್ಳೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ಮತದಾನ ನಡೆಸಿ ತೆರಳುತ್ತಿದ್ದ ಚುನಾವಣಾಧಿಕಾರಿ ಮತ್ತು ಸಿಬ್ಬಂದಿಯ ಕಾರನ್ನು ಅಡ್ಡಗಟ್ಟಿದ ಗುಂಪೊಂದು, ಮಾರಕಾಸ್ತ್ರ ತೋರಿಸಿ ಬೆದರಿಸಿ ಮತಪತ್ರಗಳನ್ನು ದೋಚಿರುವುದು ವರದಿಯಾಗಿದೆ. ಇದು, ಆತಂಕಕಾರಿ ಬೆಳವಣಿಗೆ. ಸರ್ಕಾರಿ ಅಧಿಕಾರಿಗಳಿಗೇ ಇಂಥ ಸ್ಥಿತಿ ಎದುರಾದರೆ ಇನ್ನು ಸಾಮಾನ್ಯರ ಗತಿ ಏನು?

ಇಂಥ ಪ್ರಸಂಗಗಳನ್ನು ನೋಡಿದ ಮತ್ತು ಸ್ವಯಂ ಅನುಭವಿಸಿದ ಚುನಾವಣಾ ಅಧಿಕಾರಿಗಳು ಅಥವಾ ಸಿಬ್ಬಂದಿಯು ಚುನಾವಣಾ ಕಾರ್ಯಕ್ಕೆ ಹೋಗಲು ಹಿಂದೇಟು ಹಾಕಲಾರರೇ? ಈ ಕೃತ್ಯದ ಹಿಂದೆ ಇರುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಚುನಾವಣೆಗಳು ಮುಕ್ತವಾಗಿ, ನಿರ್ಭಯವಾಗಿ ನಡೆದರೆ ಮಾತ್ರ ಪ್ರಜಾಪ್ರಭುತ್ವಕ್ಕೆ ಮೌಲ್ಯ ಬರುವುದು.

ಮಲ್ಲತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಸೂರಿನ ಹಿಂದೆ...

‘ನನ್ನ ಹೆಸರಲ್ಲಿ ಮನೆ ಇಲ್ಲ’– ನರೇಂದ್ರ ಮೋದಿ (ಪ್ರ.ವಾ., ಸೆ. 28). ಅಲ್ಲಿಗೆ ದೇಶದಲ್ಲಿ ಸೂರಿಲ್ಲದ ಲಕ್ಷಾಂತರ ಮಂದಿಯ ಪಟ್ಟಿಯಲ್ಲಿ ಮೋದಿಯವರೂ ಇದ್ದಾರೆ ಅನ್ನಿ! ಒಂಬತ್ತು ವರ್ಷಗಳ ತರುವಾಯ, ಚುನಾವಣೆ ಹೊಸ್ತಿಲಲ್ಲಿ ಈ ಮಾತು. ಸದ್ಯ ಇವರ ಆಸರೆಗೆ ಸರ್ಕಾರಿ ಬಂಗಲೆ ಇದೆ ತಾನೇ? ಅದೇ ಸಮಾಧಾನ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ


ಸಮಸ್ಯೆಗೆ ಬಂದ್ ಪರಿಹಾರವೇ?

ಕಾವೇರಿ ನೀರಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ನಡೆಯುವ ಹೋರಾಟಕ್ಕೆ ಸರ್ವರ ಬೆಂಬಲವೂ ಇದೆ. ಆದರೆ ಆ ಸಂಬಂಧ ನಡೆಯುವ ಬಂದ್‌ಗಳಿಗೆ ಎಲ್ಲರೂ ಬೆಂಬಲ ಕೊಡುವುದಿಲ್ಲ. ಬಂದ್ ಆಗುತ್ತದೆ ಎಂದು ತಿಳಿಯುತ್ತಲೇ ಅದನ್ನು ರಜಾ ದಿನವನ್ನಾಗಿ ಪರಿವರ್ತಿಸಿಕೊಂಡು, ಅದಕ್ಕೆ ತಕ್ಕಂತೆ ಯೋಜನೆಗಳನ್ನು ಹಾಕಿಕೊಳ್ಳುವವರೇ ಹೆಚ್ಚು. ಹೋಟೆಲ್‌ಗಳು ಬಾಗಿಲು ಹಾಕಿದರೆ, ಅದನ್ನೇ ನಂಬಿದವರಿಗೆ ತೊಂದರೆಯಾಗುತ್ತದೆ. ಆಸ್ಪತ್ರೆಗೆ ತಲುಪಲು ಆಗದಿದ್ದರೆ, ತೀವ್ರ ಅನಾರೋಗ್ಯ ಸಮಸ್ಯೆ ಇದ್ದವರಿಗೆ ಸಕಾಲದಲ್ಲಿ ಚಿಕಿತ್ಸೆ ಸಿಗದೇ ಹೋಗುತ್ತದೆ. ನೇರ ನಷ್ಟ ಅನುಭವಿಸುವವರು ಎಲ್ಲಾ ಕ್ಷೇತ್ರದ ದಿನಗೂಲಿ ನೌಕರರು. ಭಾಗಶಃ ಬಂದ್ ಆದರೂ ನಷ್ಟ ನಷ್ಟವೆ. ಹೀಗಾಗಿ, ಯಾವುದೇ ಸಮಸ್ಯೆಗೆ ಬಂದ್ ಶಾಶ್ವತ ಪರಿಹಾರ ನೀಡುವುದಿಲ್ಲ. ಪತ್ರ ಚಳವಳಿ ನಡೆಸುವ, ಕಪ್ಪುಬಟ್ಟೆ ಧರಿಸುವ ಮೂಲಕವೂ ವಿರೋಧ ವ್ಯಕ್ತಪಡಿಸಬಹುದಲ್ಲವೇ?

ಸುಮಾವೀಣಾ, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕಾವೇರಿ ಕೊಳ್ಳದ ಜಲಾಶಯಗಳಲ್ಲಿನ ಹೂಳೆಷ್ಟು...


ತಿಪ್ಪಗೊಂಡನಹಳ್ಳಿ ಜಲಾಶಯ

ರಾಜ್ಯದಲ್ಲಿರುವ ಕಾವೇರಿ ಕೊಳ್ಳದ ವ್ಯಾಪ್ತಿಯಲ್ಲಿ ಮೂರು ಬೃಹತ್ ಜಲಾಶಯಗಳು ಮತ್ತು 19 ಕಿರು ಜಲಾಶಯಗಳು ಇವೆ. ಈ ಜಲಾಶಯಗಳಿಗೆ ಹೊಂದಿಕೊಂಡಂತೆ ಹಲವಾರು ಕೆರೆಗಳು ಮತ್ತು ಅವುಗಳಿಗೆ ಸಂಪರ್ಕ ಕಲ್ಪಿಸುವ ಕಾಲುವೆ ವ್ಯವಸ್ಥೆಯೂ ಇದೆ. ಜತೆಗೆ ಈ ವ್ಯಾಪ್ತಿಯಲ್ಲಿ ಏಳು ಏತ ನೀರಾವರಿ ಯೋಜನೆಗಳೂ ಜಾರಿಯಲ್ಲಿವೆ. ಆದರೆ, ಈ ಎಲ್ಲವೂ ದಾಖಲೆಯಲ್ಲಷ್ಟೇ ಇವೆ. ಇವುಗಳಲ್ಲಿ ಕೆಲವು ಜಲಾಶಯಗಳು, ಕಾಲುವೆಗಳು ಮತ್ತು ತೊರೆಗಳು ಹೂಳಿನಿಂದ ಮುಚ್ಚಿಹೋಗಿವೆ. ಕೆಲವೆಡೆ ತೊರೆಗಳೇ ಬತ್ತಿಹೋಗಿರುವ ಕಾರಣ ಜಲಾಶಯಗಳಿಗೆ ನೀರು ಬರುತ್ತಿಲ್ಲ. ಕೆಲವೆಡೆ ತೊರೆ–ನದಿ ಪಾತ್ರಗಳು ಒತ್ತುವರಿಯಾಗಿರುವ ಕಾರಣ ಜಲಾಶಯಗಳಿಗೆ ಹರಿದುಬರಲು ನೀರಿಗೆ ಜಾಗವೇ ಇಲ್ಲದಂತಾಗಿದೆ

ಪ್ರಜಾವಾಣಿ ವಾರ್ತೆ

ಕಾವೇರಿ ನದಿಯ ಪ್ರಮುಖ ಉಪನದಿಗಳಲ್ಲಿ ಅರ್ಕಾವತಿಯೂ ಒಂದು. ನಂದಿಬೆಟ್ಟದಲ್ಲಿ ಹುಟ್ಟಿ, ಸಂಗಮದ ಬಳಿ ಕಾವೇರಿ ಸೇರುವ ಈ ನದಿಗೆ, ಅದರ ಹರಿವಿನ ಉದ್ದಕ್ಕೂ ಹಲವು ಜಲಾಶಯಗಳನ್ನು ನಿರ್ಮಿಸಲಾಗಿದೆ. ತಿಪ್ಪಗೊಂಡನಹಳ್ಳಿ, ಮಂಚನಬೆಲೆ, ಅರ್ಕಾವತಿ, ಬೈರಮಂಗಲ ವೃಷಭಾವತಿ ಜಲಾಶಯ ಸೇರಿ ಈ ನದಿಗೆ ಹಲವು ಕಿರು ಜಲಾಶಯಗಳನ್ನು ನಿರ್ಮಿಸಲಾಗಿದೆ. ತಿಪ್ಪಗೊಂಡನಹಳ್ಳಿ ಹೊರತುಪಡಿಸಿ ಉಳಿದೆಲ್ಲಾ ಜಲಾಶಯಗಳು ಭರ್ತಿಯಾದರೆ ಅವುಗಳಿಂದ 14,000 ಹೆಕ್ಟೇರ್‌ಗಳಷ್ಟು ಜಮೀನಿಗೆ ನೀರಾವರಿ ಒದಗಿಸಲು ಸಾಧ್ಯವಾಗುತ್ತದೆ.


ಇವೆಲ್ಲವೂ ಹಳೆಯ ಜಲಾಶಯಗಳಾದ ಕಾರಣ ಅವುಗಳಲ್ಲಿ ಹೂಳು ತುಂಬಿಕೊಂಡಿದೆ. ಆದರೆ, ಅವುಗಳಲ್ಲಿ ಇರುವ ಹೂಳಿನ ಪ್ರಮಾಣ ಎಷ್ಟು ಎಂಬುದರ ಮಾಹಿತಿ ಮಾತ್ರ ಇಲ್ಲ. ಏಕೆಂದರೆ, ಇವುಗಳಲ್ಲಿ ಎಷ್ಟು ಹೂಳುತುಂಬಿಕೊಂಡಿರಬಹುದು ಎಂಬುದನ್ನು ಲೆಕ್ಕಹಾಕಲು ಕಾವೇರಿ ನೀರಾವರಿ ನಿಗಮ ಮುಂದಾಗಿಲ್ಲ. ಸರ್ಕಾರವೂ ಈ ಬಗ್ಗೆ ಆಸಕ್ತಿ ತೋರಿಲ್ಲ. ಈ ವ್ಯಾಪ್ತಿಯ ವೃಷಭಾವತಿ ಜಲಾಶಯವಂತೂ ಸಂಪೂರ್ಣವಾಗಿ ಕೊಳಚೆ ಗುಂಡಿಯಂತಾಗಿದೆ. ಸ್ಥಳೀಯರಾದಿಯಾಗಿ ಯಾರೂ ಅದನ್ನು ಒಂದು ಕಿರು ಜಲಾಶಯ ಎಂದು ಪರಿಗಣಿಸುವುದೇ ಇಲ್ಲ. ಈ ಜಲಾಶಯವು ಸುಸ್ಥಿತಿಯಲ್ಲಿದ್ದು, ಭರ್ತಿಯಾಗಿದ್ದರೆ 1,600 ಹೆಕ್ಟೇರ್‌ಗಳಷ್ಟು ಜಮೀನಿಗೆ ನೀರು ಒದಗಿಸುವ ಸಾಮರ್ಥ್ಯ ಹೊಂದಿತ್ತು.

ಇದು ಅರ್ಕಾವತಿ ವ್ಯಾಪ್ತಿಯ ಜಲಾಶಯಗಳ ಸ್ಥಿತಿ ಮಾತ್ರವಲ್ಲ. ಕಾವೇರಿ ಕೊಳ್ಳದ ಎಲ್ಲಾ ಜಲಾಶಯಗಳು, ಕಿರು ಜಲಾಶಯಗಳ ಸ್ಥಿತಿ ಇದೇ ರೀತಿ ಇದೆ. ಈ ಎಲ್ಲಾ ಜಲಾಶಯಗಳಲ್ಲಿ ಎಷ್ಟು ಹೂಳು ತುಂಬಿದೆ ಎಂಬುದನ್ನು ಲೆಕ್ಕಹಾಕಿಯೇ ಇಲ್ಲ. ಕೆಲವು ಜಲಾಶಯಗಳಲ್ಲಿ ಇಂತಿಷ್ಟು ಟಿಎಂಸಿ ಅಡಿಗಳಷ್ಟು ಹೂಳು ತುಂಬಿದೆ ಎಂದು ನಿಗಮದ ಅಧಿಕಾರಿಗಳು ಮಾಹಿತಿ ಕೊಟ್ಟರೆ, ಇನ್ನೂ ಕೆಲವು ಜಲಾಶಯಗಳಲ್ಲಿ ಹೂಳು ತುಂಬಿರುವ ಪ್ರಮಾಣವನ್ನು ಶೇಕಡಾವಾರು ಪ್ರಮಾಣದಲ್ಲಿ ನೀಡಿದ್ದಾರೆ.

ಒಟ್ಟಾರೆ ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ತುಂಬಿರುವ ಹೂಳೆಷ್ಟು ಎಂಬ ಮಾಹಿತಿ ಲಭ್ಯವಿಲ್ಲ. ಇದರಿಂದಾಗಿ ಆ ಜಲಾಶಯಗಳ ಸಂಗ್ರಹ ಸಾಮರ್ಥ್ಯ ಕಡಿಮೆಯಾಗಿರುವ ಬಗ್ಗೆಯೂ ನಿಖರ ಮಾಹಿತಿ ಇಲ್ಲ.


ಹೂಳು ಇರುವ ಕಾರಣ, ಅಧಿಕ ಮಳೆಯ ವರ್ಷದಲ್ಲಿಯೂ ಹೆಚ್ಚು ನೀರು ಸಂಗ್ರಹವಾಗುವುದಿಲ್ಲ. ಜಲಾಶಯಗಳು ಭರ್ತಿಯಾದಂತೆ ತೋರಿದರೂ, ಅವುಗಳ ಪೂರ್ಣ ಸಾಮರ್ಥ್ಯದಷ್ಟು ನೀರು ಇರುವುದಿಲ್ಲ. ನೀರು ಭರ್ತಿಯಾಗಿದೆ ಎಂದುಕೊಂಡೇ ಬಳಸುವುದರಿಂದ ಮಳೆ ಕೊರತೆಯ ವರ್ಷಗಳಲ್ಲಿ ಜಲಾಶಯಗಳು ಬರಿದಾಗುತ್ತವೆ.

ಈ ಎಲ್ಲಾ ಜಲಾಶಯಗಳಿಂದ ಸಮೀಪದ ಕೆರೆಗಳಿಗೆ ನೀರು ತುಂಬಿಸುವ ಯಾವ ಕಾಲುವೆಯೂ ಸುಸ್ಥಿತಿಯಲ್ಲಿ ಇಲ್ಲ. ಇದರಿಂದಾಗಿ, ಅಧಿಕ ಮಳೆಯ ವರ್ಷಗಳಲ್ಲಿ ಈ ಎಲ್ಲಾ ಕೆರೆಗಳಿಗೆ ನೀರು ತುಂಬಿಸಿಕೊಳ್ಳಲೂ ಸಾಧ್ಯವಾಗುವುದಿಲ್ಲ. ಮಳೆ ಕೊರತೆಯ ವರ್ಷದಲ್ಲಿ, ನೀರಿನ ಕೊರತೆಯಾಗಲು ಇದೂ ಒಂದು ಕಾರಣವಾಗಿದೆ.



ಆಧಾರ: ಕಾವೇರಿ ನೀರಾವರಿ ನಿಗಮ, ಕಾವೇರಿ ಐತೀರ್ಪು, ಕೇಂದ್ರ ಜಲಸಂಪನ್ಮೂಲ ಸಚಿವಾಲಯ, 'ಪ್ರಜಾವಾಣಿ' ಬ್ಯೂರೊ ಮಾಹಿತಿ. ಪ್ರಜಾವಾಣಿ ಗ್ರಾಫಿಕ್ಸ್: ಶಶಿಧರ ಹಳೇಮನಿ

ಬಾನದಾರಿಯಲ್ಲಿ ಕಲ್ಲು, ಮುಳ್ಳು!


ರುಕ್ಮಿಣಿ

ನಾವು ನೋಡಿದ ಸಿನಿಮಾ

ಚಿತ್ರ: ಬಾನದಾರಿಯಲ್ಲಿ
- ನಿರ್ದೇಶನ: ಪ್ರೀತಮ್ ಗುಬ್ಬಿ
- ನಿರ್ಮಾಣ: ಶ್ರೀ ವಾರಿ ಟಾಕೀಸ್
- ತಾರಾಗಣ: ಗಣೇಶ್, ರುಕ್ಮಿಣಿ ವಸಂತ್, ರಂಗಾಯಣ ರಘು, ರೀಷ್ಮಾ ನಾಣಯ್ಯ

ಪುನೀತ್ ರಾಜ್‌ಕುಮಾರ್ ಹಾಡಿರುವ 'ಬಾನದಾರಿಯಲ್ಲಿ ಸೂರ್ಯ ಜಾರಿಹೋದ...' ಹಾಡನ್ನು ಬಹಳ ಅರ್ಥಪೂರ್ಣವಾಗಿ ಬಳಕೆ ಮಾಡಿಕೊಂಡು, ಶೀರ್ಷಿಕೆಗೆ ತಕ್ಕಂತೆ ಸೂಕ್ತ ಸನ್ನಿವೇಶದಲ್ಲಿ ಆ ಹಾಡನ್ನು ತೆರೆಯ ಮೇಲೆ ತಂದಿರುವ ಚಿತ್ರ 'ಬಾನದಾರಿಯಲ್ಲಿ'. ಸಿದ್ದು ಮತ್ತು ಲೀಲಾ ನಡುವಿನ ಉತ್ಕಟ ಪ್ರೇಮಕಥೆಯ ಚಿತ್ರವಿದು. ಸಿದ್ದುವಾಗಿ ನಾಯಕ ಗಣೇಶ್ ಮತ್ತೆ 'ಮುಂಗಾರುಮಳೆ'ಯನ್ನು ನೆನಪಿಸುತ್ತಾರೆ. 'ಲೀಲಾ' ಆಗಿ ರುಕ್ಮಿಣಿ ವಸಂತ್ ಕಣ್ಣಿನಲ್ಲೇ ಮಾತನಾಡುತ್ತಾರೆ. ಸುಂದರ ತಾಣಗಳು, ಅದ್ಭುತವಾದ ಛಾಯಾಗ್ರಹಣ, ಒಳ್ಳೆ ಕಲಾವಿದರು ಇದ್ದೂ 'ಬಾನದಾರಿ'ಯ ತುಂಬೆಲ್ಲ ಕಲ್ಲು, ಮುಳ್ಳುಗಳೇ ಸಿಗುತ್ತವೆ!

ಪ್ರೇಮಕಥೆಗಳಲ್ಲಿ ಭಾವನೆಯೇ ಮುಖ್ಯ. ಬಹುತೇಕ ಪ್ರೇಮಿಗಳ ಗಮ್ಯ ಮದುವೆ, ಸಂಸಾರ! ಆದರೆ ಅದನ್ನು ತಲುಪುವ ರೀತಿ ಜೋಡಿಯಿಂದ ಜೋಡಿಗೆ ಭಿನ್ನ. ಉತ್ಕಟವಾದ ಪ್ರೀತಿಯೊಂದು ಸಾಗುವ ದಾರಿಯನ್ನು ಕಟ್ಟಿಕೊಡುವಲ್ಲಿ ನಿರ್ದೇಶಕ ಪ್ರೀತಂ ಗುಬ್ಬಿ ಪೂರ್ತಿಯಾಗಿ ಎಡವಿದ್ದಾರೆ. ಯಾವ ಮಟ್ಟಿಗೆ ಎಂದರೆ, ನಾಯಕ–ನಾಯಕಿಯ ಪ್ರೀತಿಯ ಈ ಸಿನಿಮಾ ನೋಡುತ್ತ ಕುಳಿತವರಿಗೆ ಖುಷಿ ಕೊಡುವ ಬದಲು ರೋದನ ಮೂಡಿಸುತ್ತದೆ.

ಕಥೆಯ ನಾಯಕ ಸಿದ್ದು ವೃತ್ತಿಯಿಂದ ಕ್ರಿಕೆಟಿಗ. ಲೀಲಾ ಈಜುಗಾರ್ತಿ. ಮಕ್ಕಳಿಗೆ ಈಜು ತರಬೇತುಗಾರ್ತಿ. ಮೊದಲ ನೋಟದಲ್ಲಿಯೇ ಸಿದ್ದುವಿಗೆ ಲೀಲಾಳ ಮೇಲೆ ಒಲವು. ಈಜು, ಈಜುಕೊಳವನ್ನು ಪ್ರೇಮದ ಬೆಸುಗೆಗೆ ಮಾರ್ಗವನ್ನಾಗಿ ಚೆನ್ನಾಗಿ ಬಳಸಿಕೊಂಡಿದ್ದಾರೆ. ಕ್ರಿಕೆಟಿಗನಾಗಿ ನಾಯಕನನ್ನು ಬಹಳ ಚೆಂದವಾಗಿ ತೋರಿಸುವ, ಚಿತ್ರಕಥೆಯಲ್ಲಿ ಕ್ರಿಕೆಟ್ ಅನ್ನು ಪ್ರೇಮದ ಸೇತುವೆಯಾಗಿಸಿಕೊಳ್ಳುವ ಅವಕಾಶವನ್ನು ನಿರ್ದೇಶಕರು ಕೈಚೆಲ್ಲಿದ್ದಾರೆ. ಹೀಗಾಗಿ ನಾಯಕ ಕ್ರಿಕೆಟಿಗ ಎಂಬುದು ಸಿನಿಮಾ ಮುಗಿಯುವ ಹೊತ್ತಿಗೆ ಮರೆತುಹೋಗಿರುತ್ತದೆ.

ರುಕ್ಮಿಣಿ–ಗಣೇಶ್ ಫ್ರೇಮಿನಲ್ಲಿರುವ ದೃಶ್ಯಗಳು ಒಲವು ಮೂಡಿಸುತ್ತವೆ. ಆದರೆ ಕಥೆಯ ಅರ್ಧಭಾಗ ಸಿದ್ದು ಮತ್ತು ಲೀಲಾಳ ಅಪ್ಪ ವಾಸುವಿನ ನಡುವೆ ನಡೆಯುತ್ತದೆ. ಹಾಸ್ಯ ಪಾತ್ರಗಳಿಗೆ ಸೀಮಿತವಾಗಿದ್ದ ರಂಗಾಯಣ ರಘು, ಲೀಲಾ ಅಪ್ಪನಾಗಿ ಗಂಭೀರ ಪಾತ್ರವನ್ನು ಮಾಡಿದ್ದಾರೆ. ಚಿತ್ರದ ಮೊದಲಾರ್ಧ ಲೀಲಾ–ಸಿದ್ದು ಪ್ರೀತಿ, ಅಲ್ಲಲ್ಲಿ ನಗಿಸುವ ಮಾತುಗಳೊಂದಿಗೆ ನಿಧಾನಕ್ಕೆ ಎಳೆದುಕೊಂಡು ಹೋಗುತ್ತದೆ.

ಚಿತ್ರದ ದ್ವಿತಿಯಾರ್ಧ ಕೀನ್ಯಾದಲ್ಲಿ ನಡೆಯುತ್ತದೆ. ಇಲ್ಲಿಗೆ ಹೋಗಲು ಪ್ರೇರಣೆ ಪ್ರಾಣಿಗಳನ್ನು ಕೀನ್ಯಾದಲ್ಲಿ ಬೋನಿನೊಳಗೆ ಇಡುವುದಿಲ್ಲ, ಮುಕ್ತವಾಗಿ ಬಿಡುತ್ತಾರೆ ಎಂಬ ಲೀಲಾಳ ಕನಸು. ಬಂಡಿಪುರ, ನಾಗರಹೊಳೆಯ ಸಂರಕ್ಷಿತಾರಣ್ಯಗಳಲ್ಲಿಯೂ ಪ್ರಾಣಿಗಳು ಬೋನಿನಿಂದ ಹೊರಗೆ ಬದುಕುತ್ತವೆಯಲ್ಲ ಎಂಬ ಪ್ರಶ್ನೆ ಚಿತ್ರ ನೋಡುತ್ತಿದ್ದ ನಮ್ಮ ಮನಸಿನಲ್ಲಿ ಮೂಡುತ್ತದೆ. ಚಿತ್ರದಲ್ಲಿ ಲಾಜಿಕ್‌ರಹಿತವಾದ ಇಂತಹ ಅದೆಷ್ಟೋ ಸನ್ನಿವೇಶಗಳು ಬಂದು ಹೋಗುತ್ತವೆ! ಎಷ್ಟೋ ದೃಶ್ಯಗಳಲ್ಲಿ ಹಿನ್ನೆಲೆ ಸಂಗೀತ ವ್ಯತಿರಿಕ್ತವಾಗಿರುವಂತೆ ಭಾಸವಾಗುತ್ತದೆ. 'ಬಾನದಾರಿಯಲ್ಲಿ' ಹಾಡನ್ನು ಬಿಟ್ಟು ಬೇರೆ ಯಾವುದೂ ನೆನಪಿನಲ್ಲಿ ಉಳಿಯುವುದಿಲ್ಲ. ಕೀನ್ಯಾವನ್ನು ಸುಂದರವಾಗಿ ಕಟ್ಟಿಕೊಟ್ಟಿದ್ದರೂ ಸಾಗುತ್ತಿರುವ ಕಥೆಗೆ, ನಡೆಯುತ್ತಿರುವ ದೃಶ್ಯಕ್ಕೆ ಅವೆಲ್ಲ ಅನಗತ್ಯ ಎನ್ನಿಸುತ್ತದೆ.

ಮಾವ–ಅಳಿಯನ ರೋದನ ತೋರಿಸಲು, ಲೀಲಾಳ ಅಸ್ಥಿ ವಿಸರ್ಜನೆಗೆ ನಿರ್ದೇಶಕರು ಕೀನ್ಯಾವನ್ನು ಏಕೆ ಆಯ್ಕೆ ಮಾಡಿಕೊಂಡರು, ಗಂಗಾ ನದಿ ತಟದಲ್ಲಿ ಅಸ್ಥಿ ವಿಸರ್ಜನೆ ಮಾಡುವುದಲ್ಲವೇ ಎಂಬ ಪ್ರಶ್ನೆ ಮಾತ್ರ ಚಿತ್ರಮಂದಿರದಿಂದ ಹೊರಬಂದ ನಂತರವೂ ಮನಸ್ಸಿನಲ್ಲಿಯೇ ಉಳಿಯುತ್ತದೆ!

ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಎಂಥ ಮೂರ್ಖ. ಬ್ಯಾಡ್ಜ್ ನಂ. 420 ಆತನ ವ್ಯಕ್ತಿತ್ವಕ್ಕೆ ಸರಿಯಾಗಿ ಹೊಂದುತ್ತದೆ. ಆತ ನಂಬಿಕೆಗೆ ಅನರ್ಹ ಕೂಡ. ತಲೆಯ ಮೇಲೆ ಗಾಲಿ ಇರುವ ಬ್ಯಾಗ್ ಅನ್ನು ಹೊತ್ತುಕೊಂಡು ಓಡಾಡಿದ್ದ ಎನ್ನುವುದನ್ನು ಮರೆಯುವುದು ಬೇಡ. ಇಂಥ ಮೂರ್ಖ, ದೇಶದ ಪ್ರಧಾನಿ ಆಗಬೇಕು ಎಂದು ಬಯಸುತ್ತಿದ್ದಾರೆ' ಎಂದು ಪ್ರವೀಣ್ ಪಟೇಲ್ ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ. ಇದರೊಂದಿಗೆ ರಾಹುಲ್ ಗಾಂಧಿ ಅವರು 420 ಬ್ಯಾಡ್ಜ್ ನಂ. ಹಾಕಿಕೊಂಡಿದ್ದಾರೆ ಎನ್ನಲಾದ ಫೋಟೊವನ್ನು ಹಂಚಿಕೊಂಡಿದ್ದಾರೆ. ಆದರೆ, ಇದು ತಿರುಚಲಾದ ಚಿತ್ರ.




ಸಂಸದ ರಾಹುಲ್ ಗಾಂಧಿ ಅವರು ದೆಹಲಿಯ ಆನಂದ ವಿಹಾರ ರೈಲು ನಿಲ್ದಾಣಕ್ಕೆ ಇದೇ 21ರಂದು ಭೇಟಿ ನೀಡಿ, ಅಲ್ಲಿ ಕೆಲಸ ಮಾಡುವ ಕೂಲಿಗಳೊಂದಿಗೆ ಮಾತುಕತೆ ನಡೆಸಿದ್ದರು. ಈ ಕುರಿತು ಚಿತ್ರ ಹಾಗೂ ವಿಡಿಯೊವನ್ನು ರಾಹುಲ್ ಗಾಂಧಿ ಅವರೇ ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಹಂಚಿಕೊಂಡಿದ್ದಾರೆ. ಈ ದೃಶ್ಯಗಳಲ್ಲಿ ಅವರು 756 ಸಂಖ್ಯೆಯ ಬ್ಯಾಡ್ಜ್ ಹಾಕಿಕೊಂಡಿರುವುದು ಕಾಣಿಸುತ್ತದೆ. ಅದನ್ನೇ ತಿರುಚಿ, 420 ಎಂದು ಕಾಣುವಂತೆ ಮಾಡಲಾಗಿದೆ. ಆದ್ದರಿಂದ, ಇದೊಂದು ತಿರುಚಲಾದ ಚಿತ್ರ ಎಂದು ಬೂಮ್‌ಲೈವ್ ಮತ್ತು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.



ನುಡಿ ಬೆಳಗು

ಏನೂ ಇಲ್ಲದೆಯೂ ಇರುವ ಸುಖ



ಪ್ರೊ.ಎಂ. ಕೃಷ್ಣೇಗೌಡ

ರಾಜ ಅಂದರೆ ಅಂತಿಂಥ ರಾಜನಲ್ಲ ಅವನು. ಮಹಾ ಪರಾಕ್ರಮಿ. ಪರಾಕ್ರಮಿ ಎಂದರೆ ಪರರಾಜ್ಯಗಳನ್ನು ಆಕ್ರಮಿಸಿ ಆ ರಾಜ್ಯದ ಧನ ಕನಕ ವಸ್ತು ವಾಹನಗಳನ್ನೆಲ್ಲಾ ದೋಚಿ ತಂದು ಭಾರಿ ಶ್ರೀಮಂತನಾಗುವುದು ತಾನೆ? ರಾಜ ಅಂದಮೇಲೆ ರಾಜ! ಎಷ್ಟು ತಂದು ತುಂಬಿಕೊಂಡರೆ ಅವನಿಗೆ ಸಾಕಾಗುತ್ತದೆ? ಸಾಕೆನಿಸಿರಲಿಲ್ಲ ಅವನಿಗೆ. ಯಾವಾಗಲೂ ಕೊರಗು, ಬೇಸರ ಅವನಿಗೆ.


ಒಮ್ಮೆ ಈ ರಾಜ ಬೇಟೆಗೆ ಅಂತ ಕಾಡಿಗೆ ಹೋಗಿದ್ದ. ಹೋಗಿ ದಾರಿ ತಪ್ಪಿಹೋದ. ದಾರಿ ತಪ್ಪಿದವನು ದಾರಿ ಹುಡುಕಿದಂತೆಲ್ಲಾ ಮತ್ತಷ್ಟು ದಾರಿ ತಪ್ಪುತ್ತಾನೆ ತಾನೆ? ಇವನಿಗೂ ಹಾಗೇ ಆಯಿತು.

ಹಾಗೇ ಹುಡುಕುತ್ತಾ ಹೋದವನಿಗೆ ಒಬ್ಬ ಸನ್ಯಾಸಿಯ ಆಶ್ರಮ ಕಂಡಿತು. ದೊರೆ ಹಸಿದು ಬಸವಳಿದು ಹೋಗಿದ್ದ. ಸನ್ಯಾಸಿಯು ರಾಜನಿಗೆ ರುಚಿರುಚಿಯಾದ ಹಣ್ಣುಹಂಪಲನ್ನು ನೀಡಿ ಸತ್ಕರಿಸಿದ. ರಾಜನಿಗೆ ತುಂಬಾ ಸಂತೋಷವಾಯಿತು. ಮತ್ತೆ ಅವನಿಗೆ ಸನ್ಯಾಸಿಯೇ ಊರಿನ ದಾರಿ ತೋರಿಸಿದ. ರಾಜ ಹೋಗುವಾಗ 'ಉಪಕಾರವಾಯಿತು ಮಹಾನುಭಾವ. ಒಮ್ಮೆ ದಯವಿಟ್ಟು ನನ್ನ ಅರಮನೆಗೆ ಬಂದು ನನ್ನ ಆತಿಥ್ಯ ಸ್ವೀಕರಿಸಿ' ಅಂದ. ಸನ್ಯಾಸಿ, ಖಂಡಿತವಾಗಿಯೂ ಬರುತ್ತೇನೆ ಎಂದು ಭರವಸೆ ಕೊಟ್ಟ.

ಅದೊಂದು ದಿನ ಸನ್ಯಾಸಿ ಆ ರಾಜನ ಅರಮನೆಗೆ ಹೋದ. ರಾಜ ಸಕಲ ಗೌರವಮರ್ಯಾದೆಗಳಿಂದ ಸನ್ಯಾಸಿಯನ್ನು ಸ್ವಾಗತಿಸಿದ. ಅರ್ಘ್ಯ ಪಾದ್ಯ ಸತ್ಕಾರವಾಯಿತು. ಷಡ್ರಸೋಪೇತ ಭೋಜನವಾಯಿತು. ಸನ್ಯಾಸಿ ಸಂತೋಷಪಟ್ಟು 'ರಾಜಾ, ನನಗೆ ನಿನ್ನ ಅರಮನೆ, ಐಶ್ವರ್ಯ ಗಳನ್ನು ನೋಡುವಾಸೆಯಾಗಿದೆ ತೋರಿಸುತ್ತೀಯಾ' ಅಂತ ಕೇಳಿದ. ದೊರೆ ಸಂತೋಷವಾಗಿ ಅವನ ಗಜಶಾಲೆ, ಅಶ್ವಶಾಲೆ, ಆಯುಧಶಾಲೆಗಳನ್ನು ತೋರಿಸಿದ. ಧನಕನಕಗಳ ಭಂಡಾರವನ್ನು ತೋರಿಸಿದ. ಚಿತ್ರಶಾಲೆ, ದರ್ಬಾರು, ರಾಜಾಂಗಣ, ಉದ್ಯಾನ ಎಲ್ಲವನ್ನೂ ತೋರಿಸಿದ. ಇಷ್ಟೆಲ್ಲಾ ಆದಮೇಲೆ ಸನ್ಯಾಸಿ 'ರಾಜಾ, ನಿನ್ನ ಅಂತಃಪುರ ತೋರಿಸುತ್ತೀಯಾ' ಅಂದ. ದೊರೆ ಅದನ್ನೂ ತೋರಿಸಿದ. 'ನಿನ್ನ ರಾಣಿ ಪರಿವಾರವನ್ನು ತೋರಿಸುತ್ತೀಯಾ' ಅಂದ. ದೊರೆ ಅದನ್ನೂ ತೋರಿಸಿದ. 'ದೊರೆ, ನಿನ್ನ ಶಯ್ಯಾಗೃಹವನ್ನು ನೋಡಬೇಕಲ್ಲ', ರಾಜನಿಗ್ಯಾಕೋ ವಿಚಿತ್ರ ಅನ್ನಿಸಿತು. ಅದನ್ನೂ ತೋರಿಸಿದ. ಸನ್ಯಾಸಿ ಅಲ್ಲಿದ್ದ ಹಂಸತೂಲಿಕಾ ತಲ್ಪವನ್ನು ನೋಡಿ, 'ರಾಜಾ, ನಾನು ಒಂದರೆಗಳಿಗೆ ಈ ತಲ್ಪದ ಮೇಲೆ ಮಲಗಿ ನೋಡಲಾ' ಅಂದ. ದೊರೆ ಅದಕ್ಕೂ 'ಆಯಿತು' ಅಂದ. ಸನ್ಯಾಸಿ ಅದರ ಮೇಲೆ ಒಂದರೆಗಳಿಗೆ ಮಲಗಿ ಎದ್ದಿದ್ದೂ ಆಯಿತು.

ರಾಜ, ಯಾಕೋ ಈ ಸನ್ಯಾಸಿಯದು ಅತಿ ಆಯಿತು ಅಂದುಕೊಂಡು 'ಅಯ್ಯಾ ಮಹಾನುಭಾವ. ನೀವು ಓರ್ವ ಸನ್ಯಾಸಿ. ನಿಮಗೆ ಇದನ್ನೆಲ್ಲಾ ನೋಡಿ ಏನಾಗಬೇಕಿದೆ? ಎಲೆ ಗುಡಿಸಲಿನಲ್ಲಿ ಮಲಗುವ ನಿಮಗೆ ಈ ಸುಪ್ಪತ್ತಿಗೆಯ ಮೇಲೆ ಮಲಗುವ ಚಪಲವೇಕೆ' ಅಂತ ಕೇಳಿದ. ಅದಕ್ಕೆ ಸನ್ಯಾಸಿ ಹೇಳಿದ: 'ನನಗೆ ಇದೇನೂ ಚಪಲವಲ್ಲ. ನಾನು ನೋಡಿದ್ದು ನಿನ್ನ ಅರಮನೆ, ವಸ್ತು ವಾಹನಗಳನ್ನಲ್ಲ. ನಾನು ನೋಡಿದ್ದು- ಏನೆಲ್ಲಾ ಇಲ್ಲದೆಯೂ ನಾನು ಸುಖವಾಗಿದ್ದೇನೆ ಮತ್ತು ಏನೆಲ್ಲಾ ಇದ್ದೂ ನೀನು ಒದ್ದಾಡುತ್ತಾ ಕೊರಗುತ್ತಿದ್ದೀಯೆ ಅಂತ ಅಷ್ಟೆ'.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಸೆಪ್ಟೆಂಬರ್ 29, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪೂರ್ಣಿಮಾ ಗಂ. 15-28 ನಕ್ಷತ್ರ: ಉತ್ತರಾಭಾದ್ರ ಗಂ. 23-18 ಯೋಗ: ವೃದ್ಧಿ ಗಂ. 20-03 ಕರಣ: ಬವ ಗಂ. 15-28, ಕನ್ಯಾ ಮಾಸದ 12 ನೇ ದಿನ, ಮಳೆನಕ್ಷತ್ರ: ಹಸ್ತ 1. ರಾಹುಕಾಲ: ಬೆಳಿಗ್ಗೆ 10-30 – 12-00, ಸೂರ್ಯೋದಯ : 06-23 ಸೂರ್ಯಾಸ್ತ : 06-18 ಮುಸ್ಲಿಂ ದಿನಾಂಕ : 13 ರಬಿಉಲ್ಲಾವಲ್, ದಿನ ವಿಶೇಷ : ಪಿತೃಪಕ್ಷ ತರ್ಪಣ ಪ್ರಾರಂಭ ಅಥವಾ ಮಹಾಲಯ ಪಕ್ಷ ಪ್ರಾರಂಭ (ದ.ಭಾರತ)
ಅದೃಷ್ಟ ಸಂಖ್ಯೆ: 11, 9

ಮೇಷ: ಜೀವನದಲ್ಲಿ ಅಧಿಕ ಶ್ರಮದಿಂದ ದೀರ್ಘಕಾಲಿಕ ಕಾರ್ಯಗಳು ಚಾಲನೆಗೊಂಡು ಸಂತಸ ವೃದ್ಧಿಯಾಗುವುದು. ಕಾನೂನಿಗೆ ವಿರುದ್ಧವಾದ ಕೆಲವು ಸಂಗತಿಗಳು ನಡೆಯಬಹುದು. ಕಾಲು ನೋವು ಉಪಶಮನವಾಗಲಿದೆ.

ವೃಷಭ: ಅಡಿಕೆ ಮತ್ತು ರಬ್ಬರ್ ಪದಾರ್ಥದ ವ್ಯಾಪಾರಿಗಳಿಗೆ ನೂತನ ವ್ಯಕ್ತಿಯ ಪರಿಚಯವು ಉತ್ತಮ ವ್ಯವಹಾರ ನಡೆಸಲು ಉಪಯೋಗವಾಗುವುದು. ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು ಸಂತಸ ತರಲಿದೆ.

ಮಿಥುನ: ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳಿಗೆ ದೂರದ ಊರಿಗೆ ವರ್ಗಾವಣೆಯಾಗುವ ಸಾಧ್ಯತೆ. ಯುವ ಕಲಾವಿದರಿಗೆ ಅವಕಾಶಗಳು ಲಭಿಸುವುದು. ದುರ್ಜನರ ಸಹವಾಸದಿಂದ ಹೊರಬರುವ ಪ್ರಯತ್ನ ಮಾಡಿ.

ಕರ್ಕಾಟಕ: ವಿದ್ಯಾರ್ಥಿಗಳು ಪಾಠದ ವಿಚಾರದಲ್ಲಿ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಮಾನವಾದ ಗಮನ ನೀಡಿದರೆ ಗುರುತಿಸುವ ವ್ಯಕ್ತಿ ಆಗಬಹುದು. ಶತ್ರುಗಳು ಕಾರ್ಯವೈಖರಿಯಿಂದ ಚಕಿತಗೊಂಡು ಸನಿಹಕ್ಕೂ ಬರಲಾರರು.

ಸಿಂಹ: ನಿಮ್ಮ ಹಾವಾಭಾವ, ನಿಮ್ಮ ಸ್ನೇಹಪರವಾದಂಥ ಸ್ವಭಾವವು ಇತರರ ಮೇಲೆ ಹೆಚ್ಚಿನ ಪ್ರಭಾವ ಬೀರಲಿದೆ. ಚಾಣಾಕ್ಷತನದ ನಿರ್ಧಾರಗಳು ನಿಮ್ಮನ್ನು ಊರಿನ ತೂಕದ ವ್ಯಕ್ತಿಯನ್ನಾಗಿ ಮಾಡಲಿದೆ.

ಕನ್ಯಾ: ಸದ್ಯದ ಪರಿಸ್ಥಿತಿಯಲ್ಲಿ ಸದಾ ವಿಜಯ ನಿಮ್ಮದೇ ಆದ್ದರಿಂದ ನೂತನ ಚರ ಅಥವಾ ಸ್ಥಿರ ಆಸ್ತಿ ಸಂಪಾದಿಸುವ ಬಗ್ಗೆ ಆದಷ್ಟು ಪ್ರಯತ್ನವಿರಲಿ. ಕಾರ್ಯಕ್ಷೇತ್ರದಲ್ಲಿ ನಿಮ್ಮ ನಿಸ್ವಾರ್ಥ ಶ್ರಮಕ್ಕೆ ಹೆಚ್ಚಿನ ಫಲ ದೊರೆಯುತ್ತದೆ.

ತುಲಾ: ನಿರುದ್ಯೋಗಿಗಳಿಗೆ ಸಂಸ್ಥೆಯ ಆಗು- ಹೋಗುಗಳನ್ನು ನೋಡುವ ಹುದ್ದೆ ಪ್ರಾಪ್ತಿಯಾದರೆ ತಿರಸ್ಕರಿಸುವುದು ಸರಿಯಲ್ಲ. ಹಣದ ವಿಚಾರದಲ್ಲಿ ಲಾಭ-ನಷ್ಟದ ಯೋಚನೆ ಇದ್ದರೆ ಉತ್ತಮ. ವಾಹನ ಸಂಚಾರದಲ್ಲಿ ಕಾಳಜಿ ತೋರಿಸಿ.

ವೃಶ್ಚಿಕ: ಉದ್ಯೋಗದಲ್ಲಿರುವ ಒತ್ತಡವನ್ನು ಬಗೆಹರಿಸಿಕೊಳ್ಳಲು ಹೋಗಿ ಪುನಃ ದೊಡ್ಡ ಸಮಸ್ಯೆಗೆ ಸಿಲುಕಿದಂತಾಗಬಹುದು. ಉದ್ಯೋಗ ಹಾಗೂ ಜೀವನ ಪ್ರವೃತ್ತಿಯಲ್ಲಿ ಮಧ್ಯಮ ರೀತಿಯ ಪ್ರಗತಿಯು ತೋರಿಬರುವುದು.

ಧನು: ಸಂಬಂಧದಲ್ಲಿ ವ್ಯವಹಾರ ಮಾಡುವುದರಿಂದ ವ್ಯವಹಾರದಲ್ಲಿಯೂ ಮೋಸ, ಸಂಬಂಧದಲ್ಲಿಯೂ ವ್ಯತ್ಯಾಸಗಳಾಗಬಹುದು. ಅಧಿಕಾರಿ ವರ್ಗದವರಲ್ಲಿ ಸಹನಶೀಲರಾಗಿ ವರ್ತಿಸಿದಲ್ಲಿ ಸರ್ಕಾರಿ ಕೆಲಸಗಳ ಪ್ರಯತ್ನ ಈಡೇರಲಿದೆ.

ಮಕರ: ಗುರುಗಳು ನೀಡಿದ ಉಪದೇಶದ ವಾಣಿಗಳಿಂದ ಅಥವಾ ಸಮಾಧಾನದ ನುಡಿಯಿಂದ ಇಂದಿನ ಜೀವನದಲ್ಲಿ ನೆಮ್ಮದಿ ದೊರಕುವುದು. ಮೇಲಧಿಕಾರಿಗಳ ಕಿರುಕುಳದಿಂದ ಹೊರಬರುವ ಕಾಲ ಸಮೀಪದಲ್ಲಿದೆ.


ಕುಂಭ: ನಿವೃತ್ತಿಯ ಹಣದಲ್ಲಿ ಮಕ್ಕಳ ಹೆಸರಿಗೆ ಮನೆ ಕೊಳ್ಳುವ ಯೋಗ ಅಥವಾ ಭೂಮಿ ಖರೀದಿಯ ಯೋಗವಿದೆ. ಆಲೋಚನೆಗಳಿಗೆ ಪೂರಕವಾಗಿ ತಂದೆಯ ನೆರವು ಸಿಗಲಿದೆ. ಮಕ್ಕಳ ಆರೋಗ್ಯದಲ್ಲಿ ಏರುಪೇರು ಇರುವುದಿಲ್ಲ.

ಮೀನ: ಹಾರ್ಡ್ವೇರ್ ಅಂಗಡಿಯವರಿಗೆ ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವಿರಿ. ನಿಮ್ಮ ಮನೋಭಾವಕ್ಕೆ ಕುಟುಂಬ ವರ್ಗದವರು ಸಕಾರಾತ್ಮಕ ಸಹಾಯ ನೀಡುತ್ತಾರೆ.

ಪದಬಂಧ 5455 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮರದಲ್ಲಿ ಮಾಡಿದ ಹೆಬ್ಬಾಗಿಲು (4)
3. ಆ ಜಗಲಿ ಹತ್ತಿರವಿರುವ ಹೆಬ್ಬಾವು (4)
5. ಅದೇ ತಾನೆ ಲಗ್ನವಾದ ಗಂಡ ಹೆಂಡಿರು (5)
7. ನರಿ ನೆಕ್ಕುತ್ತಿರುವ ಜೇನುತುಪ್ಪ (3)
9. ರತಿಪತಿಯಿಂದ ಮೂಡಿದ ಆಸೆ (3)
11. ತುಂಬಿ ಹರಿಯುವಿಕೆ (3)
13. ಸಾಯುವ ಸಮಯವಿದು (5)
15. ತುಂಬಾ ವಯಸ್ಸಾದ ವ್ಯಕ್ತಿ (4)
16. ಕತ್ತು ಕೊನೆಗಿರಿಸಿ ಮಾಡಿದ ಜೋಡಣೆ! (4)

ಮೇಲಿಂದ ಕೆಳಕ್ಕೆ
1. ಓಟನ್ನು ನೀಡುವಿಕೆ (4)
2. ರಸ ಒಸರುವ ನಾಲಿಗೆ (3)
4. ಗರ ಬಡಿದಂತಿರುವ ಪತಿವ್ರತೆ (3)
6. ದಂಡ ವಿಧಿಸಿ ಶಿಕ್ಷಿಸುವುದು (3)
8. ಒಪ್ಪಿಗೆಯನ್ನು ಸೂಚಿಸುವಾಗ ಹೇಳುವ ಮಾತು (2)
9. ಕಾಣದಂತೆ ಇರುವ ಉದ್ದೇಶ! (3)
10. ಚರ್ಚೆಯಿಲ್ಲಿ ಉಲ್ಟಾ ಆಗಿಬಿಟ್ಟಿದೆ (2)
12. ಕತ್ತು ಕೊನೆಗಿಟ್ಟಾಗ ನಡೆದ ಘಟನೆ (4)
13. ಬಿಡದಿ ಹತ್ತಿರವಿರುವ ಪತ್ನಿ (3)
14. ಜನಪದರ ಮಾತಲ್ಲಿನ ಸಿರಿದೇವತೆ (3)



5454ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವರಮಾನ 3.ವನ್ಯಮೃಗ 5.ದುರಾಸೆ 6.ರವಾನೆ 8.ತವರ 10.ಮಂಕರಿ 11.ಸರಕು 13.ಕಳಸ 5.ಸಹೋದರಿ 16.ಪರದಾಟ

ಮೇಲಿಂದ ಕೆಳಕ್ಕೆ:
1.ವನಚರ 2.ನಗದು 3.ವರಸೆ 4.ಗಡಿಯಾರ 7.ವಾದಕ 9.ವಕ್ತಾರ 10.ಮಂದಹಾಸ 12.ಕುಡಿನೋಟ 13.ಕಮರಿ 14.ಸಲ್ಲಾಪ

ಸುಡೊಕು 5841

						8		7
4		8						
	9	1				6		4
	5		7				6	
				9			5	
2		3			4		7	
7								6
	1		2		9		4	
6		2				9	8	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

5840 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಷೇರುಪೇಟೆ ವಹಿವಾಟು 610

66,118 ಹಿಂದಿನ ಅಂತ್ಯ
65,508 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,716
ಇಂದಿನ ಅಂತ್ಯ	19,523
▼	193
ದಿನದ ಗರಿಷ್ಠ	19,492

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1750 (1750)
ಸೋಯಾ (ರಿಫೈನ್ಡ್)	₹875 (870)
ಸೂರ್ಯಕಾಂತಿ (ರಿಫೈನ್ಡ್)	₹870 (870)
ಪಾಮೋಲಿನ್	₹820 (814)

ವಿನಿಮಯ ದರ

$ ಡಾಲರ್	83.19
£ ಪೌಂಡ್	101.44
€ ಯುರೊ	87.68
¥ ಯೆನ್ (100ಕ್ಕೆ)	56

ಮುದ್ರಮನೆ ಕಾಫಿ (50 ಕೆಜಿಗೆ)



ಎಪಿ	₹11000
ಎಸಿ	₹6300
ಆರ್‌ಪಿ	₹9900
ಆರ್‌ಸಿ	₹5830

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹123-515
ದ್ವಿತಳಿ (ಬಿ.ವಿ)	₹325-620

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹125

(ಪ್ರತಿ ಕೆ.ಜಿಗೆ)

ಅಕ್ಟೋಬರ್ 8ರಿಂದ ಫ್ಲಿಪ್‌ಕಾರ್ಟ್ ಮಾರಾಟ ಮೇಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪ್ರಮುಖ ಇ-ಕಾಮರ್ಸ್ ಕಂಪನಿ ಫ್ಲಿಪ್‌ಕಾರ್ಟ್, ಅಕ್ಟೋಬರ್ 8ರಿಂದ 15ರವರೆಗೆ 'ಬಿಗ್ ಬಿಲಿಯನ್ ಡೇಸ್' ಹೆಸರಿನಲ್ಲಿ ಮಾರಾಟ ಮೇಳ ಆಯೋಜಿಸಿದೆ.

14 ಲಕ್ಷಕ್ಕೂ ಅಧಿಕ ವ್ಯಾಪಾರಿಗಳು ಈ ಮೇಳದಲ್ಲಿ ಭಾಗವಹಿಸಲಿದ್ದಾರೆ. 500ಕ್ಕೂ ಅಧಿಕ ಬ್ರ್ಯಾಂಡ್‌ಗಳ ವಿವಿಧ ಉತ್ಪನ್ನಗಳ ಗ್ರಾಹಕರಿಗೆ ಖರೀದಿಗೆ ಲಭ್ಯವಾಗಲಿವೆ. ಫ್ಲಿಪ್‌ಕಾರ್ಟ್ ಪ್ಲಸ್ ಗ್ರಾಹಕರು ಅಕ್ಟೋಬರ್ 7ರಂದೇ ಖರೀದಿ ಆರಂಭಿಸಹುದಾಗಿದೆ. ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಈ ಮಾರಾಟ ಮೇಳದಲ್ಲಿ ಖರೀದಿ ನಡೆಸುವಾಗ ಐಸಿಐಸಿಐ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿದರೆ ಶೇ 10 ರಿಯಾಯಿತಿಯನ್ನೂ ಪಡೆಯಬಹುದು ಎಂದು ಹೇಳಿದೆ. ಕಂಪನಿಯ 10ನೇ ಮಾರಾಟ ಮೇಳ ಇದಾಗಿದೆ. ಉದ್ಯೋಗ ಸೃಷ್ಟಿ ಮತ್ತು ಗ್ರಾಹಕರಿಗೆ ಉತ್ತಮ ಮೌಲ್ಯ ತಂದುಕೊಡುವ ಅವಕಾಶ ಒದಗಿಸುವ ನಿಟ್ಟಿನಲ್ಲಿ ಈ ಮೇಳ ಮುಖ್ಯವಾಗಿದೆ ಎಂದು ಫ್ಲಿಪ್‌ಕಾರ್ಟ್ ಸಮೂಹದ ಸಿಇಒ ಕಲ್ಯಾಣ್ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ನಕಾರಾತ್ಮಕ ವಹಿವಾಟು: ವಿದೇಶಿ ಬಂಡವಾಳ ಹೊರ ಹರಿವು

ಶೇ 1ರವರೆಗೆ ಇಳಿದ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ದೇಶದ ಷೇರುಪೇಟೆಗಳ ಸೂಚ್ಯಂಕಗಳು ಗುರುವಾರ ಶೇ 1ರವರೆಗೂ ಇಳಿಕೆ ಕಾಣುವಂತಾಯಿತು.

ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೊಸಿಸ್ ಮತ್ತು ಐಟಿಸಿ ಷೇರುಗಳು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾದವು. ಇದರ ಜೊತೆಗೆ ವಿದೇಶಿ ಬಂಡವಾಳ ಹೊರಹರಿವು ಸಹ ದೇಶಿ ವಹಿವಾಟಿನ ಮೇಲೆ ಪರಿಣಾಮ ಬೀರಿತು ಎಂದು ವರ್ತಕರು ಹೇಳಿದ್ದಾರೆ.



ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 610 ಅಂಶ ಇಳಿಕೆ ಕಂಡು 65,508 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 193 ಅಂಶ ಇಳಿಕೆಯಾಗಿ 19,523 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

'ಕಚ್ಚಾ ತೈಲ ದರ ಏರಿಕೆ ಆಗಿರುವುದರಿಂದ ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸಿದರು. ಕಚ್ಚಾ ತೈಲ ದರವು ಬ್ಯಾರಲ್‌ಗೆ 90 ಡಾಲರ್‌ಗಿಂತಲೂ ಹೆಚ್ಚಿನ ಮಟ್ಟದಲ್ಲಿಯೇ ಇದ್ದರೆ ಹಣದುಬ್ಬರದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದ್ದು, ಕಾರ್ಯಾಚರಣಾ ಗಳಿಕೆಯನ್ನೂ ತಗ್ಗಿಸಲಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಅಮೆರಿಕದ ಬಾಂಡ್ ಗಳಿಕೆ ಹೆಚ್ಚಾಗುತ್ತಿರುವುದು ವಿದೇಶಿ ಸಾಂಸ್ಥಿಕ ಹೂಡಿಕೆದಾರರನ್ನು ಮಾರಾಟ ಮಾಡುವಂತೆ ಪ್ರಭಾವ ಬೀರುತ್ತಿವೆ' ಎಂದು ಅವರು ತಿಳಿಸಿದ್ದಾರೆ.

ಟೆಕ್ ಮಹೀಂದ್ರ ಷೇರು ಮೌಲ್ಯ ಶೇ 4.59ರಷ್ಟು ಹೆಚ್ಚಿನ ನಷ್ಟ ಕಂಡಿತು. ಏಷ್ಯನ್ ಪೇಂಟ್ಸ್, ವಿಪ್ರೊ, ಕೋಟಕ್ ಮಹೀಂದ್ರ ಷೇರು ಮೌಲ್ಯ ಸಹ ಕಡಿಮೆ ಆಯಿತು.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.19 ಮತ್ತು ಸ್ಮಾಲ್‌ಕ್ಯಾಪ್ ಶೇ 0.34ರಷ್ಟು ಇಳಿಕೆ ಕಂಡಿದೆ. ವಲಯವಾರು ಐ.ಟಿ. ಶೇ 1.84, ಎಫ್‌ಎಂಸಿಜಿ ಶೇ 1.74, ಟೆಕ್ ಶೇ 1.49ರಷ್ಟು ಇಳಿಕೆ ಕಂಡಿತು.

₹2.95 ಲಕ್ಷ ಕೋಟಿ ನಷ್ಟ

ನವದೆಹಲಿ: ಮುಂಬೈ ಷೇರುಪೇಟೆಯಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ಗುರುವಾರ ಹೂಡಿಕೆದಾರರ ಸಂಪತ್ತು ಮೌಲ್ಯದಲ್ಲಿ ₹2.95 ಲಕ್ಷ ಕೋಟಿ ಕರಗಿತು. ಇದರಿಂದಾಗಿ ಬಿಎಸ್‌ಇನ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ₹316.65 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ದೀರ್ಘಾವಧಿಯ ಸಾಲದ ಪ್ರಮಾಣ ಏರಿಕೆ: ಆರ್‌ಬಿಐ

ವಿದೇಶಿ ಸಾಲ ₹52 ಲಕ್ಷ ಕೋಟಿ

ಮುಂಬೈ (ಪಿಟಿಐ): ಭಾರತವು ವಿದೇಶದಿಂದ ಪಡೆಯುವ ಸಾಲದ ಮೊತ್ತವು 2023ರ ಜೂನ್ ಅಂತ್ಯಕ್ಕೆ ₹42,000 ಕೋಟಿಯಷ್ಟು ಹೆಚ್ಚಾಗಿ ₹52.34 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗುರುವಾರ ಮಾಹಿತಿ ನೀಡಿದೆ.

2023ರ ಮಾರ್ಚ್ ಅಂತ್ಯಕ್ಕೆ ವಿದೇಶಿ ಸಾಲವು ₹51.92 ಲಕ್ಷ ಕೋಟಿಯಷ್ಟು ಇತ್ತು.

ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಹಾಗೂ ವಿದೇಶಿ ಸಾಲದ ಅನುಪಾತವು 2023ರ ಮಾರ್ಚ್ ಅಂತ್ಯದಲ್ಲಿ ಶೇ 18.8ರಷ್ಟು ಇದ್ದಿದ್ದು 2023ರ ಜೂನ್ ಅಂತ್ಯಕ್ಕೆ ಶೇ 18.ಕ್ಕೆ ಇಳಿಕೆ ಕಂಡಿದೆ ಎಂದು ಆರ್‌ಬಿಐ ತಿಳಿಸಿದೆ.

ಅಮೆರಿಕದ ಡಾಲರ್ ಮೌಲ್ಯ ವೃದ್ಧಿಯಾಗಿರುವುದರಿಂದ ಸಾಲದ ಪ್ರಮಾಣ ಹೆಚ್ಚಾಗಿದೆ. ದೀರ್ಘಾವಧಿಯ ಸಾಲವು ₹79,891 ಕೋಟಿಯಷ್ಟು ಹೆಚ್ಚಾಗಿ ₹42.02 ಲಕ್ಷ ಕೋಟಿಗೆ ತಲುಪಿದೆ. ಅಲ್ಪಾವಧಿ ಸಾಲದ ಪ್ರಮಾಣವು ಶೇ 20.6 ರಿಂದ ಶೇ 19.6ರಷ್ಟು ಇಳಿಕೆ ಕಂಡಿದೆ ಎಂದು ತಿಳಿಸಿದೆ.

ಚಾಲಿ ಖಾತೆ ಕೊರತೆ ಏರಿಕೆ

ಮುಂಬೈ (ರಾಯಿಟರ್ಸ್): ದೇಶದ ಚಾಲ್ತಿ ಖಾತೆ ಕೊರತೆಯು ಜನವರಿ–ಮಾರ್ಚ್ ಅವಧಿಗೆ ಹೋಲಿಸಿದರೆ ಏಪ್ರಿಲ್–ಜೂನ್ ಅವಧಿಯಲ್ಲಿ ಏರಿಕೆ ಕಂಡಿದೆ ಎಂದು ಆರ್‌ಬಿಐ ತಿಳಿಸಿದೆ. ವ್ಯಾಪಾರ ಕೊರತೆ ಅಂತರ ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ಹೇಳಿದೆ.

ಚಾಲ್ತಿ ಖಾತೆ ಕೊರತೆಯು ಏಪ್ರಿಲ್–ಜೂನ್ ಅವಧಿಯಲ್ಲಿ ₹ 76,562 ಕೋಟಿಯಷ್ಟು ಆಗಿದೆ. ಜನವರಿ–ಮಾರ್ಚ್ ಅವಧಿಯಲ್ಲಿ ₹10,818 ಕೋಟಿಯಷ್ಟು ಇತ್ತು.

ವ್ಯಾಪಾರ ಕೊರತೆ ಅಂತರವು ಏಪ್ರಿಲ್–ಜೂನ್ ಅವಧಿಯಲ್ಲಿ ₹4.37 ಲಕ್ಷ ಕೋಟಿಯಿಂದ ₹4.71 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಮುಂಬೈ ಧಾರಣೆ

ಶೇಂಗಾ

28-09-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1760 (1760)
ಒಂದು ವಾರದ ಡೆಲಿವರಿ	1755 (1755)
ಸೋಯಾ ಕಚ್ಚಾ	835 (835)
ಪಾಮ್ ವಾರದ ಡೆಲಿವರಿ	818(812)
ಸೂರ್ಯಕಾಂತಿ ಎಣ್ಣೆ ಕಚ್ಚಾ	790 (790)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,700 (58,200)
ಬೆಳ್ಳಿ ಕೆ.ಜಿ
70,400 (70,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಾಗತಿಕ ಉದ್ಯಮ ಸಂಸ್ಥೆಗಳ ಜತೆ ಸಚಿವ ಪಾಟೀಲ ಸಭೆ

ಆರ್ ಆ್ಯಂಡ್ ಡಿ ಕೇಂದ್ರ: 'ಆಪ್ಟೀವ್'ಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಮತ್ತು ಧಾರವಾಡದಲ್ಲಿ ಸಂಶೋಧನಾ ಮತ್ತು ಅಭಿವೃದ್ಧಿ(ಆರ್ ಆ್ಯಂಡ್ ಡಿ) ಕೇಂದ್ರ ಸ್ಥಾಪಿಸುವಂತೆ ಆಟೊಮೋಟಿವ್ ತಂತ್ರಜ್ಞಾನ ಕ್ಷೇತ್ರದಲ್ಲಿನ ವಿಶ್ವದ ಬೃಹತ್ ಕಂಪನಿ 'ಆಪ್ಟೀವ್'ಗೆ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಆಹ್ವಾನ ನೀಡಿದ್ದಾರೆ.

ಅಮೆರಿಕ ಪ್ರವಾಸದಲ್ಲಿರುವ ಸಚಿವರ ನೇತೃತ್ವದ ನಿಯೋಗವು ಕಂಪನಿಯ ಉನ್ನತ ಮಟ್ಟದ ಪ್ರತಿನಿಧಿಗಳೊಂದಿಗೆ ಬುಧವಾರ ಸಮಾಲೋಚನೆ ನಡೆಸಿತು.

ಈ ಬಗ್ಗೆ ವಿವರ ನೀಡಿರುವ ಸಚಿವ ಪಾಟೀಲ, ಸೆಮಿಕಂಡಕ್ಟರ್ ಉತ್ಪನ್ನಗಳಿಗೆ ಸ್ಥಳೀಯ ಪೂರೈಕೆ ಜಾಲವನ್ನು ಅಭಿವೃದ್ಧಿಪಡಿಸಲು ಕರ್ನಾಟಕದಲ್ಲಿರುವ ಅವಕಾಶಗಳ ಬಗ್ಗೆ ಆಪ್ಟೀವ್ ಕಂಪನಿಗೆ ಮನವರಿಕೆ ಮಾಡಿಕೊಡಲಾಗಿದೆ. ಇದರ ಜೊತೆಗೆ ಆಪ್ಟೀವ್ ಕಂಪನಿಯ ಉತ್ಪನ್ನಗಳ ಒಇಎಂ (ಒರಿಜಿನಲ್ ಈಕ್ವಿಪ್‌ಮೆಂಟ್ ಮ್ಯಾನುಫ್ಯಾಕ್ಚರಿಂಗ್), ಅಸೆಂಬ್ಲಿ, ಟೆಸ್ಟಿಂಗ್, ಮಾರ್ಕಿಂಗ್ ಮತ್ತು ಪ್ಯಾಕೇಜಿಂಗ್ (ಎಟಿಪಿಎಂ) ಸೌಲಭ್ಯಗಳ ಬಗ್ಗೆಯೂ ವಿಚಾರ ವಿನಿಮಯ ನಡೆಸಲಾಯಿತು ಎಂದು ತಿಳಿಸಿದ್ದಾರೆ.

ಆಪ್ಟೀವ್ ಕಂಪನಿಯು ಬೆಂಗಳೂರಿನಲ್ಲಿ ತನ್ನ ತಾಂತ್ರಿಕ ಕೇಂದ್ರವನ್ನು ಹೊಂದಿದೆ. ಇದರಲ್ಲಿ 2,500 ಎಂಜಿನಿಯರ್ ಮತ್ತು ತಂತ್ರಜ್ಞರು ಕೆಲಸ ಮಾಡುತ್ತಿದ್ದಾರೆ ಎಂದಿದ್ದಾರೆ.

ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತೆ ಎಂಕೆಎಸ್ ಇನ್‌ಸ್ಟ್ರುಮೆಂಟ್ಸ್ ಕಂಪನಿಯೊಂದಿಗೂ ಚರ್ಚಿಸಲಾಗಿದೆ. ವ್ಯಾಕ್ಯೂಮ್ ಮತ್ತು ಫೋಟಾನಿಕ್ಸ್ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಸುಧಾರಣೆಗೆ ಇರುವ ಅವಕಾಶಗಳನ್ನು ಗಮನಕ್ಕೆ ತರಲಾಗಿದೆ ಎಂದು ತಿಳಿಸಿದ್ದಾರೆ.

'ಇಂಧನ ಕ್ಷೇತ್ರದ ಸಾಧನಗಳಲ್ಲಿ ಫ್ಲುವರಿನ್ ತಂತ್ರಜ್ಞಾನ ಬಳಕೆಗೆ ಹೆಸರಾಗಿರುವ ಓರ್ಬಿಯಾ ಕಂಪನಿಯ ಪ್ರತಿನಿಧಿಗಳೊಂದಿಗೆ ನಡೆಸಿದ ಮಾತುಕತೆಯಲ್ಲಿ ವಿದ್ಯುತ್ ಚಾಲಿತ ವಾಹನಗಳ ಕ್ಷೇತ್ರದಲ್ಲಿ ಸಹಭಾಗಿತ್ವಕ್ಕೆ ಇರುವ ಅವಕಾಶ, ಹನಿ ನೀರಾವರಿಗೆ ಬೇಕಾದ ಪೈಪುಗಳ ತಯಾರಿಕೆ ಕುರಿತು ಮಾಹಿತಿ ನೀಡಿದ್ದೇವೆ' ಎಂದು ಪಾಟೀಲ ವಿವರ ನೀಡಿದ್ದಾರೆ.



ಅಮೆರಿಕದ ಬೋಸ್ಟನ್‌ನಲ್ಲಿ ಸ್ಟೇಟ್ ಸ್ಟ್ರೀಟ್ ಕಂಪನಿ ಜೊತೆ ಬುಧವಾರ ನಡೆದ ಮಾತುಕತೆ ವೇಳೆ ಸ್ಟೇಟ್ ಸ್ಟ್ರೀಟ್ ವ್ಯವಸ್ಥಾಪಕ ನಿರ್ದೇಶಕಿ ವನಮಾಲಾ ನಾರಾಯಣ್, ಕರ್ನಾಟಕದ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ, ಹಿರಿಯ ಉಪಾಧ್ಯಕ್ಷರಾದ ದಸ್ತಿನ್ ಸರ್ನೋಸ್ಕಿ, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಮತ್ತಿತರರು ಇದ್ದರು

ಚಿನ್ನದ ದರ ₹650, ಬೆಳ್ಳಿ ದರ ₹1,000 ಇಳಿಕೆ

ನವದೆಹಲಿ(ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂಗೆ ₹650ರಷ್ಟು ಇಳಿಕೆ ಕಂಡು ₹58,950ರಂತೆ ಮಾರಾಟ ಆಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹1,000 ಕಡಿಮೆ ಆಗಿ ₹73,100ಕ್ಕೆ ತಲುಪಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡು ಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟಿಸ್ ತಿಳಿಸಿದೆ.

ಭಾರತದಲ್ಲಿ ಕ್ರೋಮ್‌ಬುಕ್ ತಯಾರಿಕೆ: ಎಚ್‌ಪಿ–ಗೂಗಲ್ ಒಪ್ಪಂದ

ನವದೆಹಲಿ(ಪಿಟಿಐ): ಭಾರತ ದಲ್ಲಿ ಕ್ರೋಮ್‌ಬುಕ್ ತಯಾರಿಸುವ ಉದ್ದೇಶದಿಂದ ಗೂಗಲ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿರುವುದಾಗಿ ಎಚ್‌ಪಿ ಕಂಪನಿಯು ಗುರುವಾರ ತಿಳಿಸಿದೆ. ಇದೇ ಅಕ್ಟೋಬರ್ 2ರಿಂದ ತಯಾರಿಕೆ ಆರಂಭಿಸುವುದಾಗಿ ಕಂಪನಿ ಹೇಳಿದೆ.



ಚೆನ್ನೈ ಬಳಿ ಇರುವ ಫ್ಲೆಕ್ಸ್ ಘಟಕದಲ್ಲಿ ಕ್ರೋಮ್ ಬುಕ್ ತಯಾರಿಸಲಾಗುವುದು ಎಂದು ಪ್ರಕಟಣೆ ಯಲ್ಲಿ ತಿಳಿಸಿದೆ. ಈ ಘಟಕದಲ್ಲಿ 2020ರ ಆಗಸ್ಟ್‌ನಿಂದಲೇ ಎಚ್‌ಪಿ ಕಂಪನಿಯು ಲ್ಯಾಪ್‌ಟಾಪ್ ಮತ್ತು ಡೆಸ್ಕ್‌ಟಾಪ್‌ಗಳನ್ನು ತಯಾರಿಸುತ್ತಿದೆ.

'ಭಾರತದಲ್ಲಿ ತಯಾರಿಕೆ ಆರಂಭಿಸುವುದರಿಂದ ಭಾರತದ ವಿದ್ಯಾರ್ಥಿಗಳು ಸುಲಭವಾಗಿ ಪರ್ಸನಲ್ ಕಂಪ್ಯೂಟರ್‌ಗಳನ್ನು ಕೈಗೆಟಕುವ ಬೆಲೆಗೆ ಪಡೆಯುವಂತಾಗಲಿದೆ' ಎಂದು ಎಚ್‌ಪಿ ಇಂಡಿಯಾದ ಪರ್ಸನಲ್ ಸಿಸ್ಟಮ್ಸ್‌ನ ಹಿರಿಯ ನಿರ್ದೇಶಕ ವಿಕ್ರಮ್ ಬೇಡಿ ತಿಳಿಸಿದ್ದಾರೆ. 'ಭಾರತದಲ್ಲಿ ಶಿಕ್ಷಣವನ್ನು ಡಿಜಿಟಲೀಕರಣಗೊಳಿಸುವ ಕೆಲಸಕ್ಕೆ ನೀಡುತ್ತಿರುವ ಬೆಂಬಲವನ್ನು ಮುಂದುವರಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆ ಇದಾಗಿದೆ' ಎಂದು ಗೂಗಲ್‌ನ ದಕ್ಷಿಣ ಏಷ್ಯಾದ ಶಿಕ್ಷಣ ವಿಭಾಗದ ಮುಖ್ಯಸ್ಥ ಬಾನಿ ಧವನ್ ಹೇಳಿದ್ದಾರೆ.



'ಯಾತ್ರೆ ಹೆಸರಲ್ಲಿ ಸೌದಿಗೆ ಭೇಟಿ: ಪಾಕ್ ಪ್ರಜೆಗಳಿಂದ ಭಿಕ್ಷಾಟನೆ'

ಇಸ್ಲಾಮಾಬಾದ್(ಪಿಟಿಐ): ಯಾತ್ರೆ ಹೆಸರಿನಲ್ಲಿ ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ತೆರಳುವ ಪಾಕಿಸ್ತಾನಿಯರ ಪೈಕಿ ಬಹುತೇಕರು ಭಿಕ್ಷೆ ಬೇಡುತ್ತಾರೆ. ಸೌದಿ ಅರೇಬಿಯಾ ಮತ್ತಿತರ ದೇಶಗಳ ಜೈಲುಗಳು ಇಂಥ ಪ್ರವಾಸಿಗರಿಂದ ತುಂಬಿವೆ ಎಂಬ ದೂರುಗಳು ಕೇಳಿ ಬರುತ್ತಿವೆ ಎಂದು ಸಂಸತ್‌ನ ಸ್ಥಾಯಿ ಸಮಿತಿಯೊಂದಕ್ಕೆ ಅಧಿಕಾರಿಗಳು ತಿಳಿಸಿದ್ದಾರೆ.

'ಪಾಕಿಸ್ತಾನದ ಭಿಕ್ಷುಕರು ಯಾತ್ರೆಗೆ (ಜಿಯಾರತ್) ತೆರಳುವುದಾಗಿ ಮಧ್ಯಪ್ರಾಚ್ಯ ದೇಶಗಳಿಗೆ ಹೋಗುತ್ತಾರೆ. ಈ ಪೈಕಿ ಬಹುತೇಕ ಜನರು 'ಉಮ್ರಾಹ್' ವೀಸಾದಡಿ ಸೌದಿ ಅರೇಬಿಯಾಕ್ಕೆ ಭೇಟಿ ನೀಡಿ, ಭಿಕ್ಷೆ ಬೇಡುತ್ತಾರೆ' ಎಂದು ಸಂಸತ್ ಕಾರ್ಯದರ್ಶಿ (ಸಾಗರೋತ್ತರ ಪಾಕಿಸ್ತಾನಿಯರ ವಿಭಾಗ) ಜೀಶನ್ ಖಾನ್‌ಜಾದಾ ಅವರು ಸಾಗರೋತ್ತರ ಪಾಕಿಸ್ತಾನಿಯರಿಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಗೆ ತಿಳಿಸಿದ್ದಾರೆ.

'ಮೆಕ್ಕಾದ ಮಸೀದಿ ಬಳಿ ಬಂಧಿಸಲಾಗುವ ಕಿಸೆಗಳ್ಳರ ಪೈಕಿ ಬಹುತೇಕರು ಪಾಕಿಸ್ತಾನ ಪ್ರಜೆಗಳೇ ಆಗಿದ್ದಾರೆ' ಎಂಬ ಜೀಶನ್ ಅವರ ಹೇಳಿಕೆಯನ್ನು ಉಲ್ಲೇಖಿಸಿ ದಿ ಇಂಟರ್‌ನ್ಯಾಷನಲ್ ನ್ಯೂಸ್ ಪತ್ರಿಕೆ ವರದಿ ಮಾಡಿದೆ.

'ಪಾಕಿಸ್ತಾನದ ಭಿಕ್ಷುಕರಿಂದ ತಮ್ಮ ಜೈಲುಗಳು ತುಂಬಿಹೋಗಿವೆ ಎಂದು ಇರಾಕ್ ಮತ್ತು ಸೌದಿ ಅರೇಬಿಯಾ ರಾಯಭಾರಿಗಳು ದೂರಿದ್ದಾರೆ ಎಂಬುದಾಗಿ ಜೀಶನ್ ಅವರು ಸ್ಥಾಯಿ ಸಮಿತಿಗೆ ತಿಳಿಸಿದ್ದಾರೆ' ಎಂದೂ ಪತ್ರಿಕೆ ವರದಿ ಮಾಡಿದೆ.

'ಈ ವಿಷಯವು ಮಾನವ ಕಳ್ಳಸಾಗಣೆ ಎಂದೇ ಪರಿಗಣಿತವಾಗುತ್ತದೆ' ಎಂದೂ ಅವರು ಹೇಳಿದ್ದಾರೆ.

ಯುಎಇಯಲ್ಲಿ 16 ಲಕ್ಷ ಹಾಗೂ ಕತಾರ್‌ನಲ್ಲಿ 2 ಲಕ್ಷ ಪಾಕಿಸ್ತಾನ ಪ್ರಜೆಗಳು ವಾಸಿಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಜಿ ಯೋಧನಿಗೆ ಗೌರವ: ಟ್ರುಡೊ ಕ್ಷಮೆ

ಒಟ್ಟಾವ (ಪಿಟಿಐ): ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿದ್ದ ನಾಜಿ ಯೋಧ ಯರೊಸ್ಲಾವ್ ಹುಂಕಾ ಅವರನ್ನು ಕೆನಡಾ ಸಂಸತ್ತಿನಲ್ಲಿ ಗೌರವಿಸಿದ್ದಕ್ಕಾಗಿ ಪ್ರಧಾನಿ ಜಸ್ಟಿನ್ ಟ್ರುಡೊ ಕ್ಷಮೆ ಕೋರಿದ್ದಾರೆ.



ಜಸ್ಟಿನ್ ಟ್ರುಡೊ

ನಾಜಿ ಯೋಧನನ್ನು ಗೌರವಿಸಿದ್ದು ವಿಶ್ವದ ಗಮನ ಸೆಳೆದು ಖಂಡನೆಗೆ ಒಳಗಾಗಿತ್ತು. ವಿರೋಧ ಪಕ್ಷಗಳೂ ಪ್ರಧಾನಿ ಅವರು ಕ್ಷಮೆ ಕೋರಬೇಕೆಂದು ಒತ್ತಾಯಿಸಿದ್ದವು.

ಯೋಧನನ್ನು ಆಹ್ವಾನಿಸಿದ ಹೊಣೆ ಹೊತ್ತು ಸ್ಪೀಕರ್ ಆ್ಯಂಥೋನಿ ರೊಟಾ ಅವರು ಕೂಡ ಈಚೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಸೆ. 22ರಂದು ಶುಕ್ರವಾರ ಸಂಸತ್ತನ್ನು ಉದ್ದೇಶಿಸಿ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ಭಾಷಣ ಮಾಡಿದ್ದರು. ಆ ಬಳಿಕ ಹುಂಕಾ ಅವರನ್ನು ಸ್ಪೀಕರ್ ಆ್ಯಂಥೋನಿ ಗೌರವಿಸಿದ್ದರು.

'ಇದು ನಾವು ಮಾಡಿದ ತಪ್ಪು. ಇದರಿಂದ ಸಂಸತ್ತು ಮತ್ತು ಕೆನಡಾ ಭಾರಿ ಮುಜುಗರಕ್ಕೆ ಒಳಗಾಯಿತು. ಸಂದರ್ಭದ ಅರಿವೇ ಇಲ್ಲದೆ ನಾವು ಎದ್ದು ನಿಂತು ಕರತಾಡನ ಮಾಡಿದ್ದೆವು. ಅಂದು ಸದನದಲ್ಲಿದ್ದ ಎಲ್ಲರೂ ಇದಕ್ಕಾಗಿ ವಿಷಾದಿಸುತ್ತೇವೆ' ಎಂದು ಪ್ರಧಾನಿ ಅವರು 'ಹೌಸ್ ಆಫ್ ಕಾಮನ್ಸ್' (ಸಂಸತ್‌ನ ಕೆಳಮನೆ) ಪ್ರವೇಶಿಸುವ ಮೊದಲು ಬುಧವಾರ ಸುದ್ದಿಗಾರರಿಗೆ ತಿಳಿಸಿದರು. ಬಳಿಕ ಸಂಸತ್ತಿನಲ್ಲಿ ಕೂಡ ಇದನ್ನು ಪುನರುಚ್ಚರಿಸಿ ಕ್ಷಮೆ ಕೋರಿದರು.

'ನಾಜಿಗಳು ನಡೆಸಿದ ಯೆಹೂದಿಗಳ ಹತ್ಯಾಕಾಂಡದಲ್ಲಿ ಮಡಿದವರಿಗೆ ಮಾಡಿದ ಅವಮಾನ ಈ ಗೌರವ. ಯೆಹೂದಿಗಳಿಗೆ ಅಲ್ಲದೆ ನಾಜಿಗಳ ಹತ್ಯಾಕಾಂಡಕ್ಕೆ ಬಲಿಯಾದವರೆಲ್ಲರಿಗೆ ಇದರಿಂದ ಬಹಳ ನೋವಾಗಿದೆ' ಎಂದು ಅವರು ಹೇಳಿರುವುದಾಗಿ ಸಿಟಿವಿ ನ್ಯೂಸ್ ವರದಿ ಮಾಡಿದೆ.

ದೆಹಲಿಯ ಮೇಲ್ಸೇತುವೆ ಮೇಲೆ ಖಾಲಿಸ್ತಾನಿ ಪರ ಬರಹ: ಕೇಸ್ ದಾಖಲು

ನವದೆಹಲಿ: ಉತ್ತರ ದೆಹಲಿಯ ಕಾಶ್ಮೀರಿ ಗೇಟ್‌ನ ಮೇಲ್ಸೇತುವೆ ಗೋಡೆ ಮೇಲೆ ಖಾಲಿಸ್ತಾನಿ ಪರ ಬರಹ ಪತ್ತೆಯಾಗಿದ್ದು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಹಂಚಿಕೆಯಾಗಿದ್ದ ವಿಡಿಯೊದಲ್ಲಿ ಮೇಲ್ಸೇತುವೆ ಮೇಲೆ ಈ ಬರಹ ಕಂಡು ಬಂದಿತ್ತು. ಉತ್ತರ ಜಿಲ್ಲೆ ಪ್ರದೇಶದಲ್ಲಿ ತೀವ್ರ ಶೋಧ ನಡೆಸಿದ ಬಳಿಕ ಸೀಲಾಪುರದಿಂದ ಕಾಶ್ಮೀರಿ ಗೇಟ್‌ನತ್ತ ಹೋಗುವ ಯುಧಿಷ್ಠರ ಮೇಲ್ಸೇತುವೆ ಮೇಲೆ ಈ ಬರಹ ಇತ್ತು.

ತನಿಖೆ ನಡೆಸಲಾಗುತ್ತಿದೆ ಎಂದು ಹೆಚ್ಚುವರಿ ಡಿಸಿಪಿ (ಉತ್ತರ) ಮನೋಜ್ ಕುಮಾರ್ ಮೀನಾ ಹೇಳಿದ್ದಾರೆ.

ಇದಕ್ಕೂ ಮೊದಲು ಆಗಸ್ಟ್‌ನಲ್ಲಿ ಕೂಡ ದೆಹಲಿಯ ಐದು ಮೆಟ್ರೊ ನಿಲ್ದಾಣಗಳ ಗೋಡೆಗಳ ಮೇಲೆ ಇಂಥದ್ದೇ ಬರಹ ಕಾಣಿಸಿಕೊಂಡಿತ್ತು. ಪಂಜಾಬ್‌ನ ಇಬ್ಬರನ್ನು ಬಂಧಿಸಲಾಗಿತ್ತು.

ಮಲಬಾರ್ ಗೋಲ್ಡ್ ಹೂಡಿಕೆ

ಮುಂಬೈ (ಪಿಟಿಐ): ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ವಹಿವಾಟು ವಿಸ್ತರಣೆಗಾಗಿ ಮುಂದಿನ ಹಣಕಾಸು ವರ್ಷದಲ್ಲಿ ₹ 4 ಸಾವಿರ ಕೋಟಿ ಹೂಡಿಕೆ ಮಾಡಲಿದೆ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ತಿಳಿಸಿದ್ದಾರೆ.

'ಹ್ಯಾರಿ ಪಾಟರ್' ಖ್ಯಾತಿಯ ಗ್ಯಾಂಬೊನ್ ಇನ್ನಿಲ್ಲ

ಲಂಡನ್ (ಎಪಿ): 'ಹ್ಯಾರಿ ಪಾಟರ್' ಸಿನಿಮಾ ಖ್ಯಾತಿಯ ಬ್ರಿಟಿಷ್ ನಟ ಮೈಕೆಲ್ ಗ್ಯಾಂಬೊನ್ (82) ಗುರುವಾರ ನಿಧನರಾದರು.



ಮೈಕೆಲ್ ಗ್ಯಾಂಬೊನ್ – ಎಎಫ್‌ಪಿ ಚಿತ್ರ

ನ್ಯುಮೋನಿಯದಿಂದ ಬಳಲುತ್ತಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ವಿಧಿವಶರಾಗಿದ್ದಾರೆ ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

'ಹ್ಯಾರಿ ಪಾಟರ್' ಸರಣಿಯ ಎಂಟು ಸಿನಿಮಾಗಳ ಪೈಕಿ ಆರರಲ್ಲಿ ಗ್ಯಾಂಬೊನ್ ಅವರು, ಪ್ರೊಫೆಸರ್ ಆಲ್ಬಸ್ ಡಂಬಲ್ ಡೋರ್ ಪಾತ್ರದಲ್ಲಿ ನಟಿಸಿದ್ದರು. ಈ ಚಿತ್ರಗಳಲ್ಲಿನ ಅವರ ಮನೋಜ್ಞ ಅಭಿನಯವು ಅವರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ತಂದುಕೊಟ್ಟಿತ್ತು. ಅಲ್ಲದೇ, ಹೊಸಪೀಳಿಗೆಯ ಲಕ್ಷಾಂತರ ಅಭಿಮಾನಿಗಳನ್ನು ಸೃಷ್ಟಿಸಿತ್ತು.

ಗ್ಯಾಂಬೊನ್ ಅವರು ಜನಿಸಿದ್ದು ಐರ್ಲೆಂಡ್‌ನಲ್ಲಿ. ಎಂಜಿನಿಯರ್ ಆಗಿ ತರಬೇತಿ ಪಡೆದಿದ್ದ ಅವರು ಲಂಡನ್‌ಗೆ ತೆರಳಿ ಅಲ್ಲಿನ ರಾಯಲ್ ನ್ಯಾಷನಲ್ ಥಿಯೇಟರ್‌ನ ಸಕ್ರಿಯ ಸದಸ್ಯರಾದರು. ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್ ರಚನೆಯ ನಾಟಕಗಳಲ್ಲಿನ ಹಲವು ಪಾತ್ರಗಳಿಗೆ ಜೀವ ತುಂಬಿದ್ದು ಅವರ ಹೆಗ್ಗಳಿಕೆ.

ಡರ್ಬಿನ್‌ನಲ್ಲಿ ನಡೆದ 'ಒಥೆಲೊ' ನಾಟಕದ ಮೂಲಕ ಅವರ ರಂಗ ಪಯಣ ಆರಂಭಗೊಂಡಿತು. 'ಹ್ಯಾಮ್ಲೆಟ್' ನಾಟಕದಲ್ಲಿನ ಸಣ್ಣ ಪಾತ್ರ ಅವರ ನಟನಾ ಬದುಕಿಗೆ ಹೊಸ ತಿರುವು ನೀಡಿತು. ಅರವತ್ತರ ದಶಕದಲ್ಲಿ ತೆರೆಕಂಡ 'ಒಥೆಲೊ' ಚಿತ್ರದ ಮೂಲಕ ಅವರು ಸಿನಿ ಪಯಣ ಆರಂಭಿಸಿದರು.

ಐದು ದಶಕಗಳಿಗೂ ಹೆಚ್ಚು ಕಾಲ ಟಿ.ವಿ, ರಂಗಭೂಮಿ, ರೇಡಿಯೊ, ಸಿನಿಮಾ ನಟನೆಯಲ್ಲಿ ತೊಡಗಿಕೊಂಡಿದ್ದ ಅವರಿಗೆ, 'ಬ್ರಿಟಿಷ್ ಅಕಾಡೆಮಿ ಆಫ್ ಫಿಲ್ಮ್' ಹಾಗೂ 'ಟೆಲಿವಿಷನ್ ಆರ್ಟ್ಸ್ ಪ್ರಶಸ್ತಿ' ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

ಡ್ರಗ್ಸ್ ಪ್ರಕರಣ: ಪಂಜಾಬ್ ಶಾಸಕ ಬಂಧನ

ಚಂಡೀಗಢ (ಪಿಟಿಐ): ಕಾಂಗ್ರೆಸ್ ಶಾಸಕ ಸುಖ್ಪಾಲ್ ಸಿಂಗ್ ಖೈರಾ ಅವರನ್ನು 2015ರ ಮಾದಕ ವಸ್ತು ಪ್ರಕರಣದಲ್ಲಿ ಪಂಜಾಬ್ ಪೊಲೀಸರು ಬಂಧಿಸಿದ್ದಾರೆ.

ಭೋಲತ್ ಕ್ಷೇತ್ರದ ಶಾಸಕರಾದ ಖೈರಾ ಅವರನ್ನು ಎರಡು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಬೆಳಿಗ್ಗೆ 6 ಗಂಟೆಗೆ ಖೈರಾ ಅವರ ನಿವಾಸಕ್ಕೆ ಪೊಲೀಸರು ಆಗಮಿಸಿದಾಗ ಕುಟುಂಬಸ್ಥರು ಫೇಸ್‌ಬುಕ್ ಲೈವ್ ಮಾಡಿದ್ದಾರೆ. ಪೊಲೀಸರೊಂದಿಗೆ ಖೈರಾ ವಾಗ್ವಾದ ನಡೆಸಿರುವುದು, ವಾರಂಟ್ ಪ್ರತಿ ತೋರಿಸುವಂತೆ ಆಗ್ರಹಿಸಿರುವುದು ಫೇಸ್‌ಬುಕ್ ಲೈವ್ ವಿಡಿಯೊದಲ್ಲಿ ದಾಖಲಾಗಿದೆ. ಜತೆಗೆ, ಪೊಲೀಸರ ಗುರುತಿನ ಚೀಟಿಯನ್ನು ಕೇಳುತ್ತಿರುವುದೂ ವಿಡಿಯೊದಲ್ಲಿದೆ.

ಈ ಪ್ರಕರಣದಿಂದ ಆಮ್ ಆದ್ಮಿ ಪಕ್ಷ ಮತ್ತು ಕಾಂಗ್ರೆಸ್ ನಡುವಣ ಭಿನ್ನಾಭಿಪ್ರಾಯ ಮತ್ತಷ್ಟು ಹೆಚ್ಚಾಗಿದೆ. ರಾಜಕೀಯ ದ್ವೇಷಕ್ಕಾಗಿ ಖೈರಾ ಅವರನ್ನು ಬಂಧಿಸಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

'ಇದು ಸುಳ್ಳು ಪ್ರಕರಣ' ಎಂದು ಪಂಜಾಬ್ ಘಟಕದ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾ ದೂರಿದ್ದಾರೆ.

ಪುರುಷರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಸಾಧನೆ • ವೈಯಕ್ತಿಕ ಶೂಟಿಂಗ್‌ನಲ್ಲಿ ನಿರಾಸೆ

ಭಾರತ ಮುಡಿಗೆ ಮತ್ತೊಂದು ಚಿನ್ನ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಶೂಟಿಂಗ್ ರೇಂಜ್‌ನಲ್ಲಿ ಭಾರತದ ಚಿನ್ನದ ಬೇಟೆ ಗುರುವಾರವೂ ಮುಂದುವರಿಯಿತು. ಪುರುಷರ ಶೂಟಿಂಗ್ ತಂಡವು ಚಿನ್ನ ಗೆದ್ದಿತು.

ಗುರುವಾರ ನಡೆದ ಪುರುಷರ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಸರಬ್ಜೋತ್‌ಸಿಂಗ್, ಅರ್ಜುನ್ ಸಿಂಗ್ ಚೀಮಾ ಮತ್ತು ಶಿವ ನರ್ವಾಲ್ ಅವರಿದ್ದ ತಂಡವು ಪ್ರಥಮ ಸ್ಥಾನ ಗಳಿಸಿತು. ಬುಧವಾರ ಮಹಿಳಾ ತಂಡವು ಚಿನ್ನದ ಸಾಧನೆ ಮಾಡಿತ್ತು.

ಭಾರತ ತಂಡವು ಒಟ್ಟು 1734 ಅಂಕಗಳೊಂದಿಗೆ ಮೊದಲ ಸ್ಥಾನ ಗಳಿಸಿತು. ಆತಿಥೇಯ ಚೀನಾ ತಂಡವು ಕೇವಲ ಒಂದು ಅಂಕದ ಅಂತರದಿಂದ ಬೆಳ್ಳಿ ಪದಕ ಪಡೆಯಬೇಕಾಯಿತು. ವಿಯೆಟ್ನಾಂ ಶೂಟಿಂಗ್ ಬಳಘವು 1730 ಅಂಕಗಳೊಂದಿಗೆ ಕಂಚು ಜಯಿಸಿತು.

ಇದರೊಂದಿಗೆ ಶೂಟಿಂಗ್ ಪಡೆಯು ಭಾರತಕ್ಕೆ ಇದುವರೆಗೆ ಒಟ್ಟು 13 ಪದಕಗಳ ಕಾಣಿಕೆ ನೀಡಿದಂತಾಯಿತು. ಇದರಲ್ಲಿ ನಾಲ್ಕು ಚಿನ್ನ, ನಾಲ್ಕು ಬೆಳ್ಳಿ ಮತ್ತು ಐದು ಕಂಚಿನ ಪದಕಗಳು ಒಳಗೊಂಡಿವೆ.


ಇದೇ ಶನಿವಾರ ತಮ್ಮ 22ನೇ ಜನ್ಮದಿನ ಆಚರಿಸಿಕೊಳ್ಳಲಿರುವ ಸರಬ್ಜೋತ್ ಸಿಂಗ್ ತಮ್ಮ ಸಹ ಶೂಟರ್‌ಗಳೊಂದಿಗೆ ದೇಶಕ್ಕೆ ಚಿನ್ನದ 'ಕಾಣಿಕೆ' ನೀಡಿದರು. ಅವರು ಕ್ವಾಲಿಫಿಕೇಷನ್‌ನಲ್ಲಿ 580 ಅಂಕ ಗಳಿಸಿದರು. ಚೀಮಾ 578 ಮತ್ತು ನರ್ವಾಲ್ 576 ಅಂಕ ಕಲೆಹಾಕಿದರು.

ಸರಬ್ಜೋತ್ (95, 95, 97, 98, 97 ಹಾಗೂ 98) ಪ್ರತಿಯೊಂದು ಶಾಟ್‌ನಲ್ಲಿ ಉತ್ತಮ ಸಾಧನೆ ಮಾಡಿದರು. ಚೀಮಾ (97, 96, 97, 97, 96 ಮತ್ತು 95) ಹಾಗೂ ನರ್ವಾಲ್ (92, 96, 97, 99, 97 ಮತ್ತು 95) ಕೂಡ ತಮ್ಮ ಉಪಯುಕ್ತ ಕಾಣಿಕೆ ನೀಡುವಲ್ಲಿ ಹಿಂದೆ ಬೀಳಲಿಲ್ಲ. ಇದು ಭಾರತ ತಂಡವು ಚಿನ್ನದ ಹಾದಿಯಲ್ಲಿ ಸಾಗಲು ಕಾರಣವಾಯಿತು.

ಶೂಟಿಂಗ್ ರೇಂಜ್‌ನಲ್ಲಿ ಭಾರತಕ್ಕೆ ತಂಡ ವಿಭಾಗದಲ್ಲಿ ಒಲಿದ ಮೂರನೇ ಬಂಗಾರದ ಪದಕ ಇದು.

'ತಂಡದಲ್ಲಿ ಎಲ್ಲರಲ್ಲೂ ಉತ್ತಮ ಬಾಂಧವ್ಯ ಇದೆ. ಆರೋಗ್ಯಕರ ಪೈಪೋಟಿಯೂ ಇದೆ. ಶ್ರೇಷ್ಠ ತಂಡ ಇದಾಗಿದೆ' ಎಂದು ಚೀಮಾ ಸಂತಸ ವ್ಯಕ್ತಪಡಿಸಿದರು.

ಸ್ಕೀಟ್ ಮಿಶ್ರ ತಂಡಕ್ಕೆ ಏಳನೇ ಸ್ಥಾನ: ಗಣೇಮತ್ ಶೇಕಾನ್ ಮತ್ತು ಅನಂತ್ ಜೀತ್ ಸಿಂಗ್ ನರುಕಾ ಅವರಿದ್ದ ಮಿಶ್ರ ಸ್ಕೀಟ್ ತಂಡವು ಏಳನೇ ಸ್ಥಾನ ಪಡೆಯಿತು. ಅದರಿಂದಾಗಿ ಆರು ಸ್ಪರ್ಧಿಗಳಿರುವ ಫೈನಲ್ ಪ್ರವೇಶಿಸುವಲ್ಲಿ ವಿಫಲವಾಯಿತು. ಈ ಜೋಡಿಯು ಸರಾಸರಿ 138 ಅಂಕ ಗಳಿಸಿತು. ಬುಧವಾರ ಪುರುಷರ ಸ್ಕೀಟ್ ಸ್ಪರ್ಧೆಯಲ್ಲಿ ನರುಕಾ ಬೆಳ್ಳಿ ಪದಕ ಜಯಿಸಿದ್ದರು.




ಭಾರತದ ಅರ್ಜುನ್ ಸಿಂಗ್ ಚೀಮಾ, ಭಾರತದ ಶಿವ ನರ್ವಾಲ್ –ಪಿಟಿಐ ಚಿತ್ರ



ಭಾರತದ ಸರಬ್ಜೋತ್ ಸಿಂಗ್ –ಪಿಟಿಐ ಚಿತ್ರ

ಪದಕ ಸನಿಹ ಎಡವಿದ ಸರಬ್ಜೋತ್

ತಂಡ ವಿಭಾಗದಲ್ಲಿ ಚಿನ್ನ ಗೆದ್ದ ಸರಬ್ಜೋತ್ ಸಿಂಗ್ ಮತ್ತು ಅರ್ಜುನ್ ಸಿಂಗ್ ಅವರು ವೈಯಕ್ತಿಕ ವಿಭಾಗದಲ್ಲಿ ಪದಕ ಜಯದ ಹೊಸ್ತಿಲಲ್ಲಿ ಎಡವಿದರು.

ಅವರು ಕ್ವಾಲಿಫಿಕೇಷನ್ ಸುತ್ತಿನಲ್ಲಿ ಅವರು ಐದನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದರು. ಅಂತಿಮ ಸುತ್ತಿನಲ್ಲಿ ಅವರಿಗೆ ಮೂರು ಹಾಗೂ ನಾಲ್ಕನೇ ಶಾಟ್‌ಗಳಲ್ಲಿ ಕ್ರಮವಾಗಿ 9.8 ಮತ್ತು 9.4 ಅಂಕಗಳನ್ನು ಗಳಿಸಲು ಮಾತ್ರ ಸಾಧ್ಯವಾಯಿತು. ಏಳನೇ ಶಾಟ್‌ನಲ್ಲಿ ನಿಖರ ಗುರಿ ಕಟ್ಟುವಲ್ಲಿ ವಿಫಲರಾದರು. ಕೇವಲ 8.9 ಪಾಯಿಂಟ್ ಗಳಿಸಿದರು.

ಸರಬ್ಜೋತ್ ಹೋದವರ್ಷ ಭೋಪಾಲ್‌ನಲ್ಲಿ ನಡೆದ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು.

ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಆಡುವ ಅರ್ಹತೆ ಗಿಟ್ಟಿಸಬೇಕಾದರೆ ಇದೇ ವರ್ಷ ದಕ್ಷಿಣ ಕೊರಿಯಾದಲ್ಲಿ ನಡೆಯಲಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲ್ಲಬೇಕಿದೆ. ಇದೇ ಸುತ್ತಿನಲ್ಲಿ ಅರ್ಜುನ್ ಸಿಂಗ್ ಚಿಮಾ ಅವರೂ ಎಡವಿದರು.

ಉತ್ತರ ಕೊರಿಯಾ ತಂಡದ ಆನಂದಬಾಷ್ಪ

ಹಾಂಗ್‌ಝೌ (ಎಎಫ್‌ಪಿ): ಉತ್ತರ ಕೊರಿಯಾದ ಶೂಟರ್‌ಗಳು ಗುರುವಾರ ಚಿನ್ನದ ಪದಕ ಜಯಿಸಿದರು. ಅವರ ಸಂತಸಕ್ಕೆ ಪಾರವೇ ಇರಲಿಲ್ಲ. ಆನಂದಬಾಷ್ಪದಲ್ಲಿ ತೇಲಿಹೋದರು.

10 ಮೀಟರ್ಸ್ ರನ್ನಿಂಗ್ ಟಾರ್ಗೆಟ್ ಶೂಟಿಂಗ್‌ನಲ್ಲಿ ಉತ್ತರ ಕೊರಿಯಾ ತಂಡ ಜಯಿಸಿತು. ಪೇಕ್ ಒಕೆ ಸಿಮ್ , ಪ್ಯಾಂಗ್ ಮಿಯಾಂಗ್ ಹಿಯಾಂಗ್ ಹಾಗೂ ರಿ ಜಿ ಯೀ ಅವರು ತಂಡದಲ್ಲಿದ್ದರು.

ತಮ್ಮ ದೇಶದ ಧ್ವಜವು ಮೇಲೇರಿದಾಗ ಅವರೆಲ್ಲರೂ ಭಾವುಕರಾದರು. ಎದೆಯುಬ್ಬಿಸಿ ಗೌರವ ವಂದನೆ ಸಲ್ಲಿಸಿದರು. ಅವರ ಅವರ ಕಣ್ಣುಗಳು ತುಂಬಿಬಂದಿದ್ದವು.

ಕೋವಿಡ್ ಬಿಕ್ಕಟ್ಟಿನ ನಂತರ ಕೊರಿಯಾ ತಂಡವು ಗಳಿಸಿದ ಮೊದಲ ಅಂತರರಾಷ್ಟ್ರೀಯ ಚಿನ್ನದ ಪದಕ ಇದಾಗಿದೆ. 2021ರಲ್ಲಿ ನಡೆದ ಟೋಕಿಯೊ ಒಲಿಂಪಿಕ್‌ನಲ್ಲಿ ಈ ದೇಶದ ಅಥ್ಲೀಟ್‌ಗಳು ಭಾಗವಹಿಸಿರಲಿಲ್ಲ. 2022ರ ಚಳಿಗಾಲದ ಒಲಿಂಪಿಕ್ ಕೂಟದಿಂದ ಅವರನ್ನು ನಿಷೇಧಿಸಲಾಗಿತ್ತು.

ಈಕ್ವೆಸ್ಟ್ರಿಯನ್ ಡ್ರೆಸಾಜ್: ಅನುಷ್ ಕೊರಳಿಗೆ ಕಂಚು



ಕಂಚಿನ ಪದಕದೊಂದಿಗೆ ಅನುಷ್ ಅಗರವಾಲ್ –ಪಿಟಿಐ ಚಿತ್ರ

ಹಾಂಗ್‌ಝೌ (ಪಿಟಿಐ): ಭಾರತದ ಅನುಷ್ ಅಗರವಾಲ್ ಏಷ್ಯನ್ ಕ್ರೀಡಾಕೂಟದ ಈಕ್ವೆಸ್ಟ್ರಿಯನ್ ವಿಭಾಗದ ವೈಯಕ್ತಿಕ ಡ್ರೆಸಾಜ್ ನಲ್ಲಿ ಕಂಚಿನ ಪದಕ ಜಯಿಸಿತು.

ಈ ಸ್ಪರ್ಧಾ ವಿಭಾಗದ ಇತಿಹಾಸದಲ್ಲಿ ಭಾರತಕ್ಕೆ ಬಂದ ಮೊಟ್ಟಮೊದಲ ಪದಕ ಇದಾಗಿದೆ.

ಗುರುವಾರ ನಡೆದ ಸ್ಪರ್ಧೆಯಲ್ಲಿ ತಮ್ಮ ಅಸ್ಟ್ರೈಡ್ ಎಟ್ರೊ ಹೆಸರಿನ ಕುದುರೆಯ ಮೇಲೆ ಸವಾರಿ ಮಾಡಿದ ಅನುಷ್ 73.030 ಅಂಕಗಳನ್ನು ಗಳಿಸಿ, ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಈಕ್ವೆಸ್ಟ್ರಿಯನ್‌ನಲ್ಲಿ ಭಾರತಕ್ಕೆ ಒಲಿದ ಎರಡನೇ ಪದಕ ಇದು.

ಮಲೇಷ್ಯಾದ ಬಿನ್ ಮಹಮದ್ ಫಾತಿಲ್ ಮೊಹಮದ್ ಖಾಬಿಲ್ ಅಂಬಕ್ (75.780) ಚಿನ್ನ ಜಯಿಸಿದರು. ಹಾಂಗ್‌ಕಾಂಗ್ ದೇಶದ ಜಾಕ್ಲಿನ್ ವಿಂಗ್ ಯೀಂಗ್ ಸಿಯು (73.450) ಬೆಳ್ಳಿ ಪದಕ ಗಳಿಸಿದರು.

ಬುಧವಾರ ನಡೆದಿದ್ದ ಕ್ವಾಲಿಫಿಕೇಷನ್ ಸುತ್ತಿನಲ್ಲಿ ಹೃದಯ್ ವಿಪುಲ್ ಛೆಡಾ ಅಗ್ರಸ್ಥಾನ ಗಳಿಸಿದ್ದರು. ಆದರೆ ಪದಕ ಸುತ್ತಿನಲ್ಲಿ ಅವರನ್ನು ಕೈಬಿಡಲಾಯಿತು.

ಡ್ರೆಸಾಜ್ ತಂಡ ವಿಭಾಗದಲ್ಲಿ ಚಿನ್ನ ಗೆದ್ದು ಚಾರಿತ್ರಿಕ ಸಾಧನೆ ಮಾಡಿದ ಛೆಡಾ, ದಿವ್ಯಕೃತಿ ಸಿಂಗ್ ಮತ್ತು ಸುದೀಪ್ತಿ ಹಜೆಲಾ ಅವರೊಂದಿಗೆ ಅನುಷ್ ಕೂಡ ಬಳಗದಲ್ಲಿದ್ದರು.

ವುಶು 60 ಕೆ.ಜಿ ವಿಭಾಗ: ಚೀನಾದ ವು ಷಿಯೋವಿಗೆ ಚಿನ್ನ

ರೋಶಿಬಿನಾ ದೇವಿಗೆ ಬೆಳ್ಳಿ ಪದಕ

ಹಾಂಗ್‌ಝೌ (ಪಿಟಿಐ): ಭಾರತದ ನವೊರೆಮ್ ರೋಶಿಬಿನಾ ದೇವಿ ಅವರು ಮಹಿಳೆಯರ ವುಶು 60 ಕೆ.ಜಿ. ಸಾಂಡಾ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡರು. ಚೀನಾದ ವು ಷಿಯೋವಿ ಅವರು ಫೈನಲ್‌ನಲ್ಲಿ 2–0 ಯಿಂದ ಮಣಿಪುರದ ರೋಶಿಬಿನಾ ಅವರನ್ನು ಮಣಿಸಿದರು.

ಹಾಲಿ ಚಾಂಪಿಯನ್ ಸಹ ಆಗಿರುವ ಷಿಯೋವಿ ಎದುರು ಹಿಡಿತಪಡೆಯಲು ರೋಶಿಬಿನಾ ಆರಂಭದಿಂದಲೇ ಯತ್ನಿಸಿದರೂ ಫಲಸಿಗಲಿಲ್ಲ. ಆಕ್ರಮಣಕಾರಿಯಾಗಿದ್ದ ವು ಎರಡೂ ಸುತ್ತುಗಳಲ್ಲಿ ಮೇಲುಗೈ ಸಾಧಿಸಿದರು. ಎರಡು ಸುತ್ತುಗಳ ನಂತರ ತೀರ್ಪುಗಾರರು ಆತಿಥೇಯ ದೇಶದ ಸ್ಪರ್ಧಿಯನ್ನು ವಿಜೇತೆ ಎಂದು ಸಾರಿದರು.

ಮೊದಲ ಸುತ್ತಿನಲ್ಲಿ ವು ಅವರ ಕಾಲನ್ನು ಹಿಡಿತಕ್ಕೆ ಪಡೆದು ಅರೆನಾದ ಮೂಲೆಗೆ ಸರಿಸಿದರೂ, ಚೀನಾದ ಸ್ಪರ್ಧಿ ಬಗ್ಗಲಿಲ್ಲ. ಪ್ರತಿದಾಳಿ ನಡೆಸಿ ಆ ಸುತ್ತನ್ನು ಗೆದ್ದರು. ಎರಡನೇ ಸುತ್ತಿನಲ್ಲೂ ವು ಅವರು ತೊಂದರೆಗೆ ಸಿಲುಕಲಿಲ್ಲ.

22 ವರ್ಷದ ರೋಶಿಬಿನಾ ಅವರು 2018ರ ಜಕಾರ್ತಾ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

'ಸಂತ್ರಸ್ತರಿಗೆ ಸಂದ ಜಯ': ವುಶು ಸ್ಪರ್ಧೆಯಲ್ಲಿ ತಾವು ಗೆದ್ದ ಪದಕ, ಮಣಿಪುರ ಹಿಂಸಾಚಾರದಲ್ಲಿ ಸಂತ್ರಸ್ತರಿಗೆ ಸಂದ ಜಯ ಎಂದು ರೋಶಿಬಿನಾ ದೇವಿ ಹೇಳಿದ್ದಾರೆ.


ಮಣಿಪುರದ ವಿಷ್ಣುಪುರ ಜಿಲ್ಲೆಯ ಕ್ವಾಶಿಪಾಯಿ ಜಿಲ್ಲೆಯ ಮೈತೇಯಿ ಜನಾಂಗಕ್ಕೆ ಸೇರಿದವರು.

ಪಕ್ಕದ ಜಿಲ್ಲೆ ಚುರಾಚಾಂದಪುರ ಜಿಲ್ಲೆಯಲ್ಲಿ ಕುಕಿ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದೆ. ಮೇ ತಿಂಗಳಿಂದ ಈ ಎರಡು ಸಮುದಾಯಗಳ ನಡುವೆ ಭುಗಿಲೆದ್ದ ಹಿಂಸಾಚಾರದಿಂದ ಈ ಪುಟ್ಟ ರಾಜ್ಯ ತತ್ತರಿಸಿದ್ದು 180ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.


'ಹಿಂಸೆಯಿಂದ ಮಣಿಪುರ ಹೊತ್ತಿ ಉರಿಯುತ್ತಿದೆ. ನನಗೆ ಗ್ರಾಮಕ್ಕೆ ಹೋಗಲಾಗುತ್ತಿಲ್ಲ. ಈ ಪದಕವನ್ನು ಅಲ್ಲಿ ನಮ್ಮನ್ನು ರಕ್ಷಿಸಿದವರಿಗೆ ಮತ್ತು ನೊಂದವರಿಗೆ ಸರ್ಮಪಿಸುತ್ತೇನೆ' ಎಂದು ರಜತ ಪದಕ ಗೆದ್ದ ನಂತರ ಅವರು ರೋಶಿಬಿನಾ ಪ್ರತಿಕ್ರಿಯಿಸಿದರು.

ರೋಶಿಬಿನಾ ಅವರು ಬುಧವಾರ ತಂದೆ–ತಾಯಿ ಜೊತೆ ಮಾತನಾಡಿದ್ದರು. ಹಿಂಸಾಚಾರದ ಬಗ್ಗೆ ತಲೆಕೆಡಿಸಿಕೊಳ್ಳದೇ ಫೈನಲ್ ಬಗ್ಗೆ ಗಮನಹರಿಸುವಂತೆ ಅವರು ಮಗಳಿಗೆ ತಿಳಿಸಿದ್ದರು.

'ಪಂದ್ಯದ ಬಗ್ಗೆಯಷ್ಟೇ ಗಮನವಿಡು. ಬೇರೆ ಕಡೆ ಯೋಚಿಸಬೇಡ. ನನ್ನ ಕುಟುಂಬ ಸುರಕ್ಷಿತವಾಗಿದೆ. ಊರಿನ ಹಿಂಸಾಚಾರದಿಂದ ನನ್ನ ಏಕಾಗ್ರತೆಗೆ ಭಂಗ ಬರಬಹುದೆಂದು ಕೋಚ್‌ಗಳು ಸಲಹೆ ನೀಡಿದ್ದರಿಂದ ನಾನು ಪೋಷಕರ ಜೊತೆ ಸದಾ ಮಾತನಾಡುತ್ತಿಲ್ಲ' ಎಂದು ಅವರು ಹೇಳಿದರು.



ಭಾರತದ ರೋಶಿಬಿನಾ ದೇವಿ (ಎಡ) ಮತ್ತು ಚೀನಾದ ವು ಷಿಯೋವಿ



ಜಿಮ್ನಾಸ್ಟಿಕ್ಸ್: ಪ್ರಣತಿಗೆ 8ನೇ ಸ್ಥಾನ

ಹಾಂಗ್‌ಝೌ (ಪಿಟಿಐ): ಭಾರತದ ಜಿಮ್ನಾಸ್ಟ್ ಪ್ರಣತಿ ನಾಯಕ್ ಅವರು ಗುರುವಾರ ಏಷ್ಯನ್ ಕ್ರೀಡಾಕೂಟದ ಮಹಿಳೆಯರ ಜಿಮ್ನಾಸ್ಟಿಕ್ಸ್ ವಾಲ್ಟ್ ವಿಭಾಗದ ಫೈನಲ್ ಸ್ಪರ್ಧೆಯಲ್ಲಿ ಎಡವಿದರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿ ಕಂಚು ಗೆದ್ದಿರುವ ಪಶ್ಚಿಮ ಬಂಗಾಳದ 28 ವರ್ಷದ ಆಟಗಾರ್ತಿ, ತನ್ನ ಎರಡು ವಾಲ್ಟ್‌ಗಳ ನಂತರ 12.350 ಅಂಕಗಳೊಂದಿಗೆ 8ನೇ ಸ್ಥಾನ ಪಡೆದರು.

ಪ್ರಣತಿ ತನ್ನ ಲ್ಯಾಂಡಿಂಗ್‌ನಲ್ಲಿ ಎಡವಿದರು. ಮೊದಲ ವಾಲ್ಟ್‌ನಲ್ಲಿ 12.100 ಅಂಕ ಸಂಪಾದಿಸಿದರೆ, ಎರಡನೇ ವಾಲ್ಟ್‌ನಲ್ಲಿ 12.600 ಅಂಕ ಗಳಿಸಿದರು. ಆದರೆ, ಪದಕದೆಡೆಗೆ ಸಾಗಲು ಈ ಅಂಕಗಳು ಸಾಕಾಗಲಿಲ್ಲ.

ಉತ್ತರ ಕೊರಿಯಾದ ಚಾಂಗೊಕ್ ಆನ್ ಮತ್ತು ಸೊನ್‌ಹ್ಯಾಂಗ್ ಕಿಮ್ ಅವರು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರೆ, ಚೀನಾದ ಲಿನ್ಮಿನ್ ಯು ಕಂಚಿನ ಪದಕ ಪಡೆದರು.

ನಿಶಾಂತ್, ಜೈಸ್ಮಿನ್‌ಗೆ ಸುಲಭ ಗೆಲುವು

ಬಾಕ್ಸಿಂಗ್: 51 ಕೆಜಿ ಸ್ಪರ್ಧೆಯಲ್ಲಿ ದೀಪಕ್ ನಿರ್ಗಮನ

ಹಾಂಗ್‌ಝೌ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ದೀಪಕ್ ಭೋರಿಯಾ ಅವರ ಏಷ್ಯನ್ ಗೇಮ್ಸ್ ಅಭಿಯಾನ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಸೋಲಿನೊಡನೆ ಅಂತ್ಯಗೊಂಡಿತು. ಆದರೆ ಭಾರತದ ಇನ್ನಿಬ್ಬರು ಬಾಕ್ಸರ್‌ಗಳು– ನಿಶಾಂತ್ ದೇವ್ ಮತ್ತು ಜೈಸ್ಮಿನ್ ಲಂಬೋರಿಯಾ ಅವರು ಗುರುವಾರ ಎಂಟರ ಘಟ್ಟವನ್ನು ಪ್ರವೇಶಿಸಿದರು.

ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದ ಜೈಸ್ಮಿನ್ ಮಹಿಳೆಯರ 60 ಕೆ.ಜಿ. ವಿಭಾಗದಲ್ಲಿ ಶಕ್ತಿಶಾಲಿ ಪ್ರಹಾರಗಳ ಮೂಲಕ ಸೌದಿ ಅರೇಬಿಯಾದ ಹದೀಲ್ ಘಜ್ವಾನ್ ಅಶೌರ್ ಅವರನ್ನು ಸೋಲಿಸಿ ಕ್ವಾರ್ಟರ್‌ಫೈನಲ್ ತಲುಪಿಸಿದರು. ಆರ್‌ಎಸ್‌ಸಿ (ರೆಫ್ರಿ ಸೆಣಸಾಟವನ್ನು ಕೊನೆ ಗೊಳಿಸಿದ) ಆಧಾರದಲ್ಲಿ ಅವರು ಜಯಗಳಿಸಿದರು. ಮೊದಲ ಸುತ್ತಿನಲ್ಲಿ 'ಬೈ' ಪಡೆದಿದ್ದ ಜೈಸ್ಮಿನ್ ಉತ್ತಮ ಲಯದಲ್ಲಿದ್ದು ಗೆಲುವಿಗೆ ತೆಗೆದುಕೊಂಡಿದ್ದು ಐದು ನಿಮಿಷ ಮಾತ್ರ. ಅವರ ಸೆಮಿಫೈನಲ್ ಎದುರಾಳಿ ಉತ್ತರ ಕೊರಿಯಾದ ವೊನ್ ಉಂಗ್‌ಯಾಂಗ್.

ಸುಲಭ ಜಯ: ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ನಿಶಾಂತ್ 71 ಕೆ.ಜಿ. ವಿಭಾಗದಲ್ಲಿ ವಿಯೆಟ್ನಾಮಿನ ಬುಯ್ ಫುವೊಕ್ ತುಂಗ್ ಅವರನ್ನು ನಾಕೌಟ್ ಆಧಾರದಲ್ಲಿ ಸೋಲಿಸಲು ತೆಗೆದುಕೊಂಡಿದ್ದು ಎರಡು ನಿಮಿಷಗಳನ್ನಷ್ಟೇ.

ಅವರು ಸೆಮಿಫೈನಲ್‌ನಲ್ಲಿ ಜಪಾನ್‌ನ ಒಕಾಝೂವ ಅವರನ್ನು ಎದುರಿಸುವರು.

ನಿಶಾಂತ್ ಮತ್ತು, ಜೈಸ್ಮಿನ್ ಇನ್ನೊಂದು ಪಂದ್ಯ ಗೆದ್ದರೆ ಅವರಿಗೆ ಪದಕಗಳು ಖಚಿತವಾಗಲಿವೆ. ಜೈಸ್ಮಿನ್ ಸೆಮಿಫೈನಲ್ ತಲುಪಿದರೆ ಪ್ಯಾರಿಸ್ ಒಲಿಂಪಿಕ್ಸ್‌ಗೆ 'ಟಿಕೆಟ್' ಸಿಗಲಿದೆ. ನಿಶಾಂತ್ ಅವರು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಬೇಕಾದರೆ ಫೈನಲ್ ತಲುಪಬೇಕಾಗುತ್ತದೆ.

ಆದರೆ 51 ಕೆ.ಜಿ. ವಿಭಾಗದಲ್ಲಿ ದೀಪಕ್ ಅದೃಷ್ಟಶಾಲಿಯಾಗಿರಲಿಲ್ಲ. ಅವರಿಗೆ 'ಡ್ರಾ'ದಲ್ಲಿ 2021ರ ಬ್ಯಾಂಟಮ್‌ವೇಟ್ ಚಾಂಪಿಯನ್ ಟೊಮೊಯಾ ತ್ಸುಬೊಯಿ (ಜಪಾನ್) ಬೇಗನೇ ಎದುರಾಗಿದ್ದು 1–4 ಅಂತರದಲ್ಲಿ ಸೋತರು. ಟೊಮೊಯಾ ಅವರು ಸರಣಿ ಪಂಚ್‌ಗಳ ಮೂಲಕ ದೀಪಕ್ ಅವರಿಗೆ ಆಕ್ರಮಣಕ್ಕೆ ಅವಕಾಶವನ್ನೇ ನೀಡಲಿಲ್ಲ.



ಜೈಸ್ಮಿನ್ ಲಂಬೋರಿಯಾ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಸಿಂಧು ಬಳಗ

ಹಾಂಗ್‌ಝೌ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು ನಾಯಕತ್ವದ ಭಾರತ ಮಹಿಳಾ ತಂಡವು ಏಷ್ಯನ್ ಗೇಮ್ಸ್ ಬ್ಯಾಡ್ಮಿಂಟನ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 3–0ಯಿಂದ ಮಂಗೋಲಿಯಾ ವಿರುದ್ಧ ಜಯಿಸಿತು.

ಎರಡು ಒಲಿಂಪಿಕ್ ಕೂಟಗಳಲ್ಲಿ ಪದಕ ಗೆದ್ದಿರುವ ಸಿಂಧು ಮೊದಲ ಪಂದ್ಯ ಆಡಿದರು. ಆ ಸಿಂಗಲ್ಸ್ ನಲ್ಲಿ ಅವರು 21–3, 21–3ರಿಂದ ಮಂಗೋಲಿಯಾದ ಮೈಗ್‌ಮಾರ್ಟಸೆರೆನ್ ಗನಾಬಾಟರ್ ವಿರುದ್ಧ ಗೆದ್ದರು. ಎರಡನೇ ಸಿಂಗಲ್ಸ್‌ನಲ್ಲಿ ಅಷ್ಮಿತಾ ಚಲಿಹಾ 21–2, 21–3ರಿಂದ ಕೆರ್ಲೆನ್ ಡಾರ್ಕ್‌ಬಾರ್ತ್ ವಿರುದ್ಧ ಜಯಿಸಿದರು. ಇನ್ನೊಂದು ಪಂದ್ಯದಲ್ಲಿ ಅನುಪಮಾ ಉಪಾಧ್ಯಾಯ 21–0, 21–2ರಿಂದ ಖುಲಾಂಗೂ ಬಾತರ್ ವಿರುದ್ಧ ಗೆದ್ದರು.

ಭಾರತವು ಕ್ವಾರ್ಟರ್‌ಫೈನಲ್‌ನಲ್ಲಿ ಥಾಯ್ಲೆಂಡ್ ತಂಡವನ್ನು ಎದುರಿಸಲಿದೆ. ಮಾಜಿ ವಿಶ್ವ ಚಾಂಪಿಯನ್ ರಚಾನೊಕ್ ಇಂಟನಾನ್, ಪಾರ್ನ್‌ಪಾವಿ ಚೋಚುವಾಂಗ್ ಮತ್ತು ಸುಪಾನಿದಾ ಕ್ಯಟೆಹಾಂಗ್ ಥಾಯ್ಲೆಂಡ್ ತಂಡದಲ್ಲಿದ್ದಾರೆ.



ಪಿ.ವಿ. ಸಿಂಧು

ಪದಕ ಪಟ್ಟಿ (ಅಗ್ರ 10 ದೇಶ)

ರ್‍ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	90	51	26	167
2	ದಕ್ಷಿಣ ಕೊರಿಯಾ	24	23	39	86
3	ಜಪಾನ್	18	30	30	78
4	ಉಜ್ಬೇಕಿಸ್ತಾನ	6	10	15	31
5	ಭಾರತ	6	8	11	25
6	ಥಾಯ್ಲೆಂಡ್	6	3	9	18
7	ಹಾಂಗ್‌ಕಾಂಗ್	5	12	15	32
8	ಚೀನಾ ತೈಪೆ	4	4	6	14
9	ಇರಾನ್	3	9	10	22
10	ಉತ್ತರ ಕೊರಿಯಾ	3	5	4	12

ಸ್ಕ್ವಾಷ್: ತಂಡ ವಿಭಾಗದಲ್ಲಿ ಭಾರತಕ್ಕೆ ಪದಕ ಖಚಿತ

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳಾ ತಂಡಗಳು ಏಷ್ಯನ್ ಗೇಮ್ಸ್ ಸ್ಕ್ವಾಷ್ ತಂಡ ವಿಭಾಗಗಳಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಡುವ ಮೂಲಕ ಗುರುವಾರ ಪದಕ ಖಚಿತಪಡಿಸಿಕೊಂಡವು.

ಭಾರತ ಪುರುಷರ ತಂಡ 'ಎ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ 3–0 ಯಿಂದ ನೇಪಾಳ ತಂಡವನ್ನು ಸೋಲಿಸಿತು. ಆಡಿದ ಐದು ಪಂದ್ಯಗಳಲ್ಲಿ ತಂಡ ನಾಲ್ಕರಲ್ಲಿ ಜಯಗಳಿಸಿ ಎರಡನೇ ಸ್ಥಾನ ಪಡೆಯಿತು. ಪಾಕಿಸ್ತಾನ ಐದೂ ಪಂದ್ಯಗಳಲ್ಲಿ ಜಯಗಳಿಸಿ ಅಗ್ರಸ್ಥಾನ ಪಡೆಯಿತು.

ಮಹಿಳೆಯರ ತಂಡ 'ಬಿ' ಗುಂಪಿನ ಕೊನೆಯ ಪಂದ್ಯದಲ್ಲಿ 0–3 ರಿಂದ ಮಲೇಷ್ಯಾ ಎದುರು ಸೋಲನುಭವಿಸಿತು. ಇದಕ್ಕೆ ಮೊದಲು ಆಡಿದ ಮೂರೂ ಪಂದ್ಯಗಳಲ್ಲಿ ಜಯಗಳಿಸಿದ್ದು ಎರಡನೇ ಸ್ಥಾನ ಪಡೆಯಿತು. ಮಲೇಷ್ಯಾ ಗುಂಪಿನಲ್ಲಿ ಅಜೇಯವಾಗುಳಿಯಿತು.

ಭಾರತದ ಅನುಭವಿ ಆಟಗಾರ್ತಿ ಜ್ಯೋಷ್ನಾ ಚಿಣ್ಣಪ್ಪ 6–11, 2–11, 8–11 ರಿಂದ ಮಲೇಷ್ಯಾದ ಸುಬ್ರಮಣಿಯಂ ಶಿವಸಂಗರಿ ಎದುರು 21 ನಿಮಿಷಗಳಲ್ಲಿ ಸೋತರು. ಎರಡನೇ ಪಂದ್ಯದಲ್ಲಿ ಕಾಮನ್ವೆಲ್ತ್ ಗೇಮ್ಸ್ ಸ್ವರ್ಣ ವಿಜೇತೆ ಐಫಾ ಬಿಂಟಿ ಅಝ್ಮಾನ್ ಎದುರು ಭಾರತದ ತನ್ವಿ ಖನ್ನಾ 2–1 ಮುನ್ನಡೆಯಲ್ಲಿದ್ದರೂ ಅದನ್ನು ಬಳಸಿಕೊಳ್ಳಲಿಲ್ಲ. ಐಫಾ ಅಂತಿಮವಾಗಿ 9–11, 11–1, 7–11, 13–11, 11–5 ರಿಂದ ಜಯಗಳಿಸಿದರು. ಇನ್ನೊಂದು ಪಂದ್ಯದಲ್ಲಿ 15 ವರ್ಷದ ಅನಾಹತ್ ಸಿಂಗ್ ನೇರ ಆಟಗಳಿಂದ (7–11, 7–11, 12–14) ಮಲೇಷ್ಯಾದ ರಚೆಲ್ ಮೇ ಅರ್ನಾಲ್ಡ್ ಎದುರು ಸೋತರು.

ಪುರುಷರ ವಿಭಾಗದಲ್ಲಿ ಅಭಯ್ ಸಿಂಗ್ 11–2, 11–4, 11–1 ರಿಂದ ಅಮೃತ್ ಥಾಪಾ ಅವರನ್ನು 17 ನಿಮಿಷಗಳಲ್ಲಿ ಸೋಲಿಸಿದರು. ಮಹೇಶ್ ಮಂಗಾವಕರ್ 11–2, 11–3, 11–3 ರಿಂದ ಅರಹಂತ್ ಕೇಸರ್ ಸಿಂಹ ಅವರನ್ನು, ಹರಿಂದರ್ ಪಾಲ್ ಸಿಂಗ್ ಸಂಧು 11–1, 11–2, 11–6 ರಿಂದ ಅಮಿರ್ ಅವರನ್ನು ಸುಲಭವಾಗಿ ಮಣಿಸಿದರು.

ಟೆನಿಸ್ ಮಿಶ್ರ ಡಬಲ್ಸ್: ಸೆಮಿಗೆ ಬೋಪಣ್ಣ– ರುತುಜಾ

ಚಿನ್ನದತ್ತ ರಾಮಕುಮಾರ್- ಸಾಕೇತ್

ಹಾಂಗ್‌ಝೌ (ಪಿಟಿಐ): ಭಾರತದ ರಾಮಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ ಅವರು ದಕ್ಷಿಣ ಕೊರಿಯಾದ ಜೋಡಿಯ ಪ್ರಬಲ ಹೋರಾಟವನ್ನು ಬದಿಗೊತ್ತಿ ಏಷ್ಯನ್ ಗೇಮ್ಸ್ ಟೆನಿಸ್ ಪುರುಷರ ಡಬಲ್ಸ್‌ನಲ್ಲಿ ಗುರುವಾರ ಫೈನಲ್ ತಲುಪಿದರು. ಚಿನ್ನಕ್ಕೆ ಈಗ ಒಂದೇ ಹೆಜ್ಜೆ ಬಾಕಿಯಿದೆ.

ಸೆಮಿಫೈನಲ್ ಪಂದ್ಯದ ಮೊದಲ ಸೆಟ್‌ನಲ್ಲಿ ಸೋತ ನಂತರ ಪುಟಿದೆದ್ದ ಕೊರಿಯಾ ಹೋರಾಟ ತೋರಿದರೂ, ಭಾರತೀಯ ಜೋಡಿ ಅಂತಿಮವಾಗಿ ಮೇಲುಗೈ ಸಾಧಿಸಿ 6–1, 6–7 (8), 10–0 ಯಿಂದ ಗೆಲುವಿನ ನಗೆ ಬೀರಿತು. ಪಂದ್ಯ 96 ನಿಮಿಷಗಳವರೆಗೆ ನಡೆಯಿತು.

ಭಾರತದ ಜೋಡಿ ಚಿನ್ನದ ಪದಕಕ್ಕೆ ನಡೆಯುವ ಹೋರಾಟದಲ್ಲಿ ಚೀನಾ ತೈಪೆಯ ಸಿಯಾವು ಸು ಯು –ಜೇಸನ್ ಜಂಗ್ ಜೋಡಿಯನ್ನು ಎದುರಿಸಲಿದೆ. ಇವರಿಬ್ಬರು ಇನ್ನೊಂದು ಸೆಮಿಫೈನಲ್‌ನಲ್ಲಿ ಥಾಯ್ಲೆಂಡ್‌ನ ಪ್ರಚ್ಯ ಇಸಾರೊ– ಮ್ಯಾಕ್ಸಿಮಸ್ ಪಾರಾಪೋಲ್ ಜೋನ್ಸ್ ಜೋಡಿಯನ್ನು 4–6, 7–6 (5), 10–2 ರಿಂದ ಸೋಲಿಸಿದರು.

ಭಾರತ 2018ರ ಜಕಾರ್ತಾ ಕ್ರೀಡೆಗಳಲ್ಲಿ ಟೆನಿಸ್ ಪುರುಷರ ಡಬಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿತ್ತು. ಆಗ ರೋಹನ್ ಬೋಪಣ್ಣ ಮತ್ತು ದಿವಿಜ್ ಶರಣ್ ಆ ತಂಡದಲ್ಲಿದ್ದರು. ಈ ಬಾರಿ ಬೋಪಣ್ಣ– ಯುಕಿ ಭಾಂಬ್ರಿ ಅವರು ಬೇಗನೇ ನಿರ್ಗಮಿಸಿದ್ದಾರೆ.

ಆದರೆ ಮಿಕ್ಸೆಡ್ ಡಬಲ್ಸ್‌ನಲ್ಲಿ ಬೋಪಣ್ಣ ಅವರು ರುತುಜಾ ಭೋಸ್ಲೆ ಜೊತೆ ಆಡುತ್ತಿದ್ದು ಪದಕದ ಸಾಧ್ಯತೆ ಜೀವಂತಾಗಿಟ್ಟಿದ್ದಾರೆ. ಈ ಜೋಡಿ ಕ್ವಾರ್ಟರ್‌ಫೈನಲ್‌ನಲ್ಲಿ ಕಜಕಸ್ತಾನದ ಜಿಬೆಕ್ ಕುಲಂಬೆಯೇವಾ– ಗ್ರಿಗರಿ ಲೊಮಾಕಿನ್ ಜೋಡಿಯನ್ನು 1 ಗಂಟೆ 24 ನಿಮಿಷಗಳ ಹೋರಾಟದ ನಂತರ 7–5, 6–3 ರಿಂದ ಸೋಲಿಸಿತು.



ಭಾರತದ ಸಾಕೇತ್ ಮೈನೇನಿ ಮತ್ತು ರಾಮಕುಮಾರ್ ರಾಮನಾಥನ್ –ಪಿಟಿಐ ಚಿತ್ರ

ಏಷ್ಯನ್ ಕ್ರೀಡಾಕೂಟದಲ್ಲಿ ಇಂದು

ಗಾಲ್ಫ್: ಪುರುಷರ ಮತ್ತು ಮಹಿಳೆಯರ ವಿಭಾಗ; ವೈಯಕ್ತಿಕ ಮತ್ತು ತಂಡ ಸ್ಪರ್ಧೆ; ಎರಡನೇ ಸುತ್ತು; ಬೆಳಿಗ್ಗೆ 4 ಮಹಿಳೆಯರ ವಿಭಾಗ; ವೈಯಕ್ತಿಕ ಮತ್ತು ತಂಡ ಸ್ಪರ್ಧೆ; ಎರಡನೇ ಸುತ್ತು; ಬೆಳಿಗ್ಗೆ 4

ಅಥ್ಲೆಟಿಕ್ಸ್: ಪುರುಷರ 20 ಕಿ.ಮೀ. ರೇಸ್‌ವಾಕ್; ಬೆಳಿಗ್ಗೆ 4.30. ಮಹಿಳೆಯರ 20 ಕಿ.ಮೀ. ರೇಸ್‌ವಾಕ್; ಬೆಳಿಗ್ಗೆ 4.4. ಮಹಿಳೆಯರ 400 ಮೀ ಓಟ; ಸಂಜೆ 4.30. ಪುರುಷರ 400 ಮೀ ಓಟ; ಸಂಜೆ 4.55. ಮಹಿಳೆಯರ ಹ್ಯಾಮರ್ ಥ್ರೋ; ಸಂಜೆ 4.40. ಮಹಿಳೆಯರ ಶಾಟ್‌ಪಟ್; ಸಂಜೆ 6.15

ಶೂಟಿಂಗ್: ವೈಯಕ್ತಿಕ ಮತ್ತು ತಂಡ ಸ್ಪರ್ಧೆ; ಬೆಳಿಗ್ಗೆ 6.30

ಬ್ಯಾಡ್ಮಿಂಟನ್: ಮಹಿಳಾ ತಂಡದ ಕ್ವಾರ್ಟರ್ ಫೈನಲ್; ಭಾರತ– ಥಾಯ್ಲೆಂಡ್; ಬೆಳಿಗ್ಗೆ 6.30 ಪುರುಷರ ತಂಡದ ಕ್ವಾರ್ಟರ್ ಫೈನಲ್; ಭಾರತ– ನೇಪಾಳ; ಸಂಜೆ 5

ಟೇಬಲ್ ಟೆನಿಸ್: ಮಹಿಳಾ ಸಿಂಗಲ್ಸ್ ಮತ್ತು ಡಬಲ್ಸ್, ಪುರುಷರ ಸಿಂಗಲ್ಸ್ ಮತ್ತು ಡಬಲ್ಸ್; ಬೆಳಿಗ್ಗೆ 8.15ರಿಂದ

ಸ್ಕ್ವಾಷ್: ಮಹಿಳೆಯರ ಸೆಮಿಫೈನಲ್; ಭಾರತ– ಹಾಂಗ್‌ಕಾಂಗ್; ಬೆಳಿಗ್ಗೆ 8.30 ಪುರುಷರ ಸೆಮಿಫೈನಲ್; ಮಧ್ಯಾಹ್ನ 2

ಟೆನಿಸ್: ಪುರುಷರ ಡಬಲ್ಸ್; ಫೈನಲ್; ಬೆಳಿಗ್ಗೆ 10 (ರಾಮಕುಮಾರ್ ರಾಮನಾಥನ್/ ಸಾಕೇತ್ ಮೈನೇನಿ) ಮಿಕ್ಸೆಡ್ ಡಬಲ್ಸ್; ಸೆಮಿಫೈನಲ್; ಬೆಳಿಗ್ಗೆ 10

ಬಾಕ್ಸಿಂಗ್: ಮಹಿಳೆಯರ 57 ಕೆಜಿ ವಿಭಾಗ; ಮಧ್ಯಾಹ್ನ 12 (ಪರ್ವೀನ್ ಹೂಡಾ). ಪುರುಷರ 80 ಕೆಜಿ ವಿಭಾಗ; ಮಧ್ಯಾಹ್ನ 1.45; ಲಕ್ಷ್ಯ ಚಹಾರ್ ಮಹಿಳೆಯರ 50 ಕೆಜಿ ವಿಭಾಗ; ಕ್ವಾರ್ಟರ್ ಫೈನಲ್; ಸಂಜೆ 4.45 (ನಿಖತ್ ಝರೀನ್)

ಚೆಸ್: ಪುರುಷರ ಮತ್ತು ಮಹಿಳೆಯರ ತಂಡ; ಮಧ್ಯಾಹ್ನ 12.30

ಮಹಿಳೆಯರ ಹ್ಯಾಂಡ್‌ಬಾಲ್: ಭಾರತ– ಚೀನಾ; ಮಧ್ಯಾಹ್ನ 3.30

ಮಹಿಳೆಯರ ಹಾಕಿ: ಭಾರತ– ಮಲೇಷ್ಯಾ; ಸಂಜೆ 4

ಪುರುಷರ 3x3 ಬ್ಯಾಸ್ಕೆಟ್‌ಬಾಲ್: ಭಾರತ– ಚೀನಾ: ಸಂಜೆ 5.20

ಮಹಿಳೆಯರ ಬ್ಯಾಸ್ಕೆಟ್‌ಬಾಲ್: ಭಾರತ– ಮಂಗೋಲಿಯಾ; ಸಂಜೆ 5.30

ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಈಜು: ಫೈನಲ್‌ಗೆ ಭಾರತ ರಿಲೆ ತಂಡಗಳು

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳಾ ರಿಲೆ ತಂಡಗಳು ಏಷ್ಯನ್ ಗೇಮ್ಸ್ ಈಜು ಸ್ಪರ್ಧೆಯ ಫೈನಲ್ ಪ್ರವೇಶಿಸಿವೆ. ಇದರೊಂದಿಗೆ ರಾಷ್ಟ್ರೀಯ ದಾಖಲೆಗಳನ್ನೂ ನಿರ್ಮಿಸಿದವು.

ಗುರುವಾರ ನಡೆದ ಅರ್ಹತಾ ಸುತ್ತಿನಲ್ಲಿ ಪುರುಷರ 4X100 ಮೀಟರ್ಸ್ ಫ್ರೀಸ್ಟೈಲ್ ರಿಲೆ ಹಾಗೂ ಮಹಿಳೆಯರ ಫ್ರೀಸ್ಟೈಲ್ 4X200 ಮೀಟರ್ಸ್ ರಿಲೆ ತಂಡಗಳು ಫೈನಲ್ ಪ್ರವೇಶಿಸಿದವು. ಒಲಿಂಪಿಯನ್ ಶ್ರೀಹರಿ ನಟರಾಜ್, ತನಿಷ್ ಜಾರ್ಜ್ ಮ್ಯಾಥ್ಯೂ, ಅನಿಲ್ ಕುಮಾರ್ ಶೈಲಜ ಮತ್ತು ವಿಶಾಲ್ ಗ್ರೆವಾಲ್ ಅವರಿದ್ದ ಪುರುಷರ ತಂಡವು ಹೀಟ್ಸ್‌ನಲ್ಲಿ 3ನಿ, 21.22ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಐದನೇ ಸ್ಥಾನ ಪಡೆಯಿತು.

2019ರಲ್ಲಿ ಶ್ರೀಹರಿ, ಸಜನ್ ಪ್ರಕಾಶ್, ವೀರಧವಳ್ ಖಾತೆ ಮತ್ತು ಅನಿಲ್ ಕುಮಾರ್ ಅವರಿದ್ದ ತಂಡವು 3ನಿಮಿಷ, 23.72ಸೆಕೆಂಡುಗಳಲ್ಲಿ ಗುರಿ ತಲುಪಿ ಮಾಡಿದ್ದ ದಾಖಲೆಯನ್ನು ಈ ಬಾರಿಯ ತಂಡವು ಮೀರಿತು.

ಮಹಿಳೆಯರ 4X200 ಮೀಟರ್ಸ್ ಫ್ರೀಸ್ಟೈಲ್ ರಿಲೆಯಲ್ಲಿ ಧಿನಿಧಿ ದೇಶಿಂಗು, ಶಿವಾಂಗಿ ಶರ್ಮಾ, ವೃತಿ ಅಗರವಾಲ್ ಮತ್ತು ಹಷಿಕಾ ರಾಮಚಂದ್ರ ಅವರ ಬಳಗವು 8ನಿ,39.64ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಹೀಟ್ಸ್‌ನಲ್ಲಿ ಹತ್ತು ತಂಡಗಳು ಭಾಗವಹಿಸಿದ್ದವು. ಅದರಲ್ಲಿ ಎಂಟನೇ ಸ್ಥಾನ ಪಡೆದ ಭಾರತ ತಂಡವು ಫೈನಲ್ ಪ್ರವೇಶಿಸಿತ್ತು.

ಈ ವರ್ಷದ ಆರಂಭದಲ್ಲಿ ನಡೆದಿದ್ದ ರಾಷ್ಟ್ರೀಯ ಕೂಟದಲ್ಲಿ ಹಷಿಕಾ, ಧಿನಿಧಿ, ವಿಹಿತಾ ನಯನಾ ಮತ್ತು ಶಿರಿನ್ ಅವರಿದ್ದ ತಂಡವು 8ನಿಮಿ, 40.89ಸೆಕೆಂಡುಗಳಲ್ಲಿ ಗುರಿ ಮುಟ್ಟಿತ್ತು. ಆ ದಾಖಲೆಯನ್ನು ಭಾರತ ತಂಡವು ಇಲ್ಲಿ ಉತ್ತಮಪಡಿಸಿಕೊಂಡಿತು.



ಶ್ರೀಹರಿ ನಟರಾಜ್

ಪುರುಷರ ಹಾಕಿ: ಎರಡು ಗೋಲು ಗಳಿಸಿದ ಅಭಿಷೇಕ್

ಭಾರತಕ್ಕೆ ಮಣಿದ ಜಪಾನ್

ಹಾಂಗ್‌ಝೌ (ಪಿಟಿಐ): ಉದಯೋನ್ಮುಖ ಆಟಗಾರ ಅಭಿಷೇಕ್ ಅವರ ಎರಡು ಗೋಲುಗಳ ನೆರವಿನಿಂದ ಭಾರತ ತಂಡ ಗುರುವಾರ ನಡೆದ ಏಷ್ಯನ್ ಗೇಮ್ಸ್ ಪುರುಷರ ಹಾಕಿ ಪಂದ್ಯದಲ್ಲಿ 4–2 ಗೋಲುಗಳಿಂದ ಹಾಲಿ ಚಾಂಪಿಯನ್ ಜಪಾನ್ ತಂಡವನ್ನು ಸೋಲಿಸಿತು. ಸತತ ಮೂರನೇ ಗೆಲುವಿನೊಡನೆ ಭಾರತ ಸೆಮಿಫೈನಲ್‌ನತ್ತ ದೊಡ್ಡ ಹೆಜ್ಜೆಯಿಟ್ಟಿತು.

‘ಎ’ ಗುಂಪಿನ ಈ ಪಂದ್ಯದಲ್ಲಿ ಅಭಿಷೇಕ್ 13 ಮತ್ತು 48ನೇ ನಿಮಿಷ ಎರಡು ಫೀಲ್ಡ್ ಗೋಲುಗಳನ್ನು ಗಳಿಸಿದರು. ಮನ್‌ದೀಪ್ (24ನೇ ನಿಮಿಷ) ಮತ್ತು ಅಮಿತ್ ರೋಹಿದಾಸ್ (34ನೇ ನಿಮಿಷ) ತಲಾ ಒಂದು ಗೋಲು ಗಳಿಸಿದರು.

ಭಾರತ ಸುಲಭ ಗೆಲುವಿನೊಡನೆ ಪಂದ್ಯ ಮುಗಿಸಲಿದೆ ಎನ್ನುವಷ್ಟರಲ್ಲಿ ಜಪಾನ್ ಪ್ರತಿಹೋರಾಟ ತೋರಿ ಕೊನೆಯ ಮೂರು ನಿಮಿಷಗಳಲ್ಲಿ ಸೋಲಿನ ಅಂತರವನ್ನು ತಗ್ಗಿಸಿತು. 57ನೇ ನಿಮಿಷ ಜೆನ್ಕಿ ಮಿತಾನಿ ಮತ್ತು ಕೊನೆಯ ನಿಮಿಷ ರಿಯೊಸಿ ಕೇಟೊ ಅವರು ಗೋಲು ಗಳಿಸಿದರು.

ಭಾರತ ಶನಿವಾರ ನಡೆಯುವ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.


ಭಾರತ ತಂಡದ ಆಟಗಾರರ ಸಂಭ್ರಮ

ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತ ಪಂದ್ಯದ ಬಹುಭಾಗ ಮೇಲುಗೈ ಸಾಧಿಸಿತ್ತು. ಜಪಾನ್ ಆಗೊಮ್ಮೆ– ಈಗೊಮ್ಮೆ ಪ್ರತಿಹೋರಾಟ ಪ್ರದರ್ಶಿಸಿತು.

ಈ ಪಂದ್ಯಕ್ಕೆ ಮೊದಲು ಎರಡು ಭರ್ಜರಿ ಜಯಗಳಿಸಿದ್ದ ಭಾರತ ವಿಶ್ವಾಸದಿಂದ ಪಂದ್ಯ ಆರಂಭಿಸಿತು. ಎರಡು ಪೆನಾಲ್ಟಿ ಕಾರ್ನರ್‌ಗಳು ವ್ಯರ್ಥವಾದ ಬಳಿಕ ಅಭಿಷೇಕ್ ತಂಡಕ್ಕೆ ಮುನ್ನಡೆ ಒದಗಿಸಿದರು. ಹಾರ್ದಿಕ್ ಸಿಂಗ್ ಅವರ ಪಾಸ್‌ನಲ್ಲಿ, ಗೋಲಿನ ಬಳಿ ಹೊಂಚುಹಾಕುತ್ತಿದ್ದ ಅಭಿಷೇಕ್ ‘ರಿವರ್ಸ್ ಸ್ಟಿಕ್’ ಮೂಲಕ ಗೋಲು ಗಳಿಸಿ ಮುನ್ನಡೆಯನ್ನು ಹೆಚ್ಚಿಸಿದರು.

24ನೇ ನಿಮಿಷ ಮನ್‌ದೀಪ್ ಅವರು ನೀಲಕಂಠ ಅವರ ಪಾಸ್‌ನಲ್ಲಿ ಪೂರ್ಣ ಡೈವ್ ಹೊಡೆದು ಚೆಂಡನ್ನು ಗುರಿಮುಟ್ಟಿಸಿದರು. ವಿರಾಮದ ನಂತರ ಬೆನ್ನುಬೆನ್ನಿಗೆ ಪೆನಾಲ್ಟಿ ಕಾರ್ನರ್‌ಗಳು ದೊರೆತವು. ಇದರಲ್ಲಿ ಎರಡನೇ ಅವಕಾಶದಲ್ಲಿ ಅಮಿತ್ ರೋಹಿದಾಸ್ ಅವರ ಶಕ್ತಿಶಾಲಿ ‘ಡ್ರ್ಯಾಗ್‌ಫ್ಲಿಕ್’ನಲ್ಲಿ ಚೆಂಡು ಗೋಲುಪೆಟ್ಟಿಗೆಯ ಬಲಮೂಲೆ ಸೇರಿತು.

ಅಂತಿಮ ಕ್ವಾರ್ಟರ್‌ನ ಮೂರನೇ ನಿಮಿಷ ಮನ್‌ದೀಪ್ ಅವರ ನೆರವಿನೊಡನೆ ಅಭಿಷೇಕ್ ಭಾರತದ ಮುನ್ನಡೆಯನ್ನು 4–0ಗೆ ಹೆಚ್ಚಿಸಿದರು. ಇಷ್ಟರ ಮಧ್ಯೆಯೂ ಜಪಾನ್ ಆಟಗಾರರು ಹತಾಶರಾಗಲಿಲ್ಲ. ಕೊನೆಯ ನಾಲ್ಕು ನಿಮಿಷಗಳಿದ್ದಾಗ ಮೂರು ಪೆನಾಲ್ಟಿ ಕಾರ್ನರ್ ಅವಕಾಶಗಳು ಒದಗಿದವು. ಮೂರನೇ ಅವಕಾಶವನ್ನು ಮಿತಾನಿ ಗೋಲಾಗಿ ಪರಿವರ್ತಿಸಿದರು. ಪಂದ್ಯ ಇನ್ನೇನು ಮುಗಿಯಲಿದೆ ಎನ್ನುವಷ್ಟರಲ್ಲಿ ಪ್ರತಿದಾಳಿಯಲ್ಲಿ ಕೇಟೊ ಅವರು ಸೋಲಿನ ಅಂತರವನ್ನು ಇನ್ನಷ್ಟು ತಗ್ಗಿಸಿದರು.

ನೀರಜ್ ಚೋಪ್ರಾ ಆಕರ್ಷಣೆ

ಅಥ್ಲೆಟಿಕ್ಸ್ ಇಂದಿನಿಂದ: ಭಾರತಕ್ಕೆ ಪದಕಗಳ ಸಿಂಹಪಾಲು ಗಳಿಕೆಯ ವಿಶ್ವಾಸ

ಹಾಂಗ್‌ಝೌ (ಪಿಟಿಐ): ಒಲಿಂಪಿಕ್ಸ್ ಮತ್ತು ವಿಶ್ವ ಚಾಂಪಿಯನ್ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ನಾಯಕತ್ವದ ಭಾರತ ತಂಡವು ಶುಕ್ರವಾರ ಆರಂಭವಾಗಲಿರುವ ಅಥ್ಲೆಟಿಕ್ಸ್‌ನಲ್ಲಿ ಕಣಕ್ಕಿಳಿಯಲಿದೆ.

65 ಅಥ್ಲೀಟ್‌ಗಳ ತಂಡವು ಕನಿಷ್ಠ 25 ಪದಕಗಳನ್ನು ಜಯಿಸುವ ಭರ್ತಿ ವಿಶ್ವಾಸದಲ್ಲಿದೆ. ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) 68 ಅಥ್ಲೀಟ್‌ಗಳ ತಂಡವನ್ನು ಪ್ರಕಟಿಸಿತ್ತು. ಆದರೆ ಮೂವರು ಗಾಯದ ಸಮಸ್ಯೆಯಿಂದ ಹೊರನಡೆದರು.

2018ರಲ್ಲಿ ಜಕಾರ್ತದಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಅಥ್ಲೀಟ್‌ಗಳು 20 (8 ಚಿನ್ನ, 9 ಬೆಳ್ಳಿ, 3 ಕಂಚು) ಪದಕಗಳನ್ನು ಜಯಿಸಿದ್ದರು. ಆಗ 70 ಮಂದಿ ಭಾಗವಹಿಸಿದ್ದರು.

‘ಈ ಸಲ ಅಥ್ಲೆಟಿಕ್ಸ್‌ನಲ್ಲಿಯೇ 25 ಪದಕಗಳನ್ನು ಗೆಲ್ಲುವ ಗುರಿ ಇಟ್ಟುಕೊಂಡಿದ್ದೇವೆ. ಅದಕ್ಕಿಂತ ಹೆಚ್ಚು ಬಂದರೆ ಬೋನಸ್ ಆಗಲಿದೆ’ ಎಂದು ಎಎಫ್‌ಐ ಹೇಳಿದೆ.

ನೀರಜ್ ಚೋಪ್ರಾ(ಜಾವೆಲಿನ್),


ಭಾರತದ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ

ತಜೀಂದರ್ ಪಾಲ್ (ಶಾಟ್‌ಪಟ್), ಅವಿನಾಶ್ ಸಬ್ಳೆ (3000 ಮೀ ಸ್ಟೀಪಲ್ ಚೇಸ್), ಪುರುಷ ಹಾಗೂ ಮಹಿಳಾ ರಿಲೆ (4X400 ಮೀ) ತಂಡಗಳ ಮೇಲೆ ಪದಕ ಗೆಲುವಿನ ನಿರೀಕ್ಷೆ ಇದೆ. ತೂರ್ ಮತ್ತು ಪುರುಷರ ರಿಲೆ ತಂಡಗಳು ಏಷ್ಯನ್ ಶ್ರೇಷ್ಠ ದಾಖಲೆ ಹೊಂದಿವೆ.

25 ವರ್ಷದ ನೀರಜ್ ಈಚೆಗಷ್ಟೇ ವಿಶ್ವ ಚಾಂಪಿಯನ್ ಆಗಿದ್ದರು. 2021ರಲ್ಲಿ ಟೋಕಿಯೊದಲ್ಲಿ ಒಲಿಂಪಿಕ್ ಕೂಟದ ಚಿನ್ನ ಕೂಡ ಜಯಿಸಿದ್ದರು. 2018ರ ಏಷ್ಯಾ ಕೂಟದಲ್ಲಿಯೂ ಅವರು ಚಾಂಪಿಯನ್ ಆಗಿದ್ದರು. ಪಾಕಿಸ್ತಾನದ ಜಾವೆಲಿನ್ ಅಥ್ಲೀಟ್ ಅರ್ಷದ್ ನದೀಂ ಅವರು ನೀರಜ್‌ಗೆ ಸ್ಪರ್ಧೆಯೊಡ್ಡಲು ಸಿದ್ಧರಾಗಿದ್ದಾರೆ. ಈ ವಿಭಾಗದಲ್ಲಿ ಭಾರತದ ಕಿಶೋರ್ ಜೇನಾ ಕೂಡ ಸ್ಪರ್ಧೆಯಲ್ಲಿದ್ದಾರೆ.

ಪುರುಷರ ಲಾಂಗ್ ಜಂಪ್‌ನಲ್ಲಿ ಮುರಳಿ ಶ್ರೀಶಂಕರ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯಿಸುವಲ್ಲಿ ವಿಫಲರಾಗಿದ್ದರು. ಆದರೆ ಇಲ್ಲಿ ಅವರು ಪುಟಿದೇಳುವ ನಿರೀಕ್ಷೆ ಇದೆ. 8.41 ಮೀಟರ್ ದೂರ ಜಿಗಿಯುವ ಸಮರ್ಥರು ಅವರಾಗಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಜ್ಯೋತಿ ಯರಾಜಿ(100 ಮೀ ಹರ್ಡಲ್ಸ್), ವಿತ್ಯಾ ರಾಮರಾಜ್ (400 ಮೀ ಹರ್ಡಲ್ಸ್), ಶೈಲಿ ಸಿಂಗ್ (ಲಾಂಗ್ ಜಂಪ್), ಪಾರುಲ್ ಚೌಧರಿ (3000ಮೀ ಸ್ಟೀಪಲ್ ಚೇಸ್), ಸ್ವಪ್ನಾ ಬರ್ಮನ್ (ಹೆಪ್ಟಾಥ್ಲಾನ್), ಪ್ರಿಯಾಂಕಾ ಗೋಸ್ವಾಮಿ (ರೇಸ್ ವಾಕಿಂಗ್),, ರಚನಾ ಕುಮಾರಿ ಮತ್ತು ತಾನ್ಯಾ ಚೌಧರಿ (ಹ್ಯಾಮರ್ ಥ್ರೋ) ಅವರು ಪದಕ ಜಯದ ಭರವಸೆಯಲ್ಲಿದ್ದಾರೆ.

ಫುಟ್‌ಬಾಲ್: ಸೌದಿ ಅರೇಬಿಯಾ ತಂಡಕ್ಕೆ ಮಣಿದ ಚೆಟ್ರಿ ಬಳಗ

ಹಾಂಗ್‌ಝೌ (ಪಿಟಿಐ): ಪ್ರಬಲ ಸೌದಿ ಅರೇಬಿಯಾ ತಂಡ, ಏಷ್ಯನ್ ಕ್ರೀಡಾಕೂಟದ ಫುಟ್‌ಬಾಲ್ ಸ್ಪರ್ಧೆಯ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಗುರುವಾರ ಪೂರ್ಣ ಸಾಮರ್ಥ್ಯ ತೊಡಗಿಸದಿದ್ದರೂ ಭಾರತ ತಂಡವನ್ನು 2–0 ಗೋಲುಗಳಿಂದ ಸೋಲಿಸಿತು.

ಫಾರ್ವರ್ಡ್ ಆಟಗಾರ ಮೊಹಮ್ಮದ್ ಖಲೀಲ್ ಮರಾನ್ ಅವರು 51 ಮತ್ತು 57ನೇ ನಿಮಿಷ ಗಳಿಸಿದ 2 ಗೋಲುಗಳು ಸುನಿಲ್ ಚೆಟ್ರಿ ನೇತೃತ್ವದ ತಂಡದ ಸವಾಲನ್ನು ಅಂತ್ಯಗೊಳಿಸಿದವು.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಕೊನೆಗಳಿಗೆಯಲ್ಲಿ ತಂಡವನ್ನು ಸಿದ್ಧಗೊಳಿಸಿ ಕಳುಹಿಸಿದರೂ, ಅದು ಟೂರ್ನಿಯಲ್ಲಿ ತೋರಿದ ಪ್ರದರ್ಶನ ಕಳಪೆಯೇನೂ ಆಗಿರಲಿಲ್ಲ ಎಂಬುದು ಸೋಲಿನಲ್ಲೂ ಸಮಾಧಾನಪಟ್ಟುಕೊಳ್ಳಬಹುದಾದ ವಿಷಯ ಎನಿಸಿತು. ಐಎಸ್‌ಎಲ್ ನಡೆಯುತ್ತಿರುವ ಕಾರಣ ಕ್ಲಬ್‌ಗಳು ತಮ್ಮ ಪ್ರಮುಖ ಆಟಗಾರರನ್ನು ರಾಷ್ಟ್ರೀಯ ತಂಡಕ್ಕೆ ಬಿಟ್ಟುಕೊಡಲು ಹಿಂಜರಿದಿದ್ದವು.

ಪ್ರಬಲ ಆಟಗಾರರು ಇಲ್ಲದಿದ್ದರೂ, ಪಂದ್ಯದ ಮೊದಲಾರ್ಧದಲ್ಲಿ ಸೌದಿ ಅರೇಬಿಯಾ ತಂಡಕ್ಕೆ ಗೋಲು ಗಳಿಸಲು ಅವಕಾಶ ನೀಡದಿದ್ದುದು ತಂಡದ ಹೋರಾಟದ ಮನೋಭಾವಕ್ಕೆ ನಿದರ್ಶನವಾಯಿತು.

ಸ್ಟಿಮ್ಯಾಚ್ ಆಕ್ರೋಶ: ಭಾರತ ಫುಟ್‌ಬಾಲ್ ತಂಡದ ಆಯ್ಕೆ ಸಂದರ್ಭದಲ್ಲಿ ಜ್ಯೋತಿಷಿಯೊಬ್ಬರ ಸಲಹೆ ಪಡೆದಿರುವದಾಗಿ ಕೇಳಿಬಂದಿರುವ ವರದಿಗಳು ‘ನಾಚಿಕೆಗೇಡು’ ಎಂದು ಭಾರತ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಇಗೊರ್ ಸ್ಟಿಮ್ಯಾಚ್ ಅಕ್ರೋಶ ವ್ಯಕ್ತಪಡಿಸಿದ್ದಾರೆ. ಕೋಚ್ ಸ್ಥಾನದಲ್ಲಿ ಮುಂದುವರಿಯಬೇಕೇ, ಬೇಡವೇ ಎಂಬ ಬಗ್ಗೆ ಮುಂದಿನ 48 ಗಂಟೆಗಳಲ್ಲಿ ನಿರ್ಧರಿಸುವುದಾಗಿಯೂ ತಿಳಿಸಿದ್ದಾರೆ.

ಕ್ರೊವೇಷ್ಯಾದ ಮಾಜಿ ಆಟಗಾರನಾಗಿರುವ ಸ್ಟಿಮ್ಯಾಚ್ ಅವರು ಭಾರತ ತಂಡ ಏಷ್ಯನ್ ಕ್ರೀಡಾಕೂಟದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಸೌದಿ ಅರೇಬಿಯಾ ಎದುರು ಸೋತು ಹೊರಬಿದ್ದ ನಂತರ ಈ ಮಾತುಗಳನ್ನಾಡಿದ್ದಾರೆ.



ಏಷ್ಯನ್ ಕ್ರೀಡಾಕೂಟದ ಮಹಿಳೆಯರ ಟಿ20 ಕ್ರಿಕೆಟ್ ನಲ್ಲಿ ಚಿನ್ನದ ಪದಕ ಜಯಿಸಿದ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ನಗದು ಪುರಸ್ಕಾರ ನೀಡಿ ಗೌರವಿಸಿದರು

ಟೇಬಲ್ ಟೆನಿಸ್‌ನ ಡಬಲ್ಸ್‌ನಲ್ಲಿ ಮಿಶ್ರಫಲ

16ರ ಸುತ್ತಿಗೆ ಮಣಿಕಾ, ಶರತ್

ಹಾಂಗ್‌ಝೌ (ಪಿಟಿಐ): ಭಾರತದ ತಾರೆಗಳಾದ ಮಣಿಕಾ ಬಾತ್ರಾ, ಶರತ್ ಕಮಲ್ ಮತ್ತು ಜಿ.ಸತ್ಯನ್ ಅವರು ತಮ್ಮ ಎದುರಾಳಿಗಳ ವಿರುದ್ಧ ಅರ್ಹ ರೀತಿಯ ಜಯಪಡೆದು, ಏಷ್ಯನ್ ಗೇಮ್ಸ್ ಟೇಬಲ್ ಟೆನಿಸ್ ಸ್ಪರ್ಧೆಯ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು.

2018ರ ಕ್ರೀಡೆಗಳಲ್ಲಿ ಕಂಚಿನ ಪದಕ ಗಳಿಸಿದ್ದ ಶರತ್ ಕಮಲ್ 11–9, 11–2, 11–7, 11–7 ರಿಂದ ಮಾಲ್ಡೀವ್ಸ್‌ನ ಮೊಹಮ್ಮದ್ ಶಫಾನ್ ಇಸ್ಮಾಯಿಲ್ ಅವರನ್ನು ಸೋಲಿಸಲು ಕಷ್ಟಪಡಲಿಲ್ಲ.

ಕಳೆದ ಕ್ರೀಡೆಗಳ ತಂಡ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದ ಸತ್ಯನ್ ಕೂಡ 11–5, 11–6, 11–9, 11–2 ರಿಂದ ಸೌದಿ ಅರೇಬಿಯಾದ ತುರ್ಕಿ ಲಫಿ ಅಲ್ ಮುತೈರಿ ಅವರನ್ನು ಹಿಮ್ಮೆಟ್ಟಿಸಿದರು.

ಜಕಾರ್ತಾ ಕ್ರೀಡೆಗಳ ಮಿಕ್ಸೆಡ್ ಡಬಲ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಮಣಿಕಾ ಅವರಿಗೂ ಮಹಿಳೆಯರ ಸಿಂಗಲ್ಸ್‌ನಲ್ಲಿ ಸವಾಲು ಎದುರಾಗಲಿಲ್ಲ. ಭಾರತದ ಆಟಗಾರ್ತಿ 4–0ಯಿಂದ (11–5, 11–4, 11–3, 11–2) ನೇಪಾಳದ ನಬಿತಾ ಶ್ರೇಷ್ಠ ಅವರನ್ನು ಕೇವಲ 20 ನಿಮಿಷಗಳಲ್ಲಿ ಸೋಲಿಸಿದರು. ಅವರ ಮುಂದಿನ ಎದುರಾಳಿ ಥಾಯ್ಲೆಂಡ್‌ನ ಸುತಾಸಿನಿ ಸವೆಟ್ಟಬುತ್.


ಮಣಿಕಾ ಬಾತ್ರಾ

ಆದರೆ ಶ್ರೀಜಾ ಅಕುಲಾ ಅವರು ಉತ್ತರ ಕೊರಿಯಾದ ಸೊಂಗ್‌ಯಾಂಗ್ ಪ್ಯಾನ್ ಎದುರು 0–4 ಮುಖ ಭಂಗ ಅನುಭವಿಸಿದರು. ಸೊಂಗ್‌ಯಾಂಗ್ 11–6, 11–4, 15–13, 11–9 ರಿಂದ ಜಯಗಳಿಸಿದರು.

ಡಬಲ್ಸ್‌ನಲ್ಲೂ ಮುನ್ನಡೆ: ವನಿತೆಯರ ಡಬಲ್ಸ್‌ನಲ್ಲಿ ಶ್ರೀಜಾ – ದಿವ್ಯಾ ಚಿತಳೆ 3–0 ಯಿಂದ (11–8, 15–13, 11–6) ವಿಯೆಟ್ನಾಮಿನ ಆಟಗಾರ್ತಿಯರನ್ನು ಸೋಲಿ ಸಿದರೆ, ಸುತೀರ್ಥ ಮುಖರ್ಜಿ– ಐಹಿಕಾ ಮುಖರ್ಜಿ 3–0 ಯಿಂದ (11–7, 11–4, 11–7) ಕಜಕ ಸ್ತಾನದ ಆಟಗಾರ್ತಿಯನ್ನು (ಅನಸ್ತಾಸಿಯಾ ಲಾವ್ರೊವಾ– ಝುವಾರೆಶ್ ಅಕಶೇವಾ) ಹಿಮ್ಮೆಟ್ಟಿಸಿದರು.

ಪುರುಷರ ಡಬಲ್ಸ್‌ನಲ್ಲಿ ಮಾನವ್ ಠಕ್ಕರ್ –ಮಾನುಷ್ ಶಾ 11–8, 9–11, 11–6, 11–2 ರಿಂದ ಮಾಲ್ಡೀವ್ಸ್‌ನ ಮೊಹಮ್ಮದ್ ಶಫಾನ್ ಇಸ್ಮಾಯಿಲ್– ಮೂಷಾ ಮುನ್ಸಿಫ್ ಅಹ್ಮದ್ ಅವರನ್ನು ಸೋಲಿಸಿ 16ರ ಸುತ್ತು ತಲುಪಿದರು.

ಸತ್ಯನ್– ಶರತ್ ಜೋಡಿ 11–5, 11–3, 11–3 ರಿಂದ ಮಂಗೋಲಿಯಾದ ಸೆರ್–ಒದ್ ಗನ್ಬ್ಯಯಾಗ್ ಅವರನ್ನು ಸೋಲಿಸಲು ತೆಗೆದುಕೊಂಡಿದ್ದು 13 ನಿಮಿಷಗಳನ್ನಷ್ಟೇ.

ಮಿಕ್ಸೆಡ್ ಡಬಲ್ಸ್‌ನಲ್ಲಿ ಸೋಲು: ಮಿಕ್ಸೆಡ್ ಡಬಲ್ಸ್ ವಿಭಾಗದ ಪಂದ್ಯದಲ್ಲಿ ಭಾರತದ ಸತ್ಯನ್– ಮಣಿಕಾ 2–3 ರಲ್ಲಿ ಸಿಂಗಪುರದ ಝೆ ಯು ಕ್ಲಾರೆನ್ಸ್– ಜಿಯಾಣ್ ಝೆಂಗ್ ಅವರಿಗೆ ಮಣಿಯುವ ಮೊದಲು ಹೋರಾಟ ಪ್ರದರ್ಶಿಸಿತು. ಸಿಂಗಪುರದ ಜೋಡಿ 11–7, 11–9, 11–13, 10–12, 3–11 ರಲ್ಲಿ ಜಯಗಳಿಸಿತು. ಶ್ರೀಜಾ ಅಕುಲಾ– ಹರ್ಮೀತ್ ದೇಸಾಯಿ ಕೂಡ ಸೋತರು.

ಗಾಯದಿಂದ ಚೇತರಿಸಿಕೊಳ್ಳದ ಅಕ್ಷರ್ ಪಟೇಲ್

ವಿಶ್ವಕಪ್: ಭಾರತ ತಂಡಕ್ಕೆ ಅಶ್ವಿನ್

ನವದೆಹಲಿ (ಪಿಟಿಐ): ಆಫ್‌ಸ್ಪಿನ್– ಆಲ್‌ರೌಂಡರ್ ರವಿಚಂದ್ರನ್ ಅಶ್ವಿನ್ ಅವರನ್ನು ಮುಂದಿನ ತಿಂಗಳು ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಗುರುವಾರ ಅಂತಿಮಗೊಳಿಸಲಾದ ತಂಡವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪ್ರಕಟಿಸಿದೆ. ರೋಹಿತ್ ಶರ್ಮಾ ತಂಡವನ್ನು ಮುನ್ನಡೆಸುವರು. ಹಾರ್ದಿಕ್ ಪಾಂಡ್ಯ ಉಪನಾಯಕರಾಗಿದ್ದಾರೆ.

ಹೋದ ತಿಂಗಳು ಪ್ರಕಟಿಸಲಾಗಿದ್ದ ಸಂಭವನೀಯರ ತಂಡದಲ್ಲಿ ಎಡಗೈ ಸ್ಪಿನ್ ಆಲ್‌ರೌಂಡರ್ ಅಕ್ಷರ್ ಪಟೇಲ್ ಇದ್ದರು. ಆದರೆ ಅಶ್ವಿನ್‌ಗೆ ಸ್ಥಾನ ನೀಡಿರಲಿಲ್ಲ. ಏಷ್ಯಾ ಕಪ್ ಟೂರ್ನಿ ಸಂದರ್ಭದಲ್ಲಿ ಅಕ್ಷರ್ ಗಾಯಗೊಂಡಿದ್ದರು. ಆಗ ಅಶ್ವಿನ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಲಾಗಿತ್ತು. ಅಕ್ಷರ್ ಇಲ್ಲಿಯವರೆಗೆ ಚೇತರಿಸಿಕೊಳ್ಳದ ಕಾರಣಕ್ಕೆ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅವಕಾಶವನ್ನೂ ನೀಡಲಾಗಿದೆ.


ಅಶ್ವಿನ್

‘ಎಡಗಾಲಿನ ತೊಡೆಯ ಸ್ನಾಯುಸೆಳೆತದಿಂದ ಅವರಿನ್ನೂ ಚೇತರಿಸಿಕೊಂಡಿಲ್ಲ. ಏಷ್ಯಾಕಪ್ ಟೂರ್ನಿಯಲ್ಲಿ ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಅವರು ಗಾಯಗೊಂಡಿದ್ದರು.

ನಂತರದ ಪಂದ್ಯಗಳಲ್ಲಿ ಆಡಿರಲಿಲ್ಲ. ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ ಅವರನ್ನು ಅಕ್ಷರ್ ಬದಲಿಗೆ ಆಯ್ಕೆ ಮಾಡಲಾಗಿದೆ. ಆಸ್ಟ್ರೇಲಿಯಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿಯೂ ಅವರು ಚೆನ್ನಾಗಿ ಆಡಿದ್ದರು’ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತವು ಇದೇ 30ರಂದು ಗುವಾಹಟಿಯಲ್ಲಿ ನಡೆಯುವ ಮೊದಲ ಅಭ್ಯಾಸ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಆಡಲಿದೆ.

ತಂಡ ಹೀಗಿದೆ

ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ಆರ್. ಅಶ್ವಿನ್, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್. ಮುಖ್ಯಕೋಚ್; ರಾಹುಲ್ ದ್ರಾವಿಡ್

ಸಂಕ್ಷಿಪ್ತ ಸುದ್ದಿ

ಒಲಿಂಪಿಕ್ಸ್ ಅರ್ಹತಾ ಟೂರ್ನಿ: ಪಾಕ್ ಬದಲು ಒಮಾನ್‌ಗೆ ಆತಿಥ್ಯ

ಲುಸಾನ್ (ಸ್ವಿಜರ್ಲೆಂಡ್), (ಪಿಟಿಐ): ಪಾಕಿಸ್ತಾನದಲ್ಲಿ ಅಲ್ಲಿನ ಹಾಕಿ ಫೆಡರೇಷನ್ ಮತ್ತು ಕ್ರೀಡಾ ಮಂಡಳಿ ಮಧ್ಯೆ ಅಂತಃಕಲಹದ ಪರಿಣಾಮ ಆ ದೇಶದಲ್ಲಿ ನಡೆಯಬೇಕಾಗಿದ್ದ ಪುರುಷರ ಒಲಿಂಪಿಕ್ ಅರ್ಹತಾ ಟೂರ್ನಿಯ ಆತಿಥ್ಯವನ್ನು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಹಿಂಪಡೆದಿದೆ.

ಈ ಟೂರ್ನಿಯನ್ನು 2024ರ ಜನವರಿ 25 ರಿಂದ 21ರವರೆಗೆ ಒಮಾನ್ ರಾಜಧಾನಿ ಮಸ್ಕತ್‌ನಲ್ಲಿ ನಡೆಸುವುದಾಗಿ ಎಫ್‌ಐಎಚ್ ಹೇಳಿಕೆಯಲ್ಲಿ ಪ್ರಕಟಿಸಿದೆ.

ಇತರ ಮೂರು ಒಲಿಂಪಿಕ್ ಕ್ವಾಲಿಫೈಯರ್‌ಗಳು ಚೀನಾ (ಮಹಿಳಾ ವಿಭಾಗ, ಜ. 15ರಿಂದ 21) ಮತ್ತು ಸ್ಪೇನ್‌ನಲ್ಲಿ (ಮಹಿಳಾ ಮತ್ತು ಪುರುಷರ ವಿಭಾಗ, ಜನವರಿ 13 ರಿಂದ 21) ನಡೆಯಲಿವೆ.

ಈ ಮೇಲಿನ ಅರ್ಹತಾ ಟೂರ್ನಿಗಳಿಂದ ಪುರುಷರ ಮತ್ತು ಮಹಿಳಾ ವಿಭಾಗ ಗಳಲ್ಲಿ ತಲಾ ಆರು ತಂಡಗಳು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿವೆ. ಒಷಾ ನಿಯಾ ಮತ್ತು ಯುರೋಪ್ ವಲಯಗಳ ಅರ್ಹತಾ ಟೂರ್ನಿ ಈಗಾಗಲೇ ನಡೆದಿದೆ.

ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಭಾರತ

ನವದೆಹಲಿ: ಭಾರತದ ಬ್ಯಾಡ್ಮಿಂಟನ್ ತಂಡವು ಅಮೆರಿಕದಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದೆ.

ಬುಧವಾರ ರಾತ್ರಿ ನಡೆದ ಗುಂಪು ಹಂತದ ಅಂತಿಮ ಪಂದ್ಯದಲ್ಲಿ ಭಾರತದ ಯುವ ಆಟಗಾರರು 4–1ರಿಂದ ಜರ್ಮನಿಯ ಆಟಗಾರರನ್ನು ಮಣಿಸಿ, ಮುಂದಿನ ಸುತ್ತು ಪ್ರವೇಶಿಸಿದರು.

‘ಡಿ’ ಗುಂಪಿನಲ್ಲಿರುವ ಭಾರತವು ಮೊದಲ ಪಂದ್ಯದಲ್ಲಿ ಕುಕ್ ಐಲ್ಯಾಂಡ್ಸ್ ತಂಡವನ್ನು, ಎರಡನೇ ಪಂದ್ಯದಲ್ಲಿ ಬ್ರೆಜಿಲ್ ತಂಡವನ್ನು ಮಣಿಸಿತ್ತು.

ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಎಂಟರ ಘಟ್ಟಕ್ಕೆ ಪ್ರವೇಶಿಸಿರುವ ಭಾರತ, ಮುಂದಿನ ಪಂದ್ಯದಲ್ಲಿ ಮಲೇಷ್ಯಾ ತಂಡವನ್ನು ಎದುರಿಸಲಿದೆ.

ಎಂಇಜಿ ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–0 ಯಿಂದ ಬಿಯುಎಫ್‌ಸಿ ವಿರುದ್ಧ ಜಯ ಸಾಧಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಎಂಇಜಿ ಪರವಾಗಿ ಆಯುಷ್ (43ನೇ ನಿ), ಶರತ್ ನಾರಾಯಣನ್ (86ನೇ), ಶೇಖ್ ಮುಜೀಬ್ (86ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 1–0 ಯಿಂದ ಎಚ್‌ಎಎಲ್ ಎಫ್‌ಸಿ ತಂಡವನ್ನು ಮಣಿಸಿತು. ರೂಟ್ಸ್ ಪರ ಆರ್. ವಿಶಾಲ್ (46ನೇ) ಚೆಂಡನ್ನು ಗುರಿ ಸೇರಿಸಿದರು.

ರಾಜ್ಯ ಜೂನಿಯರ್, ಯೂತ್ ಅಥ್ಲೆಟಿಕ್ಸ್: ಸಾಧನೆ ಉತ್ತಮಪಡಿಸಿಕೊಂಡ ವೈಭವ್, ಶಿವಾಜಿ

ಜಾವೆಲಿನ್, ಶಾಟ್‌ಪಟ್‌ನಲ್ಲಿ ಕೂಟ ದಾಖಲೆ

• ವಿಕ್ರಂ ಕಾಂತಿಕೆರೆ

ಮಂಗಳೂರು: ಜಿಟಿ ಜಿಟಿ ಮಳೆಯ ನಡುವೆಯೇ ಬೆಳಗ್ಗಿನ ಹದವಾದ ಚಳಿಯ ವಾತಾವರಣಕ್ಕೆ ಅಮೋಘ ಓಟದ ಮೂಲಕ ರಂಗು ತುಂಬಿದ ಯಾದ ಗಿರಿಯ ವೈಭವ್ ಮಾರುತಿ ಪಾಟೀಲ 10 ಸಾವಿರ ಮೀಟರ್ಸ್ ಓಟದಲ್ಲಿ ತಮ್ಮದೇ ದಾಖಲೆ ಮುರಿದು ಚಿನ್ನದ ಪದಕ ಕೊರಳಿಗೇರಿಸಿಕೊಂಡರು.

ರಾಜ್ಯ ಮತ್ತು ಜಿಲ್ಲಾ ಅಥ್ಲೆಟಿಕ್ ಸಂಸ್ಥೆಗಳು ನಗರದ ಮಂಗಳಾ ಕ್ರೀಡಾಂಗಣದಲ್ಲಿ ಆಯೋಜಿಸಿರುವ ರಾಜ್ಯ ಜೂನಿಯರ್ ಮತ್ತು ಯೂತ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 23 ವರ್ಷದೊಳಗಿನ ಪುರುಷರ ವಿಭಾಗದಲ್ಲಿ ವೈಭವ್ ದಾಖಲೆಯ ಬೆನ್ನಲ್ಲೇ 20 ವರ್ಷದೊಳಗಿನ ಪುರುಷರ 10 ಸಾವಿರ ಮೀಟರ್ಸ್ ಓಟದಲ್ಲಿ ಹಾವೇರಿಯ ಶಿವಾಜಿ ಪರಶುರಾಮ್ ಕೂಡ ತಮ್ಮದೇ ದಾಖಲೆ ಮುರಿದರು. 16 ವರ್ಷದೊಳಗಿನ ಬಾಲಕರ ಶಾಟ್‌ಪಟ್‌ನಲ್ಲಿ ಉಡುಪಿಯ ಅನುರಾಗ್ ಜಿ, 20 ವರ್ಷದೊಳಗಿನ ಪುರುಷರ ಜಾವೆಲಿನ್ ಥ್ರೋದಲ್ಲಿ ಬೆಳಗಾವಿಯ ಶಶಾಂಕ್ ಪಾಟೀಲ್ ದಾಖಲೆ ಬರೆದರು.

ಮೊಗವೀರ ವ್ಯವಸ್ಥಾಪನ ಮಂಡಳಿ ಮತ್ತು ಮಂಗಳೂರು ಯಾಂತ್ರಿಕ ಮೀನುಗಾರರ ಪ್ರಾಥಮಿಕ ಸಹಕಾರಿ ಸಂಘ, ಲೋಕನಾಥ ಬೋಳಾರ್ ಸ್ಮರಣಾರ್ಥ ಕ್ರೀಡಾಕೂಟವನ್ನು ಪ್ರಾಯೋಜಿಸಿದೆ.

ಎರಡನೇ ದಿನದ ಫಲಿತಾಂಶಗಳು (ಚಿನ್ನ ಮಾತ್ರ): **ಪುರುಷರ ವಿಭಾಗ:** 23 ವರ್ಷದೊಳಗಿನವರು: 100 ಮೀ: ಶಶಾಂಕ್ ವಿರೂಪಾಕ್ಷಪ್ಪ ಅಂಗಡಿ (ಹಾವೇರಿ) ಕಾಲ:10.71 ಸೆ; 10000 ಮೀ: ವೈಭವ್ ಮಾರುತಿ ಪಾಟೀಲ (ಯಾದಗಿರಿ) ಕಾಲ: 32 ನಿ, 17 ಸೆ (ಕೂಟ ದಾಖಲೆ; ಹಿಂದಿನ ದಾಖಲೆ: ವೈಭವ್ ಮಾರುತಿ ಪಾಟೀಲ: 32ನಿ 39 ಸೆ); ಟ್ರಿಪಲ್ ಜಂಪ್: ಜಾಫರ್ ಖಾನ್ ಮೊಹಮ್ಮದ್ (ಬೆಳಗಾವಿ) ಅಂತರ: 14.59 ಮೀ; ಶಾಟ್‌ಪಟ್: ರಾಹುಲ್ ಕಶ್ಯಪ್ (ಮೈಸೂರು) ದೂರ: 16.23 ಮೀ,; ಜಾವೆಲಿನ್ ಥ್ರೋ: ಅಭಿನಂದನ್ ಎಸ್ (ಉತ್ತರ ಕನ್ನಡ) ದೂರ: 56.28 ಮೀ. 20 ವರ್ಷದೊಳಗಿನವರ 100 ಮೀ: ಆರ್ಯನ್ ಮನೋಜ್ (ಬೆಂಗಳೂರು) ಕಾಲ: 10.84 ಸೆ,; 10000 ಮೀ: ಶಿವಾಜಿ ಪರಶುರಾಮ್ (ಹಾವೇರಿ) ಕಾಲ: 30 ನಿ, 34.90 ಸೆ (ಕೂಟ ದಾಖಲೆ; ಹಳೆಯ ದಾಖಲೆ: ಶಿವಾಜಿ ಪರಶುರಾಮ್: 31ನಿ 34.3ಸೆ); ಹೈಜಂಪ್: ಸುದೀಪ್ (ಶಿವಮೊಗ್ಗ) ಎತ್ತರ: 1.90 ಮೀ; ಟ್ರಿಪಲ್ ಜಂಪ್: ಪವನ್ ಶೇಖರ್ (ಮೈಸೂರು) ಅಂತರ: 13.89 ಮೀ; ಶಾಟ್‌ಪಟ್: ಮೌರ್ಯ ಗಣಪತಿ (ಮೈಸೂರು) ದೂರ: 15.53 ಮೀ; ಜಾವೆಲಿನ್ ಥ್ರೋ: ಶಶಾಂಕ್ ಪಾಟೀಲ (ಬೆಳಗಾವಿ) ದೂರ: 70.2 ಮೀ (ಕೂಟ ದಾಖಲೆ. ಹಳೆಯ ದಾಖಲೆ: ಮನು ಡಿ.ಪಿ.: ದೂರ: 66.82 ಮೀ); ಬಾಲಕರು: 18 ವರ್ಷದೊಳಗಿನವರು: 100 ಮೀ: ಮುತ್ತಣ್ಣ ಕೆ.ವೈ (ಶಿವಮೊಗ್ಗ) ಕಾಲ: 11.10,; 3000 ಮೀ: ಖುಷಿ ಸಾಲಿಯಾನ್ (ದ.ಕ.) ಕಾಲ: 9ನಿ 22.71ಸೆ; ಹೈಜಂಪ್: ಆದರ್ಶ್ ಶೆಟ್ಟಿ (ದ.ಕ.) ಎತ್ತರ: 1.85 ಮೀ; ಟ್ರಿಪಲ್ ಜಂಪ್: ಪುನೀತ್ ಎಸ್. (ಕೊಡಗು) ಅಂತರ: 13.44ಮೀ,; ಶಾಟ್‌ಪಟ್: ಆಕಾಶ್ ಸುಂದರ್ (ದ.ಕ.) ದೂರ: 15.86 ಮೀ; ಜಾವೆಲಿನ್ ಥ್ರೋ: ಕುಲದೀಪ್ ಕುಮಾರ್ (ಉಡುಪಿ) ದೂರ: 52.99 ಮೀ; 16 ವರ್ಷದೊಳಗಿನವರು: 100 ಮೀ: ಸಾವಿನ್ ತಿಂಗಳಾಯ (ಉಡುಪಿ) ಕಾಲ: 11.21 ಸೆ.; ಶಾಟ್‌ಪಟ್: ಅನುರಾಗ್ ಜಿ. (ಉಡುಪಿ) ದೂರ: 16.86 ಮೀ. (ಕೂಟ ದಾಖಲೆ. ಹಳೆಯ ದಾಖಲೆ: ಗಣೇಶ್ ಎಚ್.ನಾಯಕ್: 15.68 ಮೀ).

ಮಹಿಳಾ ವಿಭಾಗ: 23 ವರ್ಷದೊಳಗಿನವರು: 100 ಮೀ. ಕೀರ್ತನಾ ಎಸ್ (ಉಡುಪಿ) ಕಾಲ: 12.22 ಸೆ; 10000 ಮೀ: ನಾಗಶ್ರೀ ಎಚ್.ಎನ್ (ಶಿವಮೊಗ್ಗ) ಕಾಲ: 42ನಿ 52.30 ಸೆ; ಜಾವೆಲಿನ್ ಥ್ರೋ: ಶ್ರಾವ್ಯ (ಉಡುಪಿ) ದೂರ: 39.8 ಮೀ; 20 ವರ್ಷದೊಳಗಿನವರು: 100 ಮೀ: ನೊಯೆಲಿ ಅನಾ ಕೋರ್ನೆಲಿ (ಬೆಂಗಳೂರು) ಕಾಲ: 11.94 ಸೆ,; 3000 ಮೀ: ಆರಾಧನಾ (ಬೆಂಗಳೂರು) ಕಾಲ: 9 ನಿ 54.81 ಸೆ; ಹೈಜಂಪ್: ಪವನಾ ನಾಗರಾಜ್ (ಶಿವಮೊಗ್ಗ) ಎತ್ತರ: 1.65 ಮೀ; ಟ್ರಿಪಲ್ ಜಂಪ್: ಭೂಮಿಕಾ ಕೆ.ಎನ್. (ಶಿವಮೊಗ್ಗ) ಅಂತರ: 11.66 ಮೀ; ಶಾಟ್‌ಪಟ್: ಬೃಂದಾ ಎಸ್.ಗೌಡ (ಮೈಸೂರು) ದೂರ: 13.5; ಜಾವೆಲಿನ್ ಥ್ರೋ: ರಮ್ಯಶ್ರೀ ಜೈನ್ (ದ.ಕ.) ದೂರ: 40.63 ಮೀ;

ಬಾಲಕಿಯರು: 18 ವರ್ಷದೊಳಗಿನವರು: 100 ಮೀ: ಸ್ತುತಿ ಶೆಟ್ಟಿ (ಉಡುಪಿ) ಕಾಲ: 12.62 ಸೆ; 3000 ಮೀ: ಪ್ರಣತಿ (ಬೆಂಗಳೂರು) ಕಾಲ: 10ನಿ 37.50 ಸೆ.; ಹೈಜಂಪ್: ಗೌತಮಿ (ಶಿವಮೊಗ್ಗ) ಎತ್ತರ: 1.63 ಮೀ.; ಟ್ರಿಪಲ್ ಜಂಪ್: ಅದಿತಿ ವಿನಾಯಕ್ (ಬೆಳಗಾವಿ) ಅಂತರ: 10.26ಮೀ; ಶಾಟ್‌ಪಟ್: ಐಶ್ವರ್ಯಾ ಬೆಂಡಿಗೇರಿ (ದ.ಕ.) ದೂರ: 11.9 ಮೀ.; ಜಾವೆಲಿನ್ ಥ್ರೋ: ದಿಶಾ ನೆಲ್ವಾಡೆ (ಬೀದರ್) ದೂರ: 39.97 ಮೀ.; 16 ವರ್ಷದೊಳಗಿನವರು: 100 ಮೀ: ಸಿರಿ ಎನ್ (ರಾಮನಗರ) ಕಾಲ: 13.26 ಸೆ; ಹೈಜಂಪ್: ಹರ್ಷಿತಾ ಪಿ (ಬೆಂಗಳೂರು) ಎತ್ತರ: 1.44 ಮೀ; ಶಾಟ್‌ಪಟ್: ಶ್ರೀಮಾಯಿ ಕುಲಕರ್ಣಿ (ಬೆಂಗಳೂರು) ದೂರ: 10.50 ಮೀ; ಜಾವೆಲಿನ್ ಥ್ರೋ: ಅಹರ್ನಿಶಿ (ಬೆಂಗಳೂರು) ದೂರ: 22.37 ಮೀ.


16 ವರ್ಷದೊಳಗಿನ ಬಾಲಕರ ಶಾಟ್‌ಪಟ್‌ನಲ್ಲಿ ದಾಖಲೆ ಮಾಡಿದ ಅನುರಾಗ್ ಜಿ ಸಂಭ್ರಮ – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್‌ಎಚ್